
ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 02
ಜನವರಿ 13, 2013

ಪುಟ 16 ರೂ. 10/





ಬಿಜೆಪಿ–ಕೆಜೆಪಿ ಕಿತ್ತಾಟ ಸೊರಗಿದ ಆಡಳಿತ





ನಗದು ನೇರ ವರ್ಗಾವಣೆ ಎಂಬ ಮಹಾಮೋಸ

ಮಹಿಳೆಯರ ಮೇಲಿನ ಹೀನಾಯ ದೌರ್ಜನ್ಯಗಳು : ಭುಗಿಲೆದ್ದ ಆಕ್ರೋಶ

ಬೆಲೆ ಕುಸಿತ : ಹಾಲು ಉತ್ಪಾದಕರು ವಿಧಾನಸೌಧದತ್ತ

ರಾಬರ್ಟ್ ಕ್ಲೈವ್ : ಸಮಕಾಲೀನ ರಾಜಕೀಯ ನಾಟಕ





ತಾಲಿಬಾನ್‌ಗೆ ಅಫಘಾನಿಸ್ತಾನ ಹಸ್ತಾಂತರ?

ಪಂಡಿತ್ ರವಿಶಂಕರ್ ಕಾಮ್ರೇಡ್ ರೊಬುದಾ ಆಗಿದ್ದಾಗ

ಡಿಸೆಂಬರ್ 11 ರಂದು ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದ ಪ್ರಖ್ಯಾತ ಸಿತಾರ್ ವಾದಕ ಪಂಡಿತ್ ರವಿಶಂಕರ್ ಬಗ್ಗೆ ಮಾಧ್ಯಮಗಳಲ್ಲಿ ಬಹಳಷ್ಟು ಬಂದಿದೆ. ಆದರೆ ಅವರು ಆರು ದಶಕಗಳ ಹಿಂದೆ ಭಾರತದಲ್ಲಿ ಪ್ರಗತಿಪರ, ಜನಪರ ಸಾಂಸ್ಕೃತಿಕ ಚಳುವಳಿಯನ್ನು ಆರಂಭಿಸಿದ 'ಇಪ್ಟಾ'(ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್)ದಲ್ಲಿ ಸಂಗೀತ ನಿರ್ದೇಶಕರಾಗಿದ್ದರು ಎಂಬ ಸಂಗತಿ ಬಹಳ ಮಂದಿಗೆ ತಿಳಿದಿಲ್ಲ.

1945 ರಲ್ಲಿ ರವಿಶಂಕರ್ ಮುಂಬೈಯಲ್ಲಿದ್ದಾಗ ಅವರು ಹತ್ತಿರದಲ್ಲೇ ಇದ್ದ ಇಪ್ಟಾದ ಕಲಾವಿದರ 'ಕಮ್ಯೂನ್' ಗೆ ಭೇಟಿ ನೀಡುತ್ತಿದ್ದರು. 'ಇಪ್ಟಾ'ದ ಸದಸ್ಯರು ಅವರನ್ನು ರೊಬುದಾ ಎಂದು ಕರೆಯುತ್ತಿದ್ದರು. ಇಕ್ಬಾಲ್‌ರವರ ಪ್ರಖ್ಯಾತ 'ಸಾರೇ ಜಹಾಂಸೆ ಅಚ್ಛಾ ಹಿಂದೂಸ್ತಾಂ ಹಮಾರಾ' ಹಾಡಿಗೆ ಸಂಗೀತ ನೀಡುವಂತೆ 'ಇಪ್ಟಾದವರು ಕೇಳಿದಾಗ ತಕ್ಷಣ ಒಪ್ಪಿಕೊಂಡ ಅವರು ನೀಡಿದ ಸಂಗೀತ 'ಇಪ್ಟಾ'ದ ಎಲ್ಲ ಸದಸ್ಯರಲ್ಲಿ ಹೊಸ ಹುರುಪು ತುಂಬಿತಂತೆ. ಬಹಳಕಾಲ ಇದು 'ಇಪ್ಟಾ'ದ ಕಾರ್ಯಕ್ರಮಗಳಲ್ಲಿ ಆರಂಭಿಕ ಹಾಡಾಗಿರುತ್ತಂತೆ. ರವಿಶಂಕರ್ ಸೇರಿದಂತೆ ದೇಶಾದ್ಯಂತ ಆಗಿನ ಹಲವಾರು ಕಲಾವಿದರನ್ನು 'ಇಪ್ಟಾ'ಕ್ಕೆ, ಪ್ರಗತಿಪರ ಸಾಂಸ್ಕೃತಿಕ ಆಂದೋಲನಕ್ಕೆ ಅದು ಸೆಳೆಯುವಲ್ಲಿ ಮುಖ್ಯ ಪಾತ್ರ ವಹಿಸಿತು ಎನ್ನಲಾಗಿದೆ.

'ಕಾಮ್ರೇಡ್ ರೊಬುದಾ' 1946ರಲ್ಲಿ ವಿಧ್ಯುಕ್ತವಾಗಿ 'ಇಪ್ಟಾ'ವನ್ನು ಸೇರಿದರು. 'ಇಪ್ಟಾ' ದೇಶದೆಲ್ಲೆಡೆಗಳಿಂದ ಜಾನಪದ ಸಂಗೀತದಿಂದ ಬಹಳಷ್ಟು ಅಳವಡಿಸಿಕೊಳ್ಳುತ್ತಿತ್ತು. ರವಿಶಂಕರ್ 'ಇಪ್ಟಾ'ದ 'ಅಮರ ಭಾರತ' ಎಂಬ ಸಂಗೀತ ರೂಪಕದ ಸಂಗೀತ ನಿರ್ದೇಶಕರಾಗಿ ನಡೆಸಿದ ಜಾನಪದ ಮತ್ತು ಶಾಸ್ತ್ರೀಯ ಸಂಗೀತದ ಸಮಾಗಮದ ಪ್ರಯೋಗ ಆ ಬ್ಯಾಲೆಯನ್ನು ಉನ್ನತ ಮಟ್ಟಕ್ಕೆ ಏರಿಸಿತು ಎಂದು ಆಗ 'ಇಪ್ಟಾ'ದಲ್ಲಿ ಸಕ್ರಿಯರಾಗಿದ್ದ ಪ್ರೀತಿ ಸರ್ಕಾರ್ ನೆನಪಿಸಿಕೊಂಡಿದ್ದಾರೆ. 'ಇಪ್ಟಾ' ಮತ್ತು ಪ್ರಗತಿಪರ ಲೇಖಕರ ಸಂಘ ಭಾರತದಲ್ಲಿ ಕಲೆಗಳಲ್ಲಿ ಆಧುನಿಕತೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾಗ ಅದರಲ್ಲಿ ರವಿಶಂಕರ್‌ರವರೂ ಮಹತ್ವದ ಪಾತ್ರ ವಹಿಸಿದವರು.

"ಒಬ್ಬ ಸಂವೇದನಾಶೀಲ ಸಂಗೀತಗಾರನಾಗಿ ನನಗೆ ನಮ್ಮ ದೇಶದಲ್ಲಿ ನಡೆಯತ್ತಿರುವ ಘಟನೆಗಳಿಂದ ಆಳವಾದ ನೋವಾಗುತ್ತಿದೆ. ಈ ಕರ್ಕಶ ಅಪಸ್ವರಗಳು ನಿಲ್ಲಲೇ ಬೇಕು. ನಮ್ಮ ಜನಗಳ ನಡುವೆ ಮತ್ತೆ ವಿವೇಕ ಮತ್ತು ಸಾಮರಸ್ಯವನ್ನು ತರಲು ಕೈಲಾದ್ದನ್ನೆಲ್ಲ ನಮ್ಮದೇ ರೀತಿಯಲ್ಲಿ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯ"–ಎಂದಿದ್ದರು ಪಂಡಿತ್ ರವಿಶಂಕರ್ 1991 ಮತ್ತು 1992ರಲ್ಲಿ ದಿಲ್ಲಿ ಮತ್ತು ಮುಂಬೈಯಲ್ಲಿ ನಡೆದ 'ಸಹಮತ್'ನ 'ಕೋಮುವಾದದ ವಿರುದ್ಧ ಕಲಾವಿದರು' ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ. 1940ರ ದಶಕದಲ್ಲಿ ಎಡಪಂಥೀಯ ಪ್ರಗತಿಪರ ಸಾಂಸ್ಕೃತಿಕ ಆಂದೋಲನದಿಂದ ಮೈಗೂಡಿಸಿಕೊಂಡಿದ್ದ ಮಾನವೀಯ ಮೌಲ್ಯಗಳವು.



'ಇಪ್ಟಾ'ದ ಚಲನಚಿತ್ರಗಳಾದ ಕೆ.ಎ.ಅಬ್ಬಾಸ್‌ರವರ 'ಧರ್ತಿ ಕೆ ಲಾಲ್' (ಭೂಮಿಪುತ್ರರು) ಮತ್ತು ಚೇತನ್ ಆನಂದ್‌ರವರ 'ನೀಚಾ ನಗರ್'(ಮ್ಯಾಕ್ಸಿಮ್ ಗಾರ್ಕಿಯವರ 'ಲೋಯರ್ ಡೆಪ್ತ್ಸ್' ಆಧಾರಿತ)ಗೆ ಸಂಗೀತ ನೀಡಿದ್ದು ರವಿಶಂಕರ್ ಅವರೇ. ಇದು ಸತ್ಯಜಿತ್ ರಾಯ್‌ರನ್ನು ಪ್ರಖ್ಯಾತಿಗೆ ತಂದ 'ಪಥೇರ್ ಪಾಂಚಾಲಿ'ಗೆ ಸಂಗೀತ ನೀಡಿ ರವಿಶಂಕರ್ ಅವರೂ ಬೆಳಕಿಗೆ ಬಂದ ಒಂದು ದಶಕದ ಮೊದಲೇ.

'ಇಪ್ಟಾ' ದಲ್ಲಿ ಅವರು ಮೈಗೂಡಿಸಿಕೊಂಡ ಈ ಪರಂಪರೆಯೇ ಅವರನ್ನು 1971 ರಲ್ಲಿ ನ್ಯೂಯಾರ್ಕಿನ ಮ್ಯಾಡಿಸನ್ ಸ್ಕೇರ್ ಗಾರ್ಡನ್‌ನಲ್ಲಿ ಆಗ ನಡೆಯುತ್ತಿದ್ದ ಬಾಂಗ್ಲಾದೇಶದ ವಿಮೋಚನಾ ಸಮರಕ್ಕೆ ಬೆಂಬಲವಾಗಿ ನಡೆದ ಸಂಗೀತೋತ್ಸವದಲ್ಲಿ ಭಾಗವಹಿಸುವಂತೆ ಮಾಡಿತು. ಇದು ಅವರೊಂದಿಗೆ ಅವರ ಭಾವ-ಮೈದುನ ಅಲಿ ಅಕ್ಬರ್ ಖಾನ್, ಬೀಟಲ್ಸ್ ಖ್ಯಾತಿಯ ಗಿಟಾರ್‌ವಾದಕ ಹ್ಯಾರಿಸನ್ ಮತ್ತು ಹಲವು ಪ್ರಸಿದ್ಧ ರಾಕ್ ಸಂಗೀತಗಾರರು ಭಾಗವಹಿಸಿದ್ದ ಒಂದು ಅಪೂರ್ವ ಸಂಗೀತೋತ್ಸವ. 20 ನೇ ಶತಮಾನದ ಸಾಮಾಜಿಕ ಮತ್ತು ಕಲಾತ್ಮಕ ಪಲ್ಲಟಗಳಲ್ಲಿ ಈ ಸಂಗೀತೋತ್ಸವ ಒಂದು ಮೈಲಿಗಲ್ಲು ಎಂದು ದಾಖಲಾಗಿದೆ.

ಎರಡು ದಶಕಗಳ ನಂತರ ಮತ್ತೊಮ್ಮೆ ಅವರ ಈ ಬದ್ಧತೆಯ ಭಾವ ಪ್ರದರ್ಶನಗೊಂಡದ್ದು ಬಾಬ್ರಿ ಮಸೀದಿ ಧ್ವಂಸಕ್ಕೆ ಕಾರಣವಾದ ಕೋಮುವಾದೀ ಪ್ರಚಾರದ ವಿರುದ್ಧ ಜಾತ್ಯಾತೀತ ಶಕ್ತಿಗಳ ಆಂದೋಲನದ ಸಂದರ್ಭದಲ್ಲಿ. ಅವರು ಭಾರತದ ಸಮ್ಮಿಶ್ರ ಸಂಸ್ಕೃತಿಯ ಜ್ವಲಂತ ಉದಾಹರಣೆಯಾದರು:

"ಒಬ್ಬ ಸಂವೇದನಾಶೀಲ ಸಂಗೀತಗಾರನಾಗಿ ನನಗೆ ನಮ್ಮ ದೇಶದಲ್ಲಿ ನಡೆಯತ್ತಿರುವ ಘಟನೆಗಳಿಂದ ಆಳವಾದ ನೋವಾಗುತ್ತಿದೆ. ಈ ಕರ್ಕಶ ಅಪಸ್ವರಗಳು ನಿಲ್ಲಲೇ ಬೇಕು. ನಮ್ಮ ಜನಗಳ ನಡುವೆ ಮತ್ತೆ ವಿವೇಕ ಮತ್ತು ಸಾಮರಸ್ಯವನ್ನು ತರಲು ಕೈಲಾದ್ದನ್ನೆಲ್ಲ ನಮ್ಮದೇ ರೀತಿಯಲ್ಲಿ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯ"–1991 ಮತ್ತು 1992ರಲ್ಲಿ ದಿಲ್ಲಿ ಮತ್ತು ಮುಂಬೈಯಲ್ಲಿ ನಡೆದ 'ಸಹಮತ್'ನ 'ಕೋಮುವಾದದ ವಿರುದ್ಧ ಕಲಾವಿದರು' ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಅವರ ಹೃದಯದ ನುಡಿಗಳಿವು.

ಅವರ ಈ ಮಾನವೀಯ ಭಾವ ಮತ್ತು ವಿಶ್ವದ ಎಲ್ಲ ಸಂಗೀತ ಮತ್ತು ಸಂಸ್ಕೃತಿಗಳಿಗೆ ತೆರೆದಿಟ್ಟ ಮನ ಅವರನ್ನು ನಿಜವಾಗಿಯೂ ವಿಶ್ವ ನಾಗರಿಕನಾಗಿಸಿದೆ ಎಂದು 'ಸಹಮತ್' ಶ್ರದ್ಧಾಂಜಲಿ ಅರ್ಪಿಸಿದೆ.

ಚಳುವಳಿ ಮುಂದುವರೆಸುವ ನಿರ್ಧಾರ

ಸಿಪಿಐ(ಎಂ) ಮತ್ತು ಸಿಪಿಐ ಮುಖಂಡರು ಸಭೆ ಸೇರಿ ಎಡ ಪಕ್ಷಗಳು ಅಖಿಲ ಭಾರತ ಮಟ್ಟದದಲ್ಲಿ ಆಹಾರ ಭದ್ರತಾ ಹಕ್ಕಿಗಾಗಿ ಹಮ್ಮಿಕೊಂಡಿರುವ ಸಹಿ ಸಂಗ್ರಹ ಚಳುವಳಿ, 2013ರ ಫೆಬ್ರವರಿ 20 ಮತ್ತು 21ರ ಕೈಗಾರಿಕಾ ಮುಷ್ಕರ ಯಶಸ್ವಿಗೊಳಿಸಲು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳು ಪರಸ್ಪರ ವಿರುದ್ಧವಾಗಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದಂತೆ ಮುತುವರ್ಜಿವಹಿಸಲೂ ತೀರ್ಮಾನಿಸಿವೆ. ಜನವರಿ 10 ರಿಂದ 16ರ ವರೆಗೆ ಜಿಲ್ಲಾ/ತಾಲ್ಲೂಕು ಕೇಂದ್ರಗಳು ಸಾರ್ವಜನಿಕ ಸ್ಥಳಗಳಲ್ಲಿ ಶಾಮಿಯಾನ ಹಾಕಿ ಜಂಟಿಯಾಗಿ ಸಹಿ ಸಂಗ್ರಹ ಮಾಡಲು ನಿರ್ಧರಿಸಲಾಗಿದೆ.

ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ಕಾರ್ಷಿಕ ರಂಗದ ಸಂಘಟನೆಗಳು ನವೆಂಬರ್ 5ರಂದು ನಡೆಸಿದ 'ಬಂಧನಕ್ಕೆ ಒಳಗಾಗುವ ಚಳುವಳಿ' ಜನತೆಯ ಜ್ವಲಂತ ಪ್ರಶ್ನೆಗಳನ್ನು ಎತ್ತಿಕೊಂಡು ರಾಜ್ಯ ಸಿಪಿಐ(ಎಂ) ನಡೆಸಲು ಸಾಧ್ಯವಾದ ಒಂದು ಉತ್ತಮ ಮಧ್ಯ ಪ್ರವೇಶವಾಗಿತ್ತು. ರಾಜ್ಯಾದ್ಯಂತ ಸುಮಾರು 40 ಸಾವಿರ ಬಡ ರೈತರು, ಕೃಷಿ ಕೂಲಿಕಾರರು ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಚಳುವಳಿಯ ಪರಿಣಾಮವಾಗಿ ರಾಜ್ಯ ಸರ್ಕಾರ ಭೂ ಕಂದಾಯ ಕಾಯ್ದೆಯನ್ನು ತಿದ್ದುಪಡಿ ಮಾಡಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಸತಿಹೀನರು ಸರ್ಕಾರಿ ಭೂಮಿಯಲ್ಲಿ ಕಟ್ಟಿರುವ ಅನಧೀಕೃತ ಮನೆಗಳನ್ನು ಸಕ್ರಮಗೊಳಿಸಿ ಹಕ್ಕುಪತ್ರಗಳನ್ನು ವಿತರಿಸಲು ತೀರ್ಮಾನಮಾಡಿದೆ. ಎಲ್ಲಾ ನಿವೇಶನರಹಿತರಿಗೆ ನಿವೇಶನಗಳನ್ನು ವಿತರಿಸಬೇಕು ಮತ್ತು ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಬೇಕು ಹಾಗು 2006ರ ಅರಣ್ಯ ಕಾಯ್ದೆಯನ್ನು ತಿದ್ದುಪಡಿ ಮಾಡಿ ಆದಿವಾಸಿಗಳಿಗೆ ಮತ್ತು ಇತರ ಭೂಹೀನರಿಗೆ ಅರಣ್ಯ ಭೂಮಿ ಹಕ್ಕು ದೊರಕುವಂತೆ ಮಾಡಬೇಕು ಮುಂತಾದ ಬೇಡಿಕೆಗಳಿಗಾಗಿ ಹಂತಹಂತವಾಗಿ ಚಳುವಳಿಯನ್ನು ತೀವ್ರಗೊಳಿಸುವುದು ಆಗಬೇಕಾಗಿದೆ.

ಮಡೆ ಸ್ನಾನ-ಪಂಕ್ತಿ ಬೇಧದ ವಿರುದ್ಧ ಚಳುವಳಿ ಮುಂದುವರಿಕೆಗೆ ನಿರ್ಧಾರ

ಮೂಢನಂಬಿಕೆ-ಜಾತಿ ತಾರತಮ್ಯದ ವಿರುದ್ಧದ ಹೋರಾಟದ ಭಾಗವಾಗಿ ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ಚಾಲ್ತಿಯಲ್ಲಿರುವ ಮಡೇಸ್ನಾನ ಹಾಗೂ ಉಡುಪಿ ಕೃಷ್ಣ ಮಠದಲ್ಲಿ ಚಾಲ್ತಿಯಲ್ಲಿರುವ ಪಂಕ್ತಿಬೇದ ಪದ್ಧತಿಗಳನ್ನು ನಿಷೇಧಿಸಬೇಕೆಂದು ಆಗ್ರಹಿಸಿ ನಾವು ನಡೆಸಿದ ಜನ ಜಾಗೃತಿ ವಾಹನ ಹಾಗೂ ಕಾಲ್ನಡಿಗೆ ಜಾಥಗಳು ಹಾಗೂ ಉಡುಪಿಯಲ್ಲಿ ನಡೆಸಲಾದ ಪ್ರತಿಭಟನೆ ಒಂದು ಗಮನಾರ್ಹ ಹೋರಾಟವಾಗಿತ್ತು. ಪ್ರತಿಭಟನಾಕಾರರ ಮೇಲೆ ಸುಳ್ಳು ಮೊಕದ್ದಮೆ ಹೂಡಲಾದ ವಿಷಯದಲ್ಲಿ ರಾಜ್ಯ ಬಿಜೆಪಿ ಸರ್ಕಾರ ವಿಶೇಷ ಮುತುವರ್ಜಿವಹಿಸಿರುವುದು ಎದ್ದು ಕಾಣುತ್ತಿದೆ. ಮುಖಂಡರ ಮೇಲೆ ಇನ್ನೂ ತೀವ್ರತರವಾದ ಸುಳ್ಳು ಆರೋಪಗಳನ್ನು ಹೊರಿಸುವ ಪ್ರಯತ್ನ ನಡೆಯಬಹುದು. ಸರ್ಕಾರದ ಈ ದಮನಕಾರಿ ನೀತಿಯನ್ನು ವ್ಯಾಪಕವಾಗಿ ಜನರ ನಡುವೆ ಬಯಲಿಗೆಳೆಯುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಬೇಕಾಗಿದೆ. ಉಡುಪಿಯಲ್ಲಿ ಪೊಲೀಸರು ನಡೆಸಿದ ದೌರ್ಜನ್ಯವನ್ನು ಖಂಡಿಸಿ ಸಕಲ [illegible] ಘಟಕಗಳು ಮತ್ತು ಸಾಮೂಹಿಕ ಸಂಘಟನೆಗಳು ಮರುದಿನವೇ ಪ್ರತಿಭಟನೆಗಳನ್ನು ಏರ್ಪಡಿಸಿದ್ದು ಸ್ವಾಗತಾರ್ಹವಾಗಿದೆ. ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿ ಗೃಹಮಂತ್ರಿ ಅಶೋಕ್ ಅವರಿಗೆ ಮುತ್ತಿಗೆ ಹಾಕಿ ಬಂಧನಕ್ಕೆ ಒಳಗಾದ ಸುಮಾರು 150 ಜನ ಸಂಗಾತಿಗಳು ವಿಶೇಷವಾಗಿ ಅಭಿನಂದನಾರ್ಹರು.

ಈ ಅನಿಷ್ಟ ಪದ್ಧತಿಗಳನ್ನು ನಿಷೇಧಿಸುವಂತೆ ಹಾಗೂ ಪ್ರತಿಭಟನಾಕಾರರ ಮೇಲೆ ದಾಖಲು ಮಾಡಿರುವ ಸುಳ್ಳು ಕೇಸುಗಳನ್ನೇ ವಾಪಸ್ ಪಡೆಯಲು ಆಗ್ರಹಿಸಿ ಮುಖ್ಯಮಂತ್ರಿಗೆ ಪತ್ರ ಬರೆಯುವುದು. ಅಂತಹ ಬಹಿರಂಗ ಪತ್ರಕ್ಕೆ ಗಣ್ಯರ, ಸಾಹಿತಿಗಳ ಸಹಿಗಳನ್ನು ಪಡೆಯವುದು. ರಾಜ್ಯಮಟ್ಟದಲ್ಲಿ ಸಮಾವೇಶವನ್ನು ನಡೆಸಿ ಮುಂದಿನ ಹೋರಾಟವನ್ನು ಪ್ರಕಟಿಸುವುದು. ಜಿಲ್ಲಾ ಮಟ್ಟದಲ್ಲಿ ನಿರ್ದಿಷ್ಟ ಅಸ್ಪೃಶ್ಯತಾ ಆಚರಣೆಗಳ ವಿರುದ್ಧ ಹೋರಾಟವನ್ನು ರೂಪಿಸುವುದು ಮುಂತಾದ ಕ್ರಮಗಳನ್ನು ನಡೆಸುವುದು.

ಜನವರಿ 2, 3 ರಂದು ಬೆಂಗಳೂರಿನಲ್ಲಿ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ಈ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ನಗದು ನೇರ ವರ್ಗಾವಣೆ ಎಂಬ ಮೋಸ

ಸರ್ಕಾರದ ವಿವಿಧ ಯೋಜನೆಗಳ ಸಬ್ಸಿಡಿ, ವಿದ್ಯಾರ್ಥಿ ವೇತನ ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ ಮಾಡುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಎಂದೇ ಬಿಂಬಿತವಾಗಿರುವ ಯೋಜನೆಗೆ ರಾಜ್ಯದ ತುಮಕೂರು, ಮೈಸೂರು ಮತ್ತು ಧಾರವಾಡ ಜಿಲ್ಲೆಗಳೂ ಸೇರಿದಂತೆ ದೇಶದ 6 ರಾಜ್ಯಗಳ ಮತ್ತು 3 ಕೇಂದ್ರಾಡಳಿತ ಪ್ರದೇಶಗಳ ಒಟ್ಟು 20 ಜಿಲ್ಲೆಗಳಲ್ಲಿ ಇದೇ ಜನವರಿ 1 ರಿಂದ ಪ್ರಾಯೋಗಿಕವಾಗಿ ಚಾಲನೆ ನೀಡಲಾಯಿತು ಎನ್ನಲಾಗಿದೆ. 2013 ರ ಕೊನೆಗೆ ದೇಶದ ಎಲ್ಲಾ ಜಿಲ್ಲೆಗಳಲ್ಲೂ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ. ಎಂದು ಕೇಂದ್ರ ಹಣಕಾಸು ಮಂತ್ರಿ ಪಿ. ಚಿದಂಬರಂ ಹೇಳಿದ್ದಾರೆ. ರೇಷನ್, ಅಡುಗೆ ಅನಿಲ, ಡಿಸೆಲ್, ಸೀಮೆಎಣ್ಣೆ, ರಸಗೊಬ್ಬರ ಸಬ್ಸಿಡಿಯನ್ನು ಮೊದಲ ಹಂತದ ಯೋಜನೆಯಲ್ಲಿ ಸೇರ್ಪಡೆ ಮಾಡಲಾಗಿಲ್ಲ ಎಂದು ಹೇಳಿರುವ ಮಂತ್ರಿಗಳು ವಿದ್ಯಾರ್ಥಿ ವೇತನ, ವೃದ್ಧಾಪ್ಯ ವೇತನ ಮುಂತಾದ 7 ಯೋಜನೆಗಳ ಫಲಾನುಭವಿಗಳನ್ನು ಮಾತ್ರ ಯೋಜನೆ ಅಡಿಯಲ್ಲಿ ತರಲಾಗಿದೆ ಎಂದು ಹೇಳಿದ್ದಾರೆ.

ಫಲಾನುಭವಿಗಳ ಬ್ಯಾಂಕ್ ಖಾತೆಗೆ ಯೋಜನೆಯ ಹಣ ನೇರವಾಗಿ ಜಮಾ ಆಗುವುದರಿಂದ ಸೋರಿಕೆ ತಡಗಟ್ಟಬಹುದು ಮಧ್ಯವರ್ತಿಗಳ ಕಾಟ ತಪ್ಪಿಸಬಹುದು. ಹಣ ಸಂದಾಯದಲ್ಲಿ ವಿಳಂಬವಾಗುವುದನ್ನು ತಪ್ಪಿಸಬಹುದು ಎಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರದ ವಕ್ತಾರರ ಈ ಹೇಳಿಕೆಗಳು ಎಷ್ಟರ ಮಟ್ಟಿಗೆ ಜಾರಿಯಾಗಲಿವೆ ಎಂಬುದನ್ನು ಕಾದು ನೋಡಬೇಕು. ಇದುವರೆಗಿನ ಅನುಭವ ಇದರ ತದ್ವಿರುದ್ಧವಾಗಿದೆ. ಈಗಾಗಲೇ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಹಣವನ್ನು ಆರಂಭ ಮಾಡಲಾಗಿದ್ದರೂ ತಿಂಗಳುಗಟ್ಟಲೆ ಕೂಲಿಹಣ ಪಾವತಿಯಾಗದೆ ಬಡ ಕೂಲಿಕಾರರು ಪರದಾಡುತ್ತಿರುವುದನ್ನು ನೋಡುತ್ತಿದ್ದೇವೆ. ವಿದ್ಯಾರ್ಥಿ ವೇತನ, ಪಿಂಚಣಿ ಮೊದಲಾದ ಯೋಜನೆಗಳ ಹಣ ಬ್ಯಾಂಕ್ ಖಾತೆಗೆ ಜಮಾ ಮಾಡುವ ಪದ್ಧತಿ ಈಗಾಗಲೇ ಜಾರಿಯಲ್ಲಿದ್ದರೂ ಫಲಾನುಭವಿಗಳಿಗೆ ನಿಯಮಿತವಾಗಿ ಹಣ ಪಾವತಿಯಾಗುವ ಯಾವ ಭರವಸೆಯೂ ಇಲ್ಲ.

ನೇರ ನಗದು ವರ್ಗಾವಣೆಗೆ ಫಲಾನುಭವಿಯ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರಬೇಕು, 'ಆಧಾರ್' ಗುರುತಿನ ಚೀಟಿ ಇರಬೇಕು, 'ಆಧಾರ್' ಸಂಖ್ಯೆ ಸಿಕ್ಕಿರಬೇಕು. ಕಟ್ಟಡ ನಿರ್ಮಾಣ ಕೆಲಸಗಾರರಿಗೆ ಕೆಲಸ ಮಾಡಿ ಮಾಡಿ ಹೆಬ್ಬೆರಳಿನ ಮುದ್ರೆ ಸವೆದು ಹೋಗಿರುತ್ತದೆ. ಇಂಥವರಿಗೆ ಹೆಬ್ಬೆಟ್ಟಿನ ಮುದ್ರೆ ಒದಗಿಸಿ 'ಆಧಾರ್'ಚೀಟಿ ಪಡೆಯುವುದು ಸಾಧ್ಯವಾದರೂ ನಗದು ನೇರ ವರ್ಗಾವಣೆಯ ಕುರಿತಾದ ಆತಂಕಗಳು ಇನ್ನೂ ಗಂಭೀರವಾಗಿದೆ.

ಪಡಿತರ, ಅಡುಗೆ ಅನಿಲ, ರಾಸಾಯನಿಕಗೊಬ್ಬರ ಮೊದಲಾದವುಗಳ ಸಬ್ಸಿಡಿಯನ್ನು ನೇರ ನಗದು ವರ್ಗಾವಣೆಯ ನೈಜ ಸ್ವರೂಪ ಕಣ್ಮುಂದೆ ಬರಲಿದೆ. ಸಬ್ಸಿಡಿ ಹಣವನ್ನು ಪಡೆಯ ಬೇಕಾದರೆ ಪಡಿತರ ಅಕ್ಕಿ, ಗೋದಿಯನ್ನಾಗಲಿ, ಅಡುಗೆ ಅನಿಲ ಸಿಲಿಂಡರುಗಳನ್ನಾಗಲಿ ರಾಸಾಯನಿಕ ಗೊಬ್ಬರವನ್ನಾಗಲಿ ಫಲಾನುಭವಿಗಳು ಸ್ವಂತ ಹಣದಿಂದ ಕೊಂಡುಕೊಳ್ಳಬೇಕಾಗಿದೆ. ಆನಂತರವಷ್ಟೇ ಸಬ್ಸಿಡಿಯನ್ನು ಪಡೆಯಲು ಅವರು ಅರ್ಹರಾಗುತ್ತಾರೆ. ಇಂದಿನ ಮಾರುಕಟ್ಟೆಯ ದುಬಾರಿ ದರಗಳಲ್ಲಿ ಅಕ್ಕಿಯನ್ನಾಗಲಿ, ಅಡುಗೆ ಅನಿಲವನ್ನಾಗಲಿ, ರಾಸಾಯನಿಕ ಗೊಬ್ಬರವನ್ನು ಜನಸಾಮಾನ್ಯರು ಕೊಂಡುಕೊಳ್ಳಲು ಸಾಧ್ಯವೆ. ಬಡವರಿಗೆ ಮಾರುಕಟ್ಟೆ ದರಗಳಲ್ಲಿ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಸಾಧ್ಯವಾಗದಿರುವುದರಿಂದಲೇ ಸಬ್ಸಿಡಿ ದರಗಳಲ್ಲಿ ಪೂರೈಸುವ ಪದ್ಧತಿಯನ್ನು ಆರಂಭಿಸಿದ್ದಲ್ಲವೆ?


ಫಲಾನುಭವಿಗಳು ಸಾಲ ಮಾಡಿಕೊಳ್ಳಬಹುದೆಂಬ ಸಾಧ್ಯತೆ ಇದೆ ಎನ್ನಬಹುದು. ಆದರೆ ಸಬ್ಸಿಡಿ ಹಣ ಬ್ಯಾಂಕ್ ಖಾತೆಗೆ ಜಮಾ ಮಾಡಲು ವಿಳಂಬವಾದರೆ ಆ ಸಾಲದ ಬಡ್ಡಿಗೆ ಯಾರು ಹೊಣೆ? ಸಬ್ಸಿಡಿ ಕಾಲ ಕಾಲಕ್ಕೆ ಸರಿಯಾಗಿ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ ಎಂದು ಗ್ಯಾರಂಟಿ ನೀಡಿದರೂ ಮಾರುಕಟ್ಟೆಯಲ್ಲಿ ಪ್ರತಿ ದಿನ ಎಂಬಂತೆ ಬೆಲೆಗಳು ಏರುತ್ತಿರುವಾಗ ನಿಗದಿತ ಸಬ್ಸಿಡಿಯಿಂದ ಏನು ಪ್ರಯೋಜನ?

ಮೇಲ್ನೋಟಕ್ಕೆ ಈ ಯೋಜನೆ ಜನಸ್ನೇಹಿಯಾಗಿ ಕಾಣುತ್ತಿರಬಹುದು. ಬಡವರು ತಕ್ಷಣಕ್ಕೆ ಆಕರ್ಷಿತರಾಗಲೂಬಹುದು. ಮುಂದಿನ ಚುನಾವಣೆಯಲ್ಲಿ ಸಂಬಂಧಪಟ್ಟ ರಾಜಕೀಯ ಪಕ್ಷಕ್ಕೆ ಲಾಭವಾಗಲೂಬಹುದು. ಕೇಂದ್ರ ಸರ್ಕಾರ ಅವಸರವಸರವಾಗಿ ಅದನ್ನು ಜಾರಿ ಮಾಡುತ್ತಿರುವುದರ ಹಿಂದೆ ಇರುವ ಪಿತೂರಿಯನ್ನು ಅರಿಯದೆ ಜನಸಾಮಾನ್ಯರು ಮೋಸಹೋಗುವ ಎಲ್ಲ ಅಪಾಯಗಳಿವೆ. ಬಡವರ ಪರವಾದ ಜವಾಬ್ದಾರಿಗಳಿಂದ ನುಣುಚಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಈ ಯೋಜನೆ ತುಂಬ ಸಹಕಾರಿಯಾಗಲಿದೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಸ್ವಾಗತಿಸುವ ನೀತಿಗೂ ನೇರ ನಗದು ವರ್ಗಾವಣೆ ನೀತಿಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಅಸಂಖ್ಯಾತ ಅಂಗಡಿಗಳನ್ನು ನಾಶಮಾಡಿ ಚಿಲ್ಲರೆ ವ್ಯಾಪಾರ ಕ್ಷೇತ್ರವನ್ನು ಆಕ್ರಮಣ ಮಾಡಿಕೊಳ್ಳುವ ವಾಲ್‌ಮಾರ್ಟ್ ಅಂತಹ ದೈತ್ಯರಿಗೆ ಗಿರಾಕಿಗಳನ್ನು ಒದಗಿಸುವುದಾಗಿದ್ದು ಈ ಮಹಾಮೋಸದ ಬಹುಮುಖ್ಯ ಗುರಿಯಾಗಿದ್ದು ಇದನ್ನು ತುರ್ತಾಗಿ ಜನತೆಗೆ ಮನವರಿಕೆ ಮಾಡಬೇಕಾಗಿದೆ.

'ನೆಮ್ಮದಿಯ ಬಾಳು ನಮ್ಮದಾಗಲಿ' ಎಂದ ಕನಸಿನಂಗಳದಲ್ಲಿ.....

ಹೊಸತು ಎಂಬುದು ಎಂದೋ ಹುಟ್ಟಿ ಬಂದು ಮರೆಯಾಗಿ ಹೋಗುವಂಥಹದ್ದಲ್ಲ ಎಂಬುದು ಜಗದ ಚಲನೆಯ ನಿಯಮ ಬಲ್ಲವರಿಗೆ ಗೊತ್ತಿರುವ ಸಂಗತಿ. ಅದು ನಿತ್ಯ ನಿರಂತರ. ಆದರೆ ಹೊಸತನಕ್ಕೆ ಹಾತೊರೆದು ಸಂಭ್ರಮಿಸುವ, ಬದಲಾವಣೆಗಾಗಿ ಸಂಕಲ್ಪಿಸಲು ಒಂದು ಸಂದರ್ಭವಾಗಿಸಿಕೊಂಡರೆ ಅದಕ್ಕೊಂದು ಅರ್ಥವಾದರೂ ಬಂದೀತು.

ಹೊಸ ವರುಷದ ಶುಭಾಶಯಗಳ ವಿನಿಮಯವು ಡಿಶೆಂಬರ್ ಕೊನೆಯ ವಾರದಿಂದಲೇ ಆರಂಭಗೊಳ್ಳುತ್ತವೆ. ಯಾವುದನ್ನು ಹೊಸತು ಎನ್ನಬೇಕು? ಇಂಗ್ಲೀಷ್ ಕ್ಯಾಲೆಂಡರನ್ನೇ, ಹಿಂದೂ ಪಂಚಾಂಗವನ್ನೇ, ಹಿಜರಿಯ ಲೆಕ್ಕಾಚಾರವೇ?! ಪ್ರತಿಯೊಂದರಲ್ಲೂ ಜಾತಿ, ಮತದ ಕೊಳೆಯ ಬೆಳೆ ಬೆಳೆಯಬೇಕೆನ್ನುವವರ ವಾಗ್ವಾದ ಇದ್ದದ್ದೇ! ಆದರೂ ಎಲ್ಲ ಗದ್ದಲಗಳ ನಡುವೆ ಹುಟ್ಟುವ ಸೂರ್ಯ ಹುಟ್ಟುತ್ತಾನೆ ಅಥವಾ ಬೆಳಕು ಮೂಡುತ್ತದೆ. ಎಂದಿನಂತೆ ಎಸ್. ಎಂ.ಎಸ್.ಗಳು, ಕಾರ್ಡ್‌ಗಳು, ಕಾಣಿಕೆಗಳ ಮಾರಾಟ, ಬಾರ್– ಬೀರ್ಗಳ ಬಿಕರಿ ಬಹಳ ವ್ಯವಸ್ಥಿತವಾಗಿ, ವ್ಯಾಪಕವಾಗಿ ನಡೆದು ಕೋಟ್ಯಾಂತರ ರೂಪಾಯಿಗಳ ಕಮಾಯಿ ಮಾಡಿಕೊಳ್ಳುವ ಕಾರ್ಪೋರೇಟ್ ವ್ಯವಹಾರಸ್ಥರಿಗೆ ತೆರೆದ ಬಾಗಿಲಾಗಿರುತ್ತದೆ.




ಹೊಸ ವರುಷದಲ್ಲಿ ಉತ್ತಮ ಭವಿಷ್ಯ ಅರಸಿದವರಿಗೆಲ್ಲಾ 'ಅಬ್ಬಾ ವರುಷವೊಂದು ಕಳೆಯಿತಲ್ಲಾ' ಎಂಬ ನಿಟ್ಟುಸಿರಿನ ಘಟನೆಗಳ ಕರಿಛಾಯೆ. ಹೌದು! ಕಳೆದೊಂದು ವರುಷದಲ್ಲಿ ಅನುಭವಿಸಿದ್ದೆಷ್ಟು? ಆಕ್ರಂದನವೆಷ್ಟು? ಹಿಂತಿರುಗಿದರೆ ಉರುಳಿದ ವರುಷದ ಕೊರಳಿಗೆ ನರಳಿಕೆಗಳ ಸರಣಿ ಮಾಲೆ!.

ಹೋಗಲಿ, ಈಗಲಾದರೂ ಹೊಸ ವರುಷ ನಮ್ಮೆದುರು ತೆರೆದುಕೊಳ್ಳುತ್ತಿರುವುದಾದರೂ ಹೇಗೆ?

ಶೋಕ ಕಾಡುವ ಹೊತ್ತಿನಲ್ಲೇ

'ದಾಮಿನಿ ಬದುಕಿ ಬರುತ್ತಾಳೆ. ಎಲ್ಲರೆದುರು ಎದ್ದು ನಿಲ್ಲುತ್ತಾಳೆ. ಎದ್ದು ಬಾ' ಎಂದು ಆಶಿಸಿ, ಹಾರೈಸಿದವರ ನಿರೀಕ್ಷೆಗಳು ಸುಳ್ಳಾದವಲ್ಲ. ಸಾವಿನ ಶೋಕ ಕಾಡುವ ಹೊತ್ತಿನಲ್ಲೇ ಹೊಸ ವರುಷದ ಬೆಳಕು ಹರಿಯಿತು! ಅತ್ಯಾಚಾರ, ದಬ್ಬಾಳಿಕೆಗಳ ವಿರುದ್ಧ ಸಿಡಿದೆದ್ದ ಎಚ್ಚೆತ್ತ ಭಾರತದ ಕಣ್ಣೆದುರೇ ಹಾಡ ಹಗಲೇ ಅತ್ಯಾಚಾರ, ಕಗ್ಗೊಲೆಗಳು ನಿತ್ಯವೂ ನಡೆದೇ ಇವೆಯಲ್ಲ. ನೆಮ್ಮದಿಯ ಬಾಳು ನಮ್ಮದಾಗಲಿ ಎಂದ ಕನಸಿನಂಗಳದಲ್ಲೇ ಎಳೆಯ ಕೂಸುಗಳನ್ನು ಎಳೆದೊಯ್ದು ಅತ್ಯಾಚಾರ ನಡೆಸಲಾಯಿತಲ್ಲ. ಅದೂ ಹೊಸ ವರುಷದ ದಿನವೇ! ರಾಜ್ಯದ ರಾಜಧಾನಿ ಬೆಂಗಳೂರಿನ ಮಾದನಾಯಕನಹಳ್ಳಿ ಮತ್ತು ಮಾರುತಿನಗರದಲ್ಲಿ ಇಬ್ಬರು ಏಳು ವರುಷದ ಹಸುಳೆಗಳ ಮೇಲೆ ಅತ್ಯಾಚಾರ ನಡೆದಿದ್ದರೆ. ಆ ಒಂದು ಪ್ರಕರಣದ ದೂರನ್ನು ದಾಖಲಿಸಲು ಪೋಲೀಸರೇ ಸಿದ್ಧರಿರಲಿಲ್ಲ ವೆಂಬುದು ಅಘಾತಕಾರಿಯಾಗಿದೆ. ಅದಕ್ಕಾಗಿ ಊರಿನ ಜನ ದೇವರಜೀವನಹಳ್ಳಿಯ ಠಾಣೆಗೆ ಮುತ್ತಿಗೆ ಹಾಕಿ ಧರಣಿ ನಡೆಸ

ಪುಟ 4 ಕ್ಕೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ಕೊಡಗು : ನಿವೇಶನಕ್ಕಾಗಿ ಹೋರಾಟ

ದಿನಾಂಕ 6/11/2012 ರಂದು ಕೊಡಗು ಜಿಲ್ಲೆಯಲ್ಲಿ ನಿವೇಶನ ರಹಿತರಿಗೆ ನಿವೇಶನ ಭೂರಹಿತರಿಗೆ ಭೂಮಿ ಹಕ್ಕು ಪತ್ರ ನೀಡಿದವರಿಗೆ ಹಕ್ಕು ಪತ್ರ ನೀಡಲು ಒತ್ತಾಯಿಸಿ ಮಡಿಕೇರಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ಮಾಡಲಾಯಿತು. ಸಿಪಿಐ(ಎಂ) ಕಾರ್ಯದರ್ಶಿ ಡಾ.ದುರ್ಗಾಪ್ರಸಾದ್ ಮಾತನಾಡಿ ಸಾಮೂಹಿಕ ಸಂಘಟನೆಯಾದ ಡಿ.ವೈ.ಎಫ್.ಐ ಮತ್ತು ಕೊಡಗು ಜಿಲ್ಲಾ ಜನರಲ್ ವರ್ಕ್‌ರ್‌ರ ಯೂನಿಯನ್ ಹಲವಾರು ವರ್ಷಗಳಿಂದ ಮನೆ ನಿವೇಶನಕ್ಕಾಗಿ ಹೋರಾಟ ಮಾಡಿದ್ದು ನಿವೇಶನ ರಹಿತರಿಗೆ ನಿವೇಶನ ನೀಡುವಂತೆ ಅರ್ಜಿಯನ್ನು ಸಲ್ಲಿಸಲಾಗಿತ್ತು ಆದರೆ ಈ ಆಳುವ ಸರಕಾರಗಳು ಈ ಅರ್ಜಿಗಳಿಗೆ ಮನ್ನಣೆ ನೀಡದೆ ತಳ್ಳಿಹಾಕುತ್ತವೆ ಈ ನಿಟ್ಟಿನಲ್ಲಿ ಭಾರತ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷ ಈ ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡಿದರು.

ಈ ಹೋರಾಟದಲ್ಲಿ ಪಕ್ಷದ ಸಂಘಟನಾ ಸಮಿತಿಯ ಸಾಬು, ಇಬ್ರಹಾಂ, ರಮೇಶ ಭಾಗವಹಿದ್ದಾರೆ. ಸಾಮೂಹಿಕ ಸಂಘಟನೆಯಿಂದ ಖಾಸಿಂ– ಕಟ್ಟಡ ಕಾಮಿಕ ಸಂಘಟನೆ ಕಾರ್ಯದರ್ಶಿ ಕೊಡಗು, ಪದ್ಮಿನಿ– ಮಹಿಳಾ ಸಂಘಟನೆಯ ಅಧ್ಯಕ್ಷರು, ರಾಧ– ಹೋರಾಟ ಸಮಿತಿ ಉಪ ಕಾರ್ಯದರ್ಶಿ ಅಮ್ಮತ್ರಿ, ಕೃಷ್ಣಕುಮಾರ್– ಖಜಾಂಜಿ ಕೊಡಗು ಜಿಲ್ಲಾ ಜನರಲ್ ವರ್ಕ್‌ರ್ಸ್ ಯೂನಿಯನ್, ಮಹೇಶ್, ನಾಜಿ ರಮೇಶ, ಇನ್ನು ಹಲವಾರು ಭಾಗವಹಿಸಿದ್ದಾರೆ.

ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ನೀಡಲಾಯಿತು.

ವರದಿ ಹೆಚ್.ಬಿ.ರಮೇಶ್ ಕೊಡಗು.





ನೆಮ್ಮದಿಯ ಬಾಳು ನಮ್ಮದಾಗಲಿ....

ಪುಟ 3 ರಿಂದ

ಬೇಕಾಯಿತು.

ಅದೇ ಹೊತ್ತಿನಲ್ಲಿ ಚಿಕ್ಕಮಗಳೂರಿನ ಮೂಡಿಗೆರೆ ತಾಲೂಕಿನ ಬಿಳ್ಳೂರಿನಲ್ಲಿ 8ನೇ ತರಗತಿ ವಿದ್ಯಾರ್ಥಿನಿ ಸಿಂಚನಾಳ ಮೇಲೆ ಅತ್ಯಾಚಾರ ನಡೆದಿದೆ. ಅದೂ ರಾಜ್ಯದ ಗೃಹ ಮಂತ್ರಿ ಮಹಿಳೆಯರ ರಕ್ಷಣೆಗೆಂದು ಹತ್ತಾರು ಕ್ರಮಗಳನ್ನು ಪ್ರಕಟಿಸುತ್ತಿರುವಾಗಲೇ ಇದು ನಡೆಯುತ್ತಿತ್ತು ಎಂಬುದು ತಲ್ಲಣಕಾರೀ ಸನ್ನಿವೇಶದ ಗಂಭೀರತೆಯನ್ನು ಸಾರಿ ಹೇಳುತ್ತದೆ. ಸಿಂಗಪೂರಿನ ಹೈಟೆಕ್ ಚಿಕಿತ್ಸೆಯಿಂದಲೂ ಬದುಕಲಾಗದ ದಾಮಿನಿಯ ದೇಹ ಭಾರತವನ್ನು ತಲುಪಿರುವಾಗಲೇ ಬೀದರನಲ್ಲಿ ಅತ್ಯಾಚಾರಕ್ಕೆ ಈಡಾದ ಮಗುವಿಗೆ ಸರಿಯಾದ ಚಿಕಿತ್ಸೆ ಕೊಡದೇ, ನಿರ್ಲಕ್ಷ್ಯದಲ್ಲಿ ನರಳುತ್ತಿರುವ ವರದಿ ನಮ್ಮನ್ನು ಅವುಡುಗಚ್ಚಿಸದಿದ್ದರೆ? ಮುಷ್ಟಿ ಬಿಗಿಗೊಳಿಸದಿದ್ದರೆ? ನಾವು ಬದುಕಿದ್ದೇವೆ ಎಂದು ಹೇಳಲಾದೀತು ಹೇಗೆ? ಹಾಗೆ ಪ್ರತಿದಿನವೂ ಇಂತಹ ಘಟನೆಗಳ ಸಂಖ್ಯೆ ಏರುತ್ತಲೇ ಇದೆ. 7 ವರುಷದ ಬಾಲಕಿ, 60ರ ಅಂಚಿನ ವೃದ್ಧೆಯರ ಮೇಲೆ ಈ ದೌರ್ಜನ್ಯಗಳ ಸರಣಿ ತಡೆಯಿಲ್ಲದೇ ನಡೆದೇ ಇದೆ.'ಇದು ಮಹಿಳಾ ಸುರಕ್ಷತೆಯ ವರುಷವಾಗಲಿ' ಎಂದು ರಾಷ್ಟ್ರಪತಿಗಳು ಹಾರೈಸುತ್ತಿರುವಾಗಲೇ!

ಸತ್ಯದ ಸುಡು ಬೆಂಕಿ

'ಇಲ್ಲಿ ಸರಕಾರ ವಿಫಲವಾಗಿದೆ, ಕಾನೂನು ಸುವ್ಯವಸ್ಥೆ ಕುಸಿದಿದೆ, ಮಹಿಳೆಯರಿಗೆ ರಕ್ಷಣೆ ಇಲ್ಲವಾಗಿದೆ' ಎಂದು ಬಿಜೆಪಿ ಸರಕಾರದ ಏಕೈಕ ಮಹಿಳಾ ಮಂತ್ರಿ ಭಿನ್ನ ಮತದ ನೆಪದಲ್ಲಿಯಾದರೂ ಸತ್ಯದ ಸುಡು ಬೆಂಕಿಯನ್ನೇ ಖಾರಬೇಕಾಗಿ ಹೇಳಿರುವುದು ಧಾರುಣ ಸ್ಥಿತಿಯ ಕನ್ನಡಿ! ದೆಹಲಿ ಸರಕಾರದ ಬಗ್ಗೆ ಮಾತನಾಡುವ ವಿರೋಧ ಪಕ್ಷದ ನಾಯಕಿಗೆ ತನ್ನ ಪಕ್ಷದ ಆಡಳಿತ ರಾಮರಾಜ್ಯವಾಗಿ ಕಾಣುತ್ತಿದೆಯೇ?

ಇದೇ ಹೊತ್ತಿನಲ್ಲಿ ದೇಶಭಕ್ತರ ವರಸೆ ನಿಂತಿಲ್ಲ. ಬಿಲ ಹೊಕ್ಕಂತ್ತಿದ್ದ 'ಬಡಿಗೆದಾರರು' ಚೆಡ್ಡಿ ಉಟ್ಟು ಅಲ್ಲಲ್ಲಿ ಹೊರ ಬಂದಿದ್ದಾರೆ, ಬರುತ್ತಿದ್ದಾರೆ, ಬಡಿಯುತ್ತಿದ್ದಾರೆ. ಬಾಗಲಕೋಟೆಯಲ್ಲಿ ತಮ್ಮ ಮೇಲೆ ಕಲ್ಲು ತೂರಾಟ ನಡೆಸಲಾಯಿತೆಂದೂ (ಯಾರೆಂಬುದು ನಿಗೂಢ!) ಕಿಲ್ಲಾ ಮಸೀದಿಯಲ್ಲಿ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಲಾಗಿದೆ. ಸೌಹಾರ್ದತೆ, ಸಾಮರಸ್ಯದ ನೆಲೆಯಾದ ಬಾಬಾಬುಡನ್ ಗಿರಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಹಾಡು ಹಗಲೇ ಉಲ್ಲಂಘಿಸಿ ಹಿಂದೆಂದೂ ಪರಂಪರೆಯಲ್ಲೇ ಇಲ್ಲದಿರುವ ದತ್ತ ಜಯಂತಿ, ಅನಸೂಯ ಯಾಗಗಳಂತಹ ವೈಧಿಕ ಆಚರಣೆಗಳನ್ನು ನಡೆಸಲಾಗಿದೆ. ಅದೂ ಸಂವಿಧಾನದ ಮೇಲೆ ಪ್ರಮಾಣ ಮಾಡಿದ ಸಚಿವನ ಉಸ್ತುವಾರಿಯಲ್ಲೇ! ಚುನಾವಣೆ ಹತ್ತಿರವಾಗುತ್ತಿರುವಾಗಲೇ ಧರ್ಮ, ದೇಶ ಪ್ರೇಮದ ಘೋಷಣೆಗಳು ಕೇಳಿ ಬರುವುದು ಹೊಸದೇನಲ್ಲ. ಧರ್ಮ ಸಾರುವ ಅಂತಃಸತ್ವಕ್ಕೆ ಅಗ್ನಿಯಿಕ್ಕುವ ಹಳೆಯ ಚಾಳಿ ಹೊಸ ವರುಷದಲ್ಲಿಯೂ ಮುಂದುವರಿದಿದೆ. ಆ ಬೆಂಕಿ ಇನ್ನಷ್ಟು ಹಬ್ಬಲಾರದೆಂದು ಭಾವಿಸಲಾದರೂ ಹೇಗೆ ಸಾಧ್ಯ?

ಬಿಜೆಪಿಯ ದುರಾಡಳಿತದಲ್ಲಿನ ಹಗರಣಗಳ ಸ್ಪೋಟ ನಿಂತಿಲ್ಲ. ಬಿಜೆಪಿಯ ಪಕ್ಷಾಧ್ಯಕ್ಷ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪನವರ ಅಕ್ರಮ ಆಸ್ತಿ ಗಳಿಕೆಯ ದೂರಿನ ಮೇಲೆ ಲೋಕಾಯುಕ್ತ ತನಿಖೆಯಲ್ಲಿ ಅಳಿದುಳಿದ ದಾಖಲೆಯಲ್ಲೇ ಆರೋಪಗಳು ಸಾಬೀತಾಗುವ ಹಲವು ದಾಖಲೆಗಳು, ನೋಟು ಎಣಿಸುವ ಯಂತ್ರ ಸಿಗತೊಡಗಿವೆ. ಇನ್ನಷ್ಟು ನಿಷ್ಠುರವಾಗಿ ತನಿಖೆಯಾದರೆ ಮಾಲು ಸಮೇತ ಸಿಕ್ಕಿ ಬೀಳುವುದು ಖಚಿತ. ಇಷ್ಟಾದರೂ ರಾಜಿನಾಮೆ ಕೊಡಲು ಸಿದ್ಧವಿಲ್ಲ ಎಂಬುದು ಸರಕಾರದ ನೈತಿಕ ಅದಃಪತನ, ಭಂಡತನಕ್ಕೆ ಸಾಕ್ಷಿ. ಇಂತಹ ಕ್ರಿಮಿನಲ್ ಆರೋಪಿಗಳೇ ಈ ಸರಕಾರದ ಮುಕುಟಪ್ರಾಯರು ಎಂಬುದು ಬಿಜೆಪಿಯ ಹೆಗ್ಗಳಿಕೆ.

ಪಕ್ಷ ಸ್ಪಷ್ಟ ವಿಭಜನೆಯಾದಾಗ್ಯೂ, ಬಹುಮತವೇ ಇಲ್ಲದ್ದಾಗ್ಯೂ ರಾಜಿನಾಮೆ ಕೊಡದೇ ಅಧಿಕಾರದಲ್ಲಿ ಮುಂದುವರಿದಿರುವುದೇ ಅನೈತಿಕತೆ. ಆ ಅಳುಕು ಇಲ್ಲದ ಭಂಡ ಸರಕಾರ ಬಜೆಟ್ ಮಂಡಿಸಲು ತರಾತುರಿ ನಡೆಸುತ್ತಿರುವುದು ಹೊಸ ವರುಷದಲ್ಲಿನ ಪ್ರಸಂಗ. ಉರುಳಿಸುವುದಾಗಿ ಹೇಳುತ್ತಾ ಕಾಲ ತಳ್ಳುತ್ತಾ ಬ್ಲಾಕ್ ಮೇಲ್ ಅನ್ನು ಯಡಿಯೂರಪ್ಪ ಮಾಡುತ್ತಿರುವುದು ಹೇಸಿಗೆಯ ರಾಜಕಾರಣದ ಜ್ವಲಂತತೆಯಾಗಿದೆ.

ಇಂದೋ, ನಾಳೆಯೋ ಪತನದಂಚಿನಲ್ಲಿ ನಿಂತಿರುವ ಸರಕಾರ, ಸಾರ್ವತ್ರಿಕ ಚುನಾವಣೆಯ ಹೊಸ್ತಿಲಲ್ಲಿ ನಿಂತು 2014ರಲ್ಲಿ ನೆಲ–ಜಲ, ಪ್ರಾಕೃತಿಕ ಸಂಪತ್ತು ದೋಚುವ ಮಾಫಿಯಾ, ಕಂಪನಿಗಳನ್ನು ಮೇಯಿಸುವ ಜನರನ್ನು ದಿವಾಳಿಯೆಬ್ಬಿಸುವ ನಾಲ್ಕನೆಯ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಲಿದೆಯಂತೆ! ವಿದ್ಯುತ್ ಕ್ಷಾಮ ನೀಗಲು ಏನೊಂದೂ ಮಾಡದ ಸರಕಾರ ಮುಂದಿನ ಎರಡು ವರುಷಗಳಿಗಾಗಿ ವಿದ್ಯುತ್ ಖರೀದಿಸುವ ಡೀಲ್‌ಗೆ ಇಳಿದಿದೆ! ಅಂದರೆ ಮುಂಬರುವ ಯಾವ ಸರಕಾರವೂ ಅದೇ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳನ್ನೇ ಜಾರಿಗೆ ತರಬೇಕು, ತಪ್ಪಿಸಿಕೊಳ್ಳುವಂತಿಲ್ಲ ಎಂಬ ಕಟ್ಟಪ್ಪಣೆ ಮಾಡುವ ಹುನ್ನಾರವಲ್ಲವೇ?

ಹಾಗೆ ಕೇಂದ್ರದ ಕಾಂಗ್ರೆಸ್‌ನ ಸರಕಾರದ ಸಬ್ಸಿಡಿಯ ನಗದು ನೀಡಿಕೆ ಎಂಬ ವಂಚನೆ ಆವಾಂತರಗಳನ್ನು ಸೃಷ್ಟಿಸಿದೆ. ಅಲ್ಲಿ ಹೇಳುವಂತೆ ಪರಿಹಾರವೆಂಬುದು ಬರೀ ಮರೀಚಿಕೆ. ಈ ಕುತಂತ್ರದಲ್ಲಿಯೇ ರೇಷನ್ ಕಾರ್ಡ್, ಪಡಿತರ ಪದ್ಧತಿಯ ರದ್ಧತಿಯೇ ನಿಜ ಗುರಿ. ಈ ಮೇಲಿನ ಸಂಗತಿಗಳು ಕೆಲವು ಸ್ಯಾಂಪಲ್‌ಗಳು, ಗಂಭೀರ ಸಂಕೇತಗಳು.

ಸಂಕಲ್ಪ ಸಿದ್ಧಿಸಲಿ

ಇಂತಹ ಹೊತ್ತಿನಲ್ಲಿ ಕಾಂಗ್ರೆಸ್, ಬಿಜೆಪಿ, ಕೆಜೆಪಿ, ಬಿಎಸ್ಸಾರ್ ನಂತಹ ಬಹುತೇಕ ಬಂಡವಾಳಶಾಹಿ ಪಕ್ಷಗಳ ಚಿಂತೆ ಹೇಗೆ ಜನರನ್ನು, ರಾಜ್ಯವನ್ನು ಉಳಿಸಬೇಕು ಎಂಬುದಲ್ಲ. ರೂಪಿಸಬೇಕಾದ ನೀತಿಗಳ ಬಗೆಗಿನ ಚಿಂತನೆಯೂ ಅಲ್ಲ. ಬದಲಾಗಿ ಹೇಗೆ ಅಧಿಕಾರ ಹಿಡಿಯಬೇಕು ಎಂಬುದಕ್ಕೆ ಬೇಕಾದ ತಂತ್ರ ಕುತಂತ್ರಗಳು, ಸಂಯೋಜನೆಗಳು ಅಷ್ಟೇ ಆಗಿದೆ. ಇಂತಹ ಸಂದರ್ಭಸಾಧಕ ರಾಜಕಾರಣಕ್ಕೆ ಈ ಬಾರಿಯಾದರೂ ತಡೆ ಹಾಕಬಾರದೇ?

ಹೊಸ ವರುಷದಲ್ಲಿ ಒಂದು ಹೊಸ ಅವಕಾಶವೂ ತೆರೆದಿದೆ. ಎಲ್ಲಾ ಅನಿಷ್ಟಗಳ ಸೃಷ್ಟಿ ಕರ್ತರಿಗೆ ತಕ್ಕ ಉತ್ತರ ಹೇಳಬೇಕಿದೆ. ಈ ಉತ್ತರ ಜನತೆಯ ಜಾಗೃತಿ, ಅನ್ಯಾಯಗಳನ್ನು ಪ್ರತಿಭಟಿಸುವ, ಪರ್ಯಾಯ ನೀತಿಗಳಿಗಾಗಿ ನಡೆಸುವ ನಿರಂತರ ಜನಾಂದೋಲನಗಳಿಂದಲೇ ಸಾಧ್ಯ. ಅದು ವರುಷದಲ್ಲಿ ಫಲ ನೀಡಲಿ, ಪ್ರತಿರೋಧ ಬೆಳೆಸಲಿ. ಇದು ಸಂಕಲ್ಪವಾಗಲಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿ.ಜೆ.ಪಿ.–ಕೆ.ಜೆ.ಪಿ.ನಡುವಿನ ಕದನದಿಂದ ಸೊರಗಿದೆ ಆಡಳಿತ


ಕರ್ನಾಟಕದ ರಾಜಕೀಯ ಸ್ಥಿತಿ ಅತ್ಯಂತ ಗೊಂದಲಕಾರಿಯಂತೆ ಕಾಣುತ್ತಿದೆ. ಇಂದಿನ ಪರಿಸ್ಥಿತಿಯ ಬಗ್ಗೆ ಸಿಪಿಐ(ಎಂ) ವಿಶ್ಲೇಷಣೆ

ರಾಜ್ಯ ಆಡಳಿತಾರೂಢ ಬಿಜೆಪಿಯೊಳಗಿನ ವಿದ್ಯಮಾನಗಳು ಅನಾವರಣಗೊಂಡಿವೆ. ಬಿಜೆಪಿ ಹೈಕಮಾಂಡ್ ಒಲೈಕೆ–ಬೆದರಿಕೆಗಳಿಗೆ ಸೊಪ್ಪು ಹಾಕದೆ ಯಡಿಯೂರಪ್ಪ ಸ್ವಹಿತ ರಕ್ಷಣೆಗಾಗಿ ಬಿಜೆಪಿ ತೊರೆದು ಕೆಜೆಪಿ ಅಧ್ಯಕ್ಷರಾಗಿದ್ದಾರೆ. ಡಿಸೆಂಬರ್ 9ರಂದು ಹಾವೇರಿಯಲ್ಲಿ ಏರ್ಪಡಿಸಲಾಗಿದ್ದ ಕೆಜೆಪಿ ಉದ್ಘಾಟನಾ ಸಮಾವೇಶದಲ್ಲಿ ಭಾಗವಹಿಸಿದ್ದ 14 ಜನ ಶಾಸಕರ ವಿರುದ್ಧ ಶಿಸ್ತುಕ್ರಮ ಜರಗಿಸಲು ಬಿಜೆಪಿಗೆ ಸಾಧ್ಯವಾಗಲಿಲ್ಲ. ಇದರಿಂದ ಉತ್ತೇಜಿತರಾದ ಯಡಿಯೂರಪ್ಪ ಹೋದಲ್ಲಿ–ಬಂದಲ್ಲಿ ಜಗದೀಶ್ ಶೆಟ್ಟರು ಸರ್ಕಾರವನ್ನು, ಬಿಜೆಪಿ ವರಿಷ್ಠರನ್ನು ಜರಿಯುತ್ತಿದ್ದಾರೆ. ಆದರೂ ಬಿಜೆಪಿ ನಾಯಕರು ಪ್ರತಿದಾಳಿ ನಡೆಸುತ್ತಿಲ್ಲ.

ಮುಖ್ಯಮಂತ್ರಿ ಜಗದೀಶ್‌ಶೆಟ್ಟರ್ ಈಗ ಆರ್‌ಎಸ್‌ಎಸ್ ಹಾಕಿದ ಗೆರೆ ದಾಟದಂತೆ ನಡೆದುಕೊಳ್ಳುತ್ತಿದ್ದಾರೆ. ಈ ಸಲದ ಬಜೆಟ್ ಬಿಜೆಪಿ ಸರ್ಕಾರದ ಕೊನೆಯ ಬಜೆಟ್. ಈ ಸಲದ ಬಜೆಟ್‌ನಲ್ಲಿ ಜನಾಕರ್ಷಣೆಯ ಹತ್ತಾರು ಯೋಜನೆಗಳನ್ನು ಪ್ರಕಟಿಸಲು ಸಿದ್ಧತೆಗಳನ್ನು ನಡೆಸಲಾಗಿದೆ. ಬಜೆಟ್ ಮಂಡಿಸಿದ ನಂತರ ಸರ್ಕಾರ ಉರುಳಿದರೆ ಅದನ್ನು ಯಡಿಯೂರಪ್ಪನವರ ತಲೆಗೆ ಕಟ್ಟಬಹುದು ಎಂಬುದು ಆರ್‌ಎಸ್‌ಎಸ್ ಲೆಕ್ಕಾಚಾರ. 'ತಮ್ಮ ಸರ್ಕಾರ ಇಷ್ಟೊಂದು ಜನಪರ ಯೋಜನೆಗಳನ್ನು ಹಾಕಿಕೊಂಡಿತ್ತು. ಆದರೆ ಯಡಿಯೂರಪ್ಪ ತನ್ನ ಸ್ವಾರ್ಥಕ್ಕಾಗಿ ಸರ್ಕಾರವನ್ನು ಉರುಳಿಸಿದ್ದಾರೆ. ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತಂದರೆ ತಾವು ಬಜೆಟ್‌ನಲ್ಲಿ ಹೇಳಿರುವ ಯೋಜನೆಗಳನ್ನು ಜಾರಿಗೆ ತರುತ್ತೇವೆ' ಎಂದು ಜನರನ್ನು ನಂಬಿಸಿ ಓಟು ಪಡೆಯಬಹುದೆಂದು ಆರ್‌ಎಸ್‌ಎಸ್ ಜಗದೀಶ್ ಶೆಟ್ಟರ್ ಅವರ ತಲೆತುಂಬಿದೆ. ಇದರಿಂದಾಗಿ ಮುಖ್ಯಮಂತ್ರಿ ಶೆಟ್ಟರ್ ಶತಾಯ ಗತಾಯ ಬಜೆಟ್ ಮಂಡಿಸಿಯೇ ತೀರುತ್ತೇನೆ ಎಂದು ಕನಸು ಕಾಣುತ್ತಿದ್ದಾರೆ.

ಇದು ಯಡಿಯೂರಪ್ಪಗೂ ಚೆನ್ನಾಗಿ ಗೊತ್ತು. ಅಕಸ್ಮಾತ್ ಜಗದೀಶ್ ಶೆಟ್ಟರ್ ಹೊಸ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಿದರೆ ತಾನು ಜಾರಿಗೆ ತಂದಿದ್ದ ಭಾಗ್ಯಲಕ್ಷ್ಮಿ, ಶಾಲಾ ಮಕ್ಕಳಿಗೆ ಉಚಿತ ಸೈಕಲ್ ಮೊದಲಾದ ಯೋಜನೆಗಳನ್ನು ಜನರು ಮರೆತುಬಿಡಬಹುದೆಂಬ ಆತಂಕ ಯಡಿಯೂರಪ್ಪರನ್ನು ಕಾಡುತ್ತಿದೆ. ಯಾವ ಕಾರಣಕ್ಕೂ ಇದಕ್ಕೆ ಅವಕಾಶ ನೀಡದಿರಲು ಯಡಿಯೂರಪ್ಪ ಸಜ್ಜಾಗಿದ್ದಾರೆ.

ಶೆಟ್ಟರ್ ಸರ್ಕಾರ ಬೀಳಿಸಿದ ಅಪಖ್ಯಾತಿಯಿಂದ ತಮ್ಮ ಮತ ಬ್ಯಾಂಕ್‌ಗೆ ನಷ್ಟ ಉಂಟಾಗಬಹುದೆಂಬ ಮೊದಲಿನ ಲೆಕ್ಕಚಾರವನ್ನು ಯಡಿಯೂರಪ್ಪ ಕೊನೆಗೂ ಕೈಬಿಟ್ಟಿದ್ದಾರೆ. ಜಗದೀಶ್ ಶೆಟ್ಟರ್‌ಗೆ ತನ್ನ ಚೊಚ್ಚಲ ಬಜೆಟ್ ಮಂಡಿಸಲು ಅವಕಾಶವನ್ನು ಕೊಟ್ಟರೆ ಬಿಜೆಪಿಗೆ ಹೆಚ್ಚು ಲಾಭವಾಗಲಿದೆ ಎಂಬ ಆತಂಕಕ್ಕೆ ಒಳಗಾಗಿರುವ ಯಡಿಯೂರಪ್ಪ ಡಿಸೆಂಬರ್ 22ರಂದು ತಾನು ವಿರೋಧಿಸುತ್ತಲೇ ಬಂದಿದ್ದ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರನ್ನು ರಹಸ್ಯವಾಗಿ ಕಂಡು ಶೆಟ್ಟರ್ ಸರ್ಕಾರಕ್ಕೆ ಬಹುಮತವಿಲ್ಲ ಎಂದು ಮನವರಿಕೆ ಮಾಡಲು ಯತ್ನಿಸಿದ್ದಾರೆ. ರಾಜ್ಯಪಾಲರಿಂದ ಪೂರಕ ಪ್ರತಿಕ್ರಿಯೆ ದೊರಕದಿದ್ದಾಗ ಯಡಿಯೂರಪ್ಪ ಕೆಜೆಪಿ ಕಾರ್ಯಕರ್ತರಿಂದ ಡಿಸೆಂಬರ್ 26ರಂದು ವಿಧಾನಸೌಧ ಚಲೋ ಪ್ರತಿಭಟನೆಯನ್ನು ಆಯೋಜಿಸಿ ಬಡವರಿಗಾಗಿ ತಾನು ಜಾರಿಗೆ ತಂದ ಯೋಜನೆಗಳಿಗೆ ಸರ್ಕಾರ ಹಣ ಬಿಡುಗಡೆ ಮಾಡುವುದನ್ನು ನಿಲ್ಲಿಸಿದೆ ಎಂದು ಸರ್ಕಾರದ ರಾಜೀನಾಮೆಗೆ ಒತ್ತಾಯಿಸಿದ್ದಾರೆ. ಬಸವಕಲ್ಯಾಣದಿಂದ ಕಲ್ಯಾಣ ಕರ್ನಾಟಕ ನಿರ್ಮಾಣಕ್ಕಾಗಿ ಜನಸ್ನೇಹಿ ಯಾತ್ರೆ' ಯನ್ನು ಆರಂಭಿಸಿ, ಕೆಜೆಪಿ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸುತ್ತಾ ಯಡಿಯೂರಪ್ಪ ಚುನಾವಣಾ ಪ್ರಚಾರವನ್ನೇ ಆರಂಭಿಸಿದ್ದಾರೆ. ಲಿಂಗಾಯತರ ನಡುವೆ ತನ್ನ ಪ್ರಭಾವವನ್ನು ಗಟ್ಟಿಗೊಳಿಸಲು ವಿಶೇಷ ಗಮನ ಕೊಡುತ್ತಾ ಹುಬ್ಬಳ್ಳಿಯ ಜಬ್ಬಾರ್‌ಖಾನ್ ಹೊನ್ನಳ್ಳಿಯಂತಹ ಮುಖಂಡರನ್ನು ಸೇರಿಸಿಕೊಂಡಿದ್ದಾರೆ. ತಾನು ಈಗ ಜಾತ್ಯಾತೀತ ಎಂದು ಬಿಂಬಿಸಲೂ ಪ್ರಯತ್ನಿಸುತ್ತಿದ್ದಾರೆ.





ಈ ನಡುವೆ ಡಿಸೆಂಬರ್ 5 ರಿಂದ 13ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಸಭಾ ಅಧಿವೇಶನದಲ್ಲಿ 13 ಮಸೂದೆಗಳಿಗೆ ಏಕಪಕ್ಷೀಯವಾಗಿ ಸರ್ಕಾರ ಉಭಯ ಸದನಗಳಲ್ಲಿ ಅಂಗೀಕಾರ ಪಡೆದುಕೊಂಡಿತು. ಅಂಗೀಕರಿಸಲಾದ ಮಸೂದೆಗಳಲ್ಲಿ ವಿವಾದಾಸ್ಪದವಾದ ಗೋಹತ್ಯೆ ನಿಷೇದ ಮಸೂದೆ ಹಾಗೂ ಖಾಸಗಿ ವಿಶ್ವವಿದ್ಯಾಲಯ ಮಸೂದೆ ಸೇರಿವೆ. ಅನಧೀಕೃತ ಮನೆಗಳನ್ನು ಸಕ್ರಮಗೊಳಿಸುವ ಕರ್ನಾಟಕ ಭೂ ಕಂದಾಯ ಕಾಯ್ದೆ ತಿದ್ದುಪಡಿ ಮಸೂದೆ ಹಾಗೂ ದಿನಗೂಲಿ ನೌಕರರನ್ನು ಕಾಯಂಗೊಳಿಸುವ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಮಸೂದೆಗಳು ಸ್ವಾಗತಾರ್ಹವಾಗಿದ್ದರೂ ಸದನದಲ್ಲಿ ಯಾವುದೇ ಚರ್ಚೆ ಇಲ್ಲದೆ ಮಸೂದೆಗಳನ್ನು ಅಂಗೀಕರಿಸಲಾದ ವಿಧಾನ ಆಕ್ಷೇಪಾರ್ಹವಾಗಿದೆ. ಇದರಿಂದಾಗಿ ಬಿಜೆಪಿಗೆ ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ಕನಿಷ್ಠ ಗೌರವವೂ ಇಲ್ಲ; ತನ್ನ ಅನುಕೂಲತೆಗಾಗಿ ಅವುಗಳನ್ನು ಗಾಳಿಗೆ ತೂರಲು ಅದು ಹೇಸುವುದಿಲ್ಲ ಎಂದು ಸಾಬೀತಾಗಿದೆ.

ಅದೇ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಫೆಬ್ರವರಿ 11ರಿಂದ ವಿಧಾನ ಮಂಡಲದ ಬಜೆಟ್ ಅಧಿವೇಶನ ನಡೆಸಲು ಸರ್ಕಾರ ಉದ್ದೇಶಿಸಿದೆ ಎನ್ನಲಾಗುತ್ತಿದೆ. ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವ ಮುನ್ನವೇ ಜನಪ್ರಿಯ ಯೋಜನೆಗಳ ಬಜೆಟ್ ಮಂಡಿಸಲು ಹಣಕಾಸು ಖಾತೆಯನ್ನು ಹೊಂದಿರುವ ಜಗದೀಶ್ ಶೆಟ್ಟರ್ ಸಿದ್ಧತೆ ನಡೆಸುತ್ತಿದ್ದಾರೆ. ಆದರೆ ಇದಕ್ಕೆ ಯಡಿಯೂರಪ್ಪ ಅವಕಾಶ ನೀಡುತ್ತಾರೋ ಎಂಬುದನ್ನು ಕಾದು ನೋಡಬೇಕಾಗಿದೆ. ಅಷ್ಟರೊಳಗೆ ಸರ್ಕಾರವನ್ನು ಉರುಳಿಸಲು ಕಾರ್ಯತಂತ್ರ ರೂಪಿಸಿರುವಂತೆ ಕಾಣುತ್ತಿರುವ ಯಡಿಯೂರಪ್ಪ ಸರ್ಕಾರವನ್ನು ಬಿಟ್ಟು ಬರಲು ತಮ್ಮ ಬೆಂಬಲಿಗರಿಗೆ ಜನವರಿ 20ರ ಗಡುವು ನೀಡಿದ್ದಾರೆ. ಶೆಟ್ಟರ್ ಸರ್ಕಾರವನ್ನು ಬೀಳಿಸುವ ಅನಿವಾರ್ಯತೆಯನ್ನು ತಮ್ಮ ನಿಕಟವರ್ತಿ ಸಚಿವ–ಶಾಸಕರಿಗೆ ಅವರು ಮನವರಿಕೆ ಮಾಡಿದ್ದಾರೆ ಎನ್ನಲಾಗಿದ್ದು ಅವರು ಸೂಚಿಸಿದ ಅವಧಿಯಲ್ಲಿ ಎಲ್ಲರೂ ರಾಜೀನಾಮೆ ನೀಡುವಂತೆ ಮಾನಸಿಕವಾಗಿ ಸಿದ್ಧಪಡಿಸಲಾಗಿದೆ ಎಂದು ಹೇಳಲಾಗುತ್ತಿದೆ. ರಾಜೀನಾಮೆಗೆ ಮುಂದಾಗುತ್ತಿರುವ ಶಾಸಕರನ್ನು ಒಲಿಸಿಕೊಳ್ಳಲು ಬಿಜೆಪಿ ಆರ್‌ಎಸ್‌ಎಸ್ ಮಾರ್ಗದರ್ಶನದಲ್ಲಿ ಪ್ರತಿತಂತ್ರವನ್ನು ರೂಪಿಸುತ್ತಿರುವುದು ಅಷ್ಟೇ ಸತ್ಯವಾಗಿದೆ. ಆರ್. ಅಶೋಕ್, ಕೆ.ಎಸ್. ಈಶ್ವರಪ್ಪ ಸದಾನಂದಗೌಡ ಹಾಗೂ ಜಗದೀಶ್ ಶೆಟ್ಟರ್ ನೇತೃತ್ವದ ತಂಡಗಳನ್ನು ರಚಿಸಿಕೊಂಡು, ತಮ್ಮೊಳಗೆ ಜಿಲ್ಲೆಗಳನ್ನು ಹಂಚಿಕೊಂಡು ಪಕ್ಷವನ್ನು ಬಲಪಡಿಸುವುದಕ್ಕೆ ಗಮನ ನೀಡುತ್ತಾರೆ. ತನ್ನ ಸರ್ಕಾರವನ್ನು ಉರುಳಿಸಿದರೆ ಉತ್ತರ ಕರ್ನಾಟಕದ ಜನ ಕ್ಷಮಿಸುವುದಿಲ್ಲ ಎಂದು ಹೇಳುವ ಮೂಲಕ ಜಗದೀಶ್ ಶೆಟ್ಟರ್ ಪ್ರಾದೇಶಿಕ ಭಾವನೆಯನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. ಸರ್ಕಾರವನ್ನು ಉರುಳಿಸುವ ಬೆದರಿಕೆಯನ್ನು ಯಡಿಯೂರಪ್ಪ ಹಾಕುತ್ತಿದ್ದರೂ ಸರ್ಕಾರ ಬೀಳಿಸುವುದು ಯಾರಿಗೂ ಬೇಕಾಗಿಲ್ಲ. ಹೆಚ್ಚುಕಾಲ ಅಧಿಕಾರದಲ್ಲಿ ಇದ್ದಷ್ಟು ಹೆಚ್ಚು ಬಾಚಿಕೊಳ್ಳಬಹುದೆಂಬುದೇ ಅವರ ಲೆಕ್ಕಚಾರ. ಹೆಚ್ಚು ಹಾಲು ಹಿಂಡುವ ಖಾತೆಗಳು ಕೆಜೆಪಿ ಪರ ಮಂತ್ರಿಗಳ ಕೈಯಲ್ಲೇ ಇವೆ. ಯಡಿಯೂರಪ್ಪ ಬೆಂಬಲಿಗ ಸಚಿವ–ಶಾಸಕರು ತೀವ್ರಗೊಂದಲಕ್ಕೆ ಈಡಾಗಿದ್ದು ಸರ್ಕಾರದಲ್ಲಿ ಮುಂದುವರೆಯಬೇಕೇ ಅಥವ ಯಡಿಯೂರಪ್ಪ ಅವರೊಂದಿಗೆ ಹೋಗಬೇಕೇ ಎಂಬುದನ್ನು ನಿರ್ಧರಿಸಲು ಸಾಧ್ಯವಾಗದೆ ಒದ್ದಾಡುವಂತಾಗಿದೆ. ಒಟ್ಟಾರೆಯಾಗಿ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಬಿಜೆಪಿ–ಕೆಜೆಪಿ ನಡುವಿನ ಕದನ ಕುತೂಹಲಕಾರಿ ತಿರುವುಗಳನ್ನು ಪಡೆಯುತ್ತಿದೆ.

ಈ ನಡುವೆ ಡಿಸಿಎಂ ಕೆ.ಎಸ್. ಈಶ್ವರಪ್ಪ ಮನೆಗಳ ಮೇಲೆ ಅಕ್ರಮ ಆಸ್ತಿಗಳಿಕೆ ಆರೋಪದ ಹಿನ್ನೆಲೆಯಲ್ಲಿ ಲೋಕಾಯುಕ್ತ ದಾಳಿ ನಡೆದಿದ್ದು ಬಿಜೆಪಿಯ ಹಿನ್ನೆಡೆಗೆ ಮತ್ತಷ್ಟು ಕಾರಣವಾಗಲಿದೆ. ಯಡಿಯೂರಪ್ಪ ಅದನ್ನು ಬಿಜೆಪಿಯ ವಿರುದ್ಧ ಬಳಸಿಕೊಳ್ಳತೊಡಗಿದ್ದಾರೆ.

ಬಿಜೆಪಿ–ಕೆಜೆಪಿ ನಡುವಿನ ಕಿತ್ತಾಟ ರಾಜ್ಯದ ಆಡಳಿತದ ಮೇಲೆ ಗಂಭೀರವಾದ ಪರಿಣಾಮವನ್ನು ಉಂಟುಮಾಡಿದೆ. ರಾಜ್ಯದಲ್ಲಿ ಇಂದು ಸರ್ಕಾರವೇ ಇಲ್ಲದಂತಾಗಿದೆ. ಮಂತ್ರಿಗಳು–ಶಾಸಕರು ಜನರ ಪ್ರಶ್ನೆಗಳಿಗಾಗಿ ಬೆನ್ನು ತಿರುಗಿಸಿದ್ದಾರೆ. ಕೃಷಿ ಉತ್ಪಾದನೆ ಕುಸಿದಿದೆ. ನೀರ ತೆರಿಗೆಗಳ ಪ್ರಮಾಣ ಶೇ. 7ರಷ್ಟು ಹೆಚ್ಚಾಗಿದೆ. ಅಗತ್ಯ ವಸ್ತುಗಳ ಬೆಲೆಗಳು ಸಿಕ್ಕಾಪಟ್ಟೆ ಹೆಚ್ಚಾಗಿವೆ. ರೈತರು ಭೂಮಿಯನ್ನು ಕಳೆದಕೊಳ್ಳುತ್ತಿದ್ದಾರೆ. ಶೇ. 75ರಷ್ಟಿರುವ ಸಣ್ಣ ಹಿಡುವಳಿದಾರರ ಪೈಕಿ ಕೇವಲ ಶೇ. 37ರಷ್ಟು ರೈತರ ಕೈಯಲ್ಲಿ ಮಾತ್ರ ಭೂಮಿ ಉಳಿದಿದೆ. ಮತ್ತೊಂದು ವಿಶ್ವ ಬಂಡವಾಳ ಹೂಡಿಕೆಗೆ ಬರುವ ಜೂನ್ ತಿಂಗಳಲ್ಲಿ ದಿನಗಳನ್ನು ನಿಗದಿ ಮಾಡಲಾಗಿದೆ. ಇಡೀ ಸರಪಳಿ ಯಂತ್ರ ಕುಸಿದು ಬಿದ್ದಿದ್ದು ವಿವಿಧ ದುಡಿಯುವ ಜನವಿಭಾಗಗಳ ಬದುಕಿನ ಸಮಸ್ಯೆಗಳು ತೀವ್ರಗೊಂಡಿವೆ. ಇದರ ಜೊತೆಯಲ್ಲಿ ರಾಜ್ಯದಲ್ಲಿ ಮಹಿಳೆಯರ ಮೇಲಿನ ಅಪರಾಧಗಳು ಹೆಚ್ಚಾಗಿವೆ. ಕೋಮುವಾದಿ ದಾಳಿಗಳು ನಿಂತಿಲ್ಲ. ಚರ್ಚುಗಳ ಮೇಲೆ ಮತ್ತೆ ದಾಳಿಗಳಾಗಿವೆ.

ರಾಜ್ಯ ಬಿಜೆಪಿಯ ಈ ಆಂತರಿಕ ಬೆಳವಣಿಗೆಗಳಲ್ಲಿ ಒಂದು ಸ್ವಾಗತಾರ್ಹ ಅಂಶವನ್ನು ಗಮನಿಸದೆ ಇರಲಾಗದು. ಅದು ಯಾವುದೆಂದರೆ–ರಾಜ್ಯದ ರಾಜಕೀಯದಲ್ಲಿ ತನ್ನ ಬೇರುಗಳನ್ನು ಆಳಕ್ಕೆ ಇಳಿಸಲು ಯಶಸ್ವಿಯಾಗತೊಡಗಿದ್ದ ಕೋಮುವಾದಿ ಪಕ್ಷ ಛಿದ್ರಗೊಳ್ಳುತ್ತಿರುವ ವಿದ್ಯಮಾನ. ಆದರೆ ಆರ್‌ಎಸ್‌ಎಸ್ ಬೆಂಬಲ ಬಿಜೆಪಿಗೆ ಇರುವವರೆಗೂ ಬಿಜೆಪಿಯ ಅಪಾಯವನ್ನು ಕಡೆಗಣಿಸಲಾಗದು. ಬಿಜೆಪಿಯನ್ನು ಬಿಟ್ಟು ಬಂದಿರುವ ಯಡಿಯೂರಪ್ಪ ಮತ್ತೆ ಲಜ್ಜೆಗೆಟ್ಟು ಬಿಜೆಪಿಗೆ ಮರಳುವುದೇ ಇಲ್ಲ ಎಂದೂ ಹೇಳಲಾಗದು.

ಅಧಿಕಾರದ ಕನಸು ಕಾಣುತ್ತಿರುವ 'ಕೈ' ಪಕ್ಷ :
ಪುಟ 15 ಕ್ಕೆ

ಉಡುಪಿ ಕೃಷ್ಣ ದೇವಾಲಯ ಆವರಣದಲ್ಲಿ ಲಾಠಿಚಾರ್ಜ್ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಕ ಖಂಡನೆ, ಪ್ರತಿಭಟನೆ

ಮಡೆಸ್ನಾನ ಮತ್ತು ಪಂಕ್ತಿಭೇದವನ್ನು ನಿಲ್ಲಿಸಬೇಕೆಂದು ಆಗ್ರಹಿಸಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ ಕೊನೆಯಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆದ ವಾಹನ ಪ್ರಚಾರ ಜಾಥಾ ಹಾಗೂ ಪಾದಯಾತ್ರೆಗಳು ಅಂತಿಮವಾಗಿ ಡಿಸೆಂಬರ್ 27ರ ಅಪರಾಹ್ನ ಉಡುಪಿ ಮಠದ ಪ್ರವೇಶದ್ವಾರದಲ್ಲಿ ಬೃಹತ್ ಪ್ರತಿಭಟನೆಯಾಗಿ ಪರಿವರ್ತನೆಯಾದಾಗ, ಉಡುಪಿ ಪೊಲೀಸರು ಏಕಾಏಕಿ ನಡೆಸಿದ ಲಾಠಿಚಾರ್ಜ್ ಮತ್ತು ಹಿಂಸೆಯ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ.

ಡಿಸೆಂಬರ್ 27ರ ಸಾಯಂಕಾಲವೇ ಮಂಗಳೂರಿನಲ್ಲಿ ಡಿವೈಎಫ್ಐ ಪ್ರತಿಭಟನೆ:

ಉಡುಪಿ ಪೊಲೀಸು ಲಾಠಿ ಚಾರ್ಜು ಅಪರಾಹ್ನ ಸುಮಾರು 3 ಗಂಟೆಯ ವೇಳೆಗೆ ನಡೆದಿದ್ದರೆ, ಮಂಗಳೂರಿನಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ಅದೇ ದಿನ ಸಾಯಂಕಾಲವೇ ಪ್ರತಿಭಟನೆ ನಡೆಯಿತು. ಉಡುಪಿಯ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದವರೂ, ಲಾಠಿ ಚಾರ್ಜ್‌ನಿಂದ ಗಾಯಗೊಂಡವರು ಕೆಲವರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಲಾಠಿ ಪ್ರಹಾರ ನಡೆಸಿದುದ್ದನ್ನು ಖಂಡಿಸಿ, ದ.ಕ. ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯಲ್ಲಿ ಡಿವೈಎಫ್ಐ ಮಂಗಳೂರು ನಗರ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಎಸ್‌ಎಫ್ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ರಝಾಕ್ ಮೊಂಟೆಪದವು, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಸುಕನ್ಯಾ ಮತ್ತಿತರರು ಭಾಗವಹಿಸಿದ್ದರು.

ಪೊಲೀಸರಿಂದ ತೀವ್ರ ಲಾಠಿ ಹೊಡೆತ ತಿಂದಿದ್ದ ನಿತಿನ್ ಕುತ್ತಾರ್ ಈ ಪ್ರತಿಭಟನಾ ಪ್ರದರ್ಶನದಲ್ಲಿ ಪತ್ರಕರ್ತರಿಗೆ ಘಟನೆಯ ವಿವರ ನೀಡಿದರು.

ಡಿಸೆಂಬರ್ 28ರಂದು ಉಡುಪಿ ಬಸ್‌ಸ್ಟ್ಯಾಂಡಿನಲ್ಲಿ ಪ್ರತಿಭಟನೆ:

ಹಿಂದಿನ ದಿನ ಮಠದ ಬಳಿ ಪ್ರತಿಭಟಿಸಿ ಲಾಠಿ ಪ್ರಹಾರಕ್ಕೆ ಒಳಗಾಗಿದ್ದರೂ, ಡಿಸೆಂಬರ್ 28ರಂದು ಲಾಠಿ ಚಾರ್ಜನ್ನು ಖಂಡಿಸಿ ಉಡುಪಿ ಸರ್ವಿಸ್ ಬಸ್‌ಸ್ಟ್ಯಾಂಡಿನ ಬಳಿ ಬೃಹತ್ ಪ್ರತಿಭಟನೆ ನಡೆಯಿತು. ಹಿಂದಿನ ದಿನ ಬಂಧನಕ್ಕೊಳಗಾಗಿ ತಡರಾತ್ರಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲ್ಪಟ್ಟು ತಾತ್ಕಾಲಿಕ ಜಾಮೀನು ಪಡೆದಿದ್ದ ಕೆಲವರು ಮರುದಿನದ ಪ್ರತಿಭಟನೆ ವೇಳೆ ಹಾಜರಿದ್ದರು.

ಪೊಲೀಸರು ನಿಷ್ಪಕ್ಷಪಾತವಾಗಿ ವರ್ತಿಸದೆ, ಬಿಜೆಪಿ ಸರ್ಕಾರದ ಏಜೆಂಟರಂತೆ ವರ್ತಿಸಿದ್ದಾರೆ ಎಂಬುದಾಗಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ನಾಯಕಿ ಕೆ.ಎಸ್. ಲಕ್ಷ್ಮಿ ಟೀಕಿಸಿದರು. ಸಿಪಿಐ(ಎಂ) ಪಕ್ಷವು ಇದನ್ನು ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಒಯ್ಯಲಿದೆ ಎಂದು ಅವರು ಹೇಳಿದರು.

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿ ಜಿಲ್ಲೆಯ ಮುಖಂಡರಾದ ವಿಠಲ ಪೂಜಾರಿ ಮಾತನಾಡಿದರು. ಪಕ್ಷದ ಉಡುಪಿ ಜಿಲ್ಲೆಯ ಮುಖಂಡರಾದ ಪಿ. ವಿಶ್ವನಾಥ ರೈ, ದೋಗು ಸುವರ್ಣ, ವೆಂಕಟೇಶ್ ಕೋಣಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನಾಕಾರರಿಗಿಂತಲೂ ಪೊಲೀಸರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೆಂದು ಪತ್ರಿಕೆಗಳು ವರದಿ ಮಾಡಿವೆ.



ವರದಿ : ವಾ.ಉ.

ತಪ್ಪಿಸಿಕೊಂಡ ಮೂವರು ಪಕ್ಷ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲು

ಡಿಸೆಂಬರ್ 27ರ ಪ್ರತಿಭಟನೆ ವೇಳೆ 182 ಮಂದಿಯನ್ನು ಪೊಲೀಸರು ಬಂಧಿಸಿ ವಶಕ್ಕೆ ತೆಗೆದುಕೊಂಡಿದ್ದು, ತಡರಾತ್ರಿಯಲ್ಲಿ 12–30 ಗಂಟೆ ವೇಳೆಗೆ (ವಾಸ್ತವವಾಗಿ ಡಿಸೆಂಬರ್ 28ರಂದು) ಉಡುಪಿಯಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಅಲ್ಲಿನವರೆಗೆ ಡಿಎಆರ್ ಪೊಲೀಸ್ ಮೈದಾನದಲ್ಲಿ ನಿರ್ಬಂಧದಲ್ಲಿಟ್ಟಿದ್ದರು. ಯಾವ ವಿಧಿಗಳ ಅನ್ವಯ ಪ್ರಕರಣ ದಾಖಲಿಸಬೇಕೆಂದು ಮೇಲಿನವರ (ಸರ್ಕಾರದ) ಆದೇಶಕ್ಕಾಗಿ ಪೊಲೀಸರು ಕಾಯುತ್ತಿದ್ದರೆಂದು ತಿಳಿದುಬರುತ್ತದೆ. ತಡರಾತ್ರಿಯ ವರೆಗೆ ನಿಲ್ಲಿಸಿಕೊಳ್ಳಲು ಬೇರೇನೂ ಕಾರಣಗಳಿರಲಿಲ್ಲ.

ವಶಕ್ಕೆ ತೆಗೆದುಕೊಂಡ ಪ್ರತಿಭಟನಾಕಾರರನ್ನು ರಾತ್ರಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಮೂರು ಮಂದಿ ನಾಪತ್ತೆಯಾಗಿದ್ದರು. ಪೊಲೀಸರ ಕಸ್ಟಡಿಯಿಂದ ತಪ್ಪಿಸಿಕೊಂಡ ಪ್ರಕರಣವನ್ನು ವೆಂಕಣಮ್ಮ ಬಾಗೆಪಲ್ಲಿ, ಕೆ. ವೆಂಕಟೇಶ್ ರಾಮನಗರ ಮತ್ತು ವಿವೇಕ ಮೈಸೂರು – ಇವರ ಮೇಲೆ ಪೊಲೀಸರು ಹೆಚ್ಚುವರಿಯಾಗಿ ಹೂಡಿದ್ದಾರೆ.

ಲಾಠಿ ಪ್ರಹಾರ ಬಿಜೆಪಿ ಸರ್ಕಾರ, ಪೊಲೀಸ್ ಮತ್ತು ಪೇಜಾವರ ಸ್ವಾಮಿಗಳ ಪಿತೂರಿ: ಶ್ರೀರಾಮ ರೆಡ್ಡಿ ಆರೋಪ

ಮಡೆಸ್ನಾನ ಮತ್ತು ಪಂಕ್ತಿಭೇದ ವಿರೋಧಿಸಿ ಪ್ರತಿಭಟನೆ ಮಾಡಿದವರ ಮೇಲೆ ಲಾಠಿ ಪ್ರಹಾರ ಮಾಡಿದ್ದು ಅನಾಗರಿಕ–ಪೈಶಾಚಿಕ ಕೃತ್ಯವಾಗಿದೆ. ಫ್ಯಾಸಿಸ್ಟ್ ಧೋರಣೆಯ ಬಿಜೆಪಿ ಸರ್ಕಾರ, ಪೊಲೀಸ್ ಮತ್ತು ಪೇಜಾವರ ಸ್ವಾಮಿಗಳ ಪಿತೂರಿಯಿಂದ ಎಸಗಲಾಗಿದೆ – ಎಂದು ಡಿಸೆಂಬರ್ 28ರಂದು ಸಿಪಿಐ (ಎಂ) ರಾಜ್ಯಸಮಿತಿ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆಡ್ಡಿ ಉಡುಪಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು. ಈ ಘಟನೆಯಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.

ಕಳೆದ ಜನವರಿಯಲ್ಲಿ ಉಡುಪಿಯಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಈ ಬಾರಿಯೂ ಪ್ರತಿಭಟನೆಯ ಮಾಹಿತಿ ನೀಡಲಾಗಿತ್ತು. ಆದಾಗ್ಯೂ ಪೊಲೀಸರು ಮತ್ತು ಜಿಲ್ಲಾಡಳಿತ ಕೃಷ್ಣ ಮಠದ ಪ್ರತಿನಿಧಿಗಳೊಡನೆ ಮಾತುಕತೆಗೆ ಅವಕಾಶ ಮಾಡಿಕೊಡಲಿಲ್ಲ. ಮುಜರಾಯಿ ಸಚಿವರೂ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಿಲ್ಲ. ಲಾಠಿ ಪ್ರಹಾರ ನಡೆಸಿ ಆ ಬಳಿಕ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಲಾಗಿದೆ ಎಂದು ಪ್ರಕರಣ ದಾಖಲಿಸಲಾಗಿದೆ. ಕಮ್ಯೂನಿಸ್ಟ್ ಚಳವಳಿ ಹುಟ್ಟಿದ್ದೂ ಜೈಲಿನಲ್ಲಿ. ಆದ್ದರಿಂದ ಜೈಲು–ಮೊಕದ್ದಮೆಗಳಿಗೆ ಯಾವುದೇ ಕಾರಣಕ್ಕೂ ತಾವು ಹೆದರುವವರಲ್ಲ ಎಂದು ಶ್ರೀರಾಮ ರೆಡ್ಡಿ ಎಚ್ಚರಿಕೆ ನೀಡಿದರು.

ಪೇಜಾವರ ಸ್ವಾಮೀಜಿ ಮಠವನ್ನು ರಾಜಕೀಯ ಉದ್ದೇಶಕ್ಕೆ ಬಳಸುತ್ತಿದ್ದಾರೆ. ದಲಿತರ ಕೇರಿಗೆ ಭೇಟಿ ನೀಡಿದರೆ ಸಾಲದು. ಮಠದಲ್ಲಿಯೂ ಸಮಾನತೆಯನ್ನು ಅಳವಡಿಸಿಕೊಳ್ಳಬೇಕು ಎಂದು ಶ್ರೀರಾಮ ರೆಡ್ಡಿ ನುಡಿದರು.

ಪಕ್ಷದ ರಾಜ್ಯಸಮಿತಿ ಮುಖಂಡರಾದ ಜಿ.ಎನ್.ನಾಗರಾಜ್, ಮಾರುತಿ ಮಾನ್ಪಡೆ, ಯು. ಬಸವರಾಜು, ಕೆ. ಶಂಕರ್, ಬಾಲಕೃಷ್ಣ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಂಗಳೂರಿನಲ್ಲಿ ಸಿಪಿಐ(ಎಂ) ಪಕ್ಷದಿಂದ ಪ್ರತಿಭಟನೆ:

ಡಿಸೆಂಬರ್ 28ರ ಪೂರ್ವಾಹ್ನ ದ.ಕ. ಜಿಲ್ಲಾಧಿಕಾರಿ ಕಛೇರಿ ಎದುರುಗಡೆ, ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿಯ ವತಿಯಿಂದ ಉಡುಪಿಯ ಲಾಠಿ ಚಾರ್ಜು ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಕಾರರನ್ನು ಉದ್ದೇಶಿಸಿ ಪಕ್ಷದ ರಾಜ್ಯಮುಖಂಡರಾದ ಬಿ. ಮಾಧವ, ಕೆ.ಆರ್ ಶ್ರೀಯಾನ್ ಮತ್ತು ವಸಂತ ಆಚಾರಿ ಮಾತನಾಡಿದರು. ಪಕ್ಷದ ಮಂಗಳೂರು ನಗರ ಸಮಿತಿಯ ಸುನಿಲ್ ಕುಮಾರ್ ಬಜಾಲ್, ಸುರೇಶ್ ಬಜಾಲ್ ಕೂಡಾ ಮಾತನಾಡಿದರು.

ಪುಟ 14 ಕ್ಕೆ

ದಿಲ್ಲಿ ವಿದ್ಯಾರ್ಥಿನಿ ಸಾವು: ಮಂಗಳೂರಿನಲ್ಲಿ ಮಹಿಳಾ ಸಂಘಟನೆಗಳ ಪ್ರತಿಭಟನೆ

ದಿಲ್ಲಿ ಬಸ್ಸಿನಲ್ಲಿ ಸಾಮೂಹಿಕ ಅತ್ಯಾಚಾರಕ್ಕೀಡಾಗಿ ಸಾವಿಗೀಡಾದ ಅರೆವೈದ್ಯಕೀಯ ವಿದ್ಯಾರ್ಥಿನಿ ಸಾವಿನ ಹಿನ್ನೆಲೆಯಲ್ಲಿ ಜನವಾದಿ ಮಹಿಳಾ ಸಂಘಟನೆ ಮತ್ತು ಡಿವೈಎಫ್ಐ ಯುವತಿಯರ ಸಮಿತಿಗಳ ನೇತೃತ್ವದಲ್ಲಿ ಡಿಸೆಂಬರ್ 29ರಂದು ದ.ಕ. ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಇಡೀ ದೇಶದಲ್ಲೇ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ. ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುತ್ತಿರುವ ಪುಂಡರಿಗೆ ಕಾನೂನಿನ ಭಯ ಇಲ್ಲವಾಗಿದೆ. ಹಾಗಾಗಿ ಅತ್ಯಾಚಾರ ಪ್ರಕರಣಗಳ ಶೀಘ್ರ ತೀರ್ಪಿಗಾಗಿ ತ್ವರಿತಗತಿ ನ್ಯಾಯಲಯಗಳನ್ನು ಸ್ಥಾಪಿಸಬೇಕು. ಈ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ತರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಈ ಎರಡು ಸಂಘಟನೆಗಳ ಮುಖಂಡರಾದ ಸಾಜಿದಾ, ಹೇಮಲತಾ, ಪದ್ಮಾವತಿ ಶೆಟ್ಟಿ, ಜಯಂತಿ ಬಿ.ಶೆಟ್ಟಿ, ನಳಿನಾಕ್ಷಿ ಜಿ.ಎಸ್., ವಿಲಾಸಿನಿ, ವಾಣಿ ಉಚ್ಚಿಲ್, ಪ್ರಮೀಳಾ ಶಕ್ತಿನಗರ, ಸೌಮ್ಯ, ಮಲ್ಲಿಕಾ ಮತ್ತಿತರರು ಪಾಲ್ಗೊಂಡಿದ್ದರು.



ಜನಶಕ್ತಿ
ಕನ್ನಡ ವಾರಪತ್ರಿಕೆ


ಬೆಲೆ ಕುಸಿತ : ಹಾಲು ಉತ್ಪಾದಕರು ವಿಧಾನಸೌಧದತ್ತ

ಹೈನುಗಾರಿಕೆ ಉಳಿಸಿ ಎಂಬ ಹೋರಾಟ

ದೇಶದಲ್ಲಿ ಗಂಭೀರವಾದ ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ಲಕ್ಷ ಲಕ್ಷ ರೈತರು ಆತ್ಮಹತ್ಯೆಗಳಿಗೆ ಗುರಿಯಾಗುತ್ತಿದ್ದಾರೆ. ಕೋಟಿ ಕೋಟಿ ರೈತರು ತಮ್ಮ ತಂಡು ಭೂಮಿಗಳನ್ನು ಕಳೆದುಕೊಂಡು ಕೃಷಿ ಕೂಲಿಕಾರರಾಗುತ್ತಿದ್ದಾರೆ. ಸರ್ಕಾರಗಳ ಜಾಗತೀಕರಣ, ಉದಾರೀಕರಣ ದೋರಣೆಗಳ ಫಲವಾಗಿ ಈ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಇಂತಹ ಸ್ಥಿತಿಯಲ್ಲಿ ರಾಜ್ಯದಲ್ಲಿ 'ಹೈನುಗಾರಿಕೆ' ಲಕ್ಷಾಂತರ ಕೂಲಿಕಾರರು, ಮತ್ತು ರೈತರ ಕುಟುಂಬಗಳಿಗೆ ಜೀವನಾಧಾರವಾಗಿದೆ. ಈಗ ಸದ್ಯ ಕೋಲಾರ-ಚಿಕ್ಕಬಳ್ಳಾಪುರ, ಬೆಂಗಳೂರು ನಗರ-ಬೆಂಗಳೂರು-ಗ್ರಾಮಾಂತರ-ರಾಮನಗರ, ತುಮಕೂರು, ಮಂಡ್ಯ, ಮೈಸೂರು, ಗುಲ್ಬರ್ಗಾ-ಬೀದರ್, ಶಿವಮೊಗ್ಗ ಹೀಗೆ ರಾಜ್ಯದ 13 ಜಿಲ್ಲಾ ಒಕ್ಕೂಟಗಳಿಗೆ ಸೇರಿದ 13,294 ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ 21,90,190 ಉತ್ಪಾದಕರಿಂದ ಪ್ರತಿದಿನ ಸಂಗ್ರಹಿಸಲಾಗುತ್ತಿರುವ ಒಟ್ಟು ಹಾಲಿನ ಪ್ರಮಾಣ 52 ಲಕ್ಷ ಲೀಟರ್, ಒಂದೆರಡು ತಿಂಗಳ ಹಿಂದೆ ಲೀಟರ್ ಹಾಲಿಗೆ ನೀಡುತ್ತಿದ್ದ ಸರಾಸರಿ ಬೆಲೆ 21-00 ರೂ. ಆದರೆ ಈಗ ನೀಡಲಾಗುತ್ತಿರುವ ದರ ಕೇವಲ 17.50ರೂ. ಮಾತ್ರ. ಆದರೆ ಅದೇ ಸಮಯದಲ್ಲಿ 2007-08ರಲ್ಲಿ ಟನ್ 7200-00ರೂ ಇದ್ದ ಪಶು ಅಹಾರದ ದರಗಳನ್ನು 16,300-00 ರೂ.ಗೆ ಏರಿಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಕೆ.ಎಂ.ಎಫ್.ನ ಆಕ್ರಮಗಳು, ಭ್ರಷ್ಟಾಚಾರ ಹಾಗು ಮಾರುಕಟ್ಟೆಯನ್ನು ಮಾಡುವಲ್ಲಿನ ಅಸಮರ್ಥತೆ. ಈ ಗಂಭೀರ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿ ಹೈನುಗಾರಿಕೆಯ ಉಳಿವಿಗಾಗಿ, ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದು ತೀರ ಅಗತ್ಯವಾಗಿದೆ. ಇದನ್ನು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿ, ವಿಸ್ತರಿಸುವ ಬದಲಿಗೆ ವಾಲ್‌ಮಾರ್ಟ್‌ನಂತಹ ವಿದೇಶಿ ಕಂಪೆನಿಗಳು, ದೇಶಿಯ ಭಾರತಿ, ಹೆರಿಟೇಜ್‌ನಂತಹ ಕಂಪೆನಿಗಳಿಗೆ ಲೂಟಿಗೆ ಅವಕಾಶ ಮಾಡಲು 'ರೈತಾಪಿ ಆಧಾರಿತ ಕೃಷಿ'ಯನ್ನು 'ಕಂಪೆನಿ ಕೃಷಿ'ಯನ್ನಾಗಿಸುವ ಭಾಗವಾಗಿ 'ಹೈನುಗಾರಿಕೆ'ಯನ್ನು ಸಹ ಖಾಸಗಿಕರಣಗೊಳಿಸಲು ಮಿಲ್ಕ್ ಆಂಡ್ ಮಿಲ್ಕ್‌ಪ್ರಾಡಕ್ಟ್ಸ್ ಆರ್ಡರ್ (MMPO)ಗೆ [illegible] ತಿದ್ದುಪಡಿಗಳನ್ನು ಕೇಂದ್ರ ಸರ್ಕಾರ ತರುತ್ತಿದೆ. 'ಕೃಷಿ ಕ್ಷೇತ್ರ'ದಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಸಂಘಟಿಸುವುದರ ಮೂಲಕ ಕೇಂದ್ರ ಸರ್ಕಾರದ ಇದೇ ನೀತಿಗಳನ್ನು ಜಾರಿ ಮಾಡುವುದರಲ್ಲಿ ಬಿಜೆಪಿ ಸರ್ಕಾರ ಮುಂಚೂಣಿಯಲ್ಲಿದೆ. ಅಲ್ಲದೆ ಬಿಜೆಪಿ ಸರ್ಕಾರ, ಕೋಮು ವಿಭಜನೆಯ ರಾಜಕೀಯ ದೃಷ್ಟಿಯಿಂದ ವಿಧಾನಸಭೆಯಲ್ಲಿ ಅಂಗೀಕಾರ ಮಾಡಿರುವ ' ಜಾನುವಾರು ಹತ್ಯೆ ನಿಷೇದ ಕಾಯ್ದೆ' ಪಶುಗಳ ಮಾರಾಟ, ದರ ಇಳಿಕೆಗೆ ಕಾರಣವಾಗಿದೆ ಮಾತ್ರವಲ್ಲದೆ ರೈತರಿಗೆ ಇನ್ನು ಹಲವಾರು ಸಮಸ್ಯೆಗಳನ್ನು ಉಂಟುಮಾಡಿದೆ. ಇದನ್ನು ನಾವು ತೀವ್ರವಾಗಿ ವಿರೋಧಿಸಬೇಕಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ 'ಹೈನುಗಾರಿಕೆ'ಯನ್ನು ಉಳಿಸಿ, ರೈತರನ್ನು 'ರಕ್ಷಿಸಲು' ಮೇಲಿನ ಬೇಡಿಕೆಗಳನ್ನು ಈಡೇರಿಸಬೇಕು. ಮುಖ್ಯವಾಗಿ ಫೆಬ್ರವರಿ 2013ರಲ್ಲಿ ಬರಲಿರುವ ಬಜೆಟ್‌ನಲ್ಲಿ ಹಾಲು ಉತ್ಪಾದಕರಿಗೆ ಈಗ ನೀಡಲಾಗುತ್ತಿರುವ 2-00 ರೂಗಳನ್ನು ಮತ್ತಷ್ಟು ಹೆಚ್ಚಿಸಿಯಾದರೂ ಪ್ರತಿ ಲೀಟರ್ ಹಾಲಿಗೆ ಕನಿಷ್ಠ 25-00 ರೂಗಳನ್ನು ಖಾತರಿ ಮಾಡಬೇಕು ಮತ್ತು ಸರ್ಕಾರಿ ಶಾಲೆ ಹಾಗು ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಬಿಸಿಯೂಟದ ಜೊತೆಗೆ ಹಾಲನ್ನು ನೀಡುವಂತಹ ಅಂಶಗಳನ್ನು ಘೋಷಣೆಯನ್ನು ಸರ್ಕಾರ ಮಾಡಬೇಕಾಗಿದೆ.

ಹೀಗಾಗಿ 'ರೈತರ ರಕ್ಷಣೆ, ಹೈನುಗಾರಿಕೆಯ ಉಳಿವಿಗಾಗಿ' ಜನವರಿ 21 ರಂದು 'ಕರ್ನಾಟಕ ಪ್ರಾಂತ ರೈತ ಸಂಘ'(ಕೆಪಿಆರ್‌ಎಸ್) ಮತ್ತು 'ಹಾಲು ಉತ್ಪಾದಕರು ಹಾಗೂ ನೌಕರರ ಹೋರಾಟ ಸಮಿತಿ'ಯ ನೇತೃತ್ವದಲ್ಲಿ ಹಾಲು ಉತ್ಪಾದಕರು, ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರು ಬೃಹತ್ ಹೋರಾಟ-ವಿಧಾನ ಸೌಧ ಚಲೋವನ್ನು ನಡೆಸುತ್ತಿದ್ದಾರೆ.



ಪ್ರಮುಖ ಬೇಡಿಕೆಗಳು :

1. ರಾಜ್ಯ ಸರ್ಕಾರ ಒಂದು ಲೀಟರ್ ಹಾಲಿಗೆ ಕನಿಷ್ಠ 25-00 ರೂ ಬೆಲೆಯನ್ನು ಖಾತರಿ ಮಾಡಬೇಕು.
2. ಹಾಲಿನ ದರ ಕಡಿತ, ಹಾಲಿನ ಸಂಗ್ರಹಕ್ಕೆ ರಜೆ ಘೋಷಣೆಯಂತಹ ತೀರ್ಮಾನಗಳನ್ನು ಕೂಡಲೇ ವಾಪಸ್ಸು ಪಡೆಯಬೇಕು
3. ಪಶು ಆಹಾರ ಬೆಲೆ ಏರಿಕೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು. ಪಶು ಆಹಾರಕ್ಕಾಗಿ ರಾಜ್ಯ ಸರ್ಕಾರ ಹೆಚ್ಚಿನ ಸಬ್ಸಿಡಿಯನ್ನು ನೀಡಬೇಕು. ಬರಗಾಲದ ಹಿನ್ನೆಲೆಯಲ್ಲಿ ಪಶು ಆಹಾರದ ವಿತರಣೆಯ ಪ್ರಮಾಣವನ್ನು ಹೆಚ್ಚಿಸಬೇಕು.
4. ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಹಾಗು 'ಬಹುತೇಕ ಅಪೌಷ್ಠಿಕತೆಯಿಂದ ನರಳುತ್ತಿರುವ ಸರ್ಕಾರಿ ಶಾಲೆ ಹಾಗು ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಬಿಸಿಯೂಟದ ಜೊತೆಯಲ್ಲಿ ಒಂದು ಲೋಟ ಹಾಲನ್ನು ನೀಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಈ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು.
5. ಗುಜರಾತಿನ 'ಅಮೂಲ್' ಮಾದರಿಯಲ್ಲಿ ಬೆಣ್ಣೆ, ತುಪ್ಪ, ಸಿಹಿತಿಂಡಿ ಇತ್ಯಾದಿ ವಿವಿಧ ರೀತಿಯ ಹಾಲಿನ ಉತ್ಪನ್ನಗಳನ್ನು ತಯಾರಿಸಲು ಅಗತ್ಯವಿರುವ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ನೀಡಬೇಕು ಹಾಗು ಈ ಉತ್ಪನ್ನಗಳ ಮಾರುಕಟ್ಟೆಗಾಗಿ ಪರಿಣಾಮಕಾರಿಯಾದ ವ್ಯವಸ್ಥೆಯನ್ನು ರೂಪಿಸಬೇಕು.
6. ಪಶುಗಳನ್ನು ಕೊಂಡುಕೊಳ್ಳಲು ಅಗತ್ಯವಿರುವ ಬ್ಯಾಂಕ್ ಸಾಲಗಳು ಕಡಿಮೆ ಬಡ್ಡಿಯೊಂದಿಗೆ ಸರಳವಾಗಿ ಸಿಗಬೇಕು. ವಿಮೆ, ಆರೋಗ್ಯ ಸೇವೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
7. ಹಾಲಿನ ಕಡಿತ, ರಜೆಯಂತಹ ಸ್ಥಿತಿಗೆ ಕಾರಣವಾಗಿರುವ ಸುಮಾರು 400 ಕೋಟಿ ರೂ.ಗಳ ಮೌಲ್ಯದ ಹಾಲಿನ ಪುಡಿ ಇತ್ಯಾದಿ ಹಾಲಿನ ಉತ್ಪನ್ನಗಳು ನಾಶವಾಗಿ, ನಷ್ಟಕ್ಕೆ ಕಾರಣವಾಗಿರುವ ಕೆ.ಎಂ.ಎಫ್. ಅಧ್ಯಕ್ಷರು, ಆಡಳಿತ ಮಂಡಳಿ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.
8. ಕೆ.ಎಂ.ಎಫ್. ಹಾಗು ಜಿಲ್ಲಾ ಒಕ್ಕೂಟಗಳ ವಿವಿಧ ಹಂತದಲ್ಲಿನ ಭ್ರಷ್ಟಾಚಾರವನ್ನು ತಡೆಯಬೇಕು ಮತ್ತು ಈ ಸಂಸ್ಥೆಗಳನ್ನು ಮತ್ತಷ್ಟು ಪಾರದರ್ಶಕವಾಗಿ ನಡೆಸಲು ಸಾಧ್ಯವಾಗಬೇಕು.
9. ಲಕ್ಷಾಂತರ ಕೃಷಿ ಕೂಲಿಕಾರರು, ರೈತರ ಜೀವನಾಧಾರವಾಗಿರುವ ಹೈನುಗಾರಿಕೆಯ ಕ್ಷೇತ್ರವನ್ನು ಖಾಸಗಿಕರಣಗೊಳಿಸಿ ಬಹುರಾಷ್ಟೀಯ ಕಂಪೆನಿಗಳಿಗೆ ಒಪ್ಪಿಸುವ ದೃಷ್ಟಿಯಿಂದ ಮಿಲ್ಕ್ ಆಂಡ್ ಮಿಲ್ಕ್‌ಪ್ರಾಡಕ್ಟ್ಸ್ ಆರ್ಡರ್ (MMPO)ಗೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರ ಹಾಗು ಇದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ರಾಜ್ಯ ಸರ್ಕಾರಗಳು ತನ್ನ ನೀತಿಗಳನ್ನು ಕೈಬಿಡಬೇಕು.
10. ತಾಲ್ಲೂಕನ್ನು ಒಂದು ಘಟಕವಾಗಿ ಪರಿಗಣಿಸಿ ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಇ.ಪಿ.ಎಫ್.ನ್ನು ಜಾರಿ ಮಾಡಬೇಕು. ಕೆಲಸದ ಭದ್ರತೆಯ ಜೊತೆಗೆ ಕನಿಷ್ಠ ವೇತನವನ್ನು ಜಾರಿ ಮಾಡಲು ಅಗತ್ಯವಿರುವ ವ್ಯವಸ್ಥೆಯನ್ನು ರೂಪಿಸಬೇಕು.

ಸೂಚನೆ

ಚಂದಾದಾರರು, ಏಜೆನ್ಸಿದಾರರಿಗೆ, ಜನಶಕ್ತಿಯ ಪ್ರಸಾರ, ಚಂದಾ, ಏಜೆನ್ಸಿಗಳಿಗೆ ಸಂಬಂಧಿಸಿದ ವ್ಯವಹಾರ, ವಿಚಾರಣೆ, ದೂರುಗಳು ಇತ್ಯಾದಿ ಇನ್ನೂ ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡತಕ್ಕದ್ದು.

ವಿಳಾಸ :
40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027

email :
janashakthi13.admn@gmail.com
Phone : 9483966467

ಲೈಂಗಿಕ ಆಕ್ರಮಣದ ವಿರುದ್ಧ ಭುಗಿಲೆದ್ದ ಪ್ರತಿಭಟನೆ

ದೆಹಲಿ ಅತ್ಯಾಚಾರ ಪ್ರಕರಣ ತಿಳಿದುಬಂದಂತೆ ಮಹಿಳೆ-ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳಿಂದ ರೋಸಿಹೋಗಿದ್ದ ಜನರ ಆಕ್ರೋಶ ಸ್ಫೋಟಿಸಿದೆ. ಸಾಮೂಹಿಕ ಪ್ರತಿಭಟನೆಗಳು ಚಿಮ್ಮಿಬಂದಿವೆ.

– ಅರ್ಚನಾ ಪ್ರಸಾದ್ ಲೇಖನ ಆಧರಿಸಿ ಭಾರತಿ ಗಾಂವ್ಕರ್



ಗುಲ್ಬರ್ಗದಲ್ಲಿ ಪ್ರತಿಭಟನೆ

16 ಡಿಸೆಂಬರ 2012 ರಂದು ದೇಶದ ರಾಜಧಾನಿ ದೆಹಲಿಯಲ್ಲಿ 23 ವರ್ಷದ ಅರೆ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ದಾಖಲೆಗಳಲ್ಲಿ 635ನೇಯದಾಗಿದ್ದು, ಒಂದೆಡೆ ಆಳವಾಗಿ ಬೇರೂರಿರುವ ಸಾಮಾಜಿಕ ವ್ಯವಸ್ಥೆಯ ವೈಫಲ್ಯದ ಸಂಕೇತ. ಇನ್ನೊಂದೆಡೆ ಮಹಿಳೆಯರ ವಿರುದ್ಧ ವಿಪರೀತವಾಗಿ ಏರುತ್ತಿರುವ ಅಪರಾಧಗಳನ್ನು ತಡೆಯಲು ಅಥವಾ ಸಮರ್ಪಕವಾಗಿ ನಿರ್ವಹಿಸುವಲ್ಲಿ ಸರಕಾರಗಳು ಹೀನಾಯವಾಗಿ ಸೋತಿವೆ ಎಂಬುದನ್ನು ಎತ್ತಿ ತೋರಿಸುತ್ತಿದೆ.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗಳ ಧೀರ್ಘಕಾಲದ ಬೇಡಿಕೆಗಳಿಂದಾಗಿ ಅತ್ಯಾಚಾರದ ವಿರುದ್ಧ ಭುಗಿಲೆದ್ದ ಪ್ರತಿಭಟನೆಯು ಜನರ ಅರಿವಿಗೆ ನಾಟುವಂತಾಗಿದೆ. ಕಳೆದ ಒಂದೂವರೆ ದಶಕಗಳಿಂದ ಮಹಿಳಾ ಸಂಘಟನೆಗಳು ಅನೇಕ ಬೇಡಿಕೆಗಳನ್ನು ಇಡುತ್ತಾ ಬಂದಿವೆ. ಲೈಂಗಿಕ ಆಕ್ರಮಣ ತಡೆಗಟ್ಟಲು ಅವಶ್ಯಕವಾದ ಒಂದು ಮಸೂದೆ, ವಿಚಾರಣೆ ತ್ವರಿತಗೊಳಿಸಲು ತ್ವರಿತ ಗತಿಯ (ಫಾಸ್ಟ್‌ಟ್ರಾಕ್) ನ್ಯಾಯಾಲಯಗಳು, ಅಪರಾಧಿಗಳು ಶಿಕ್ಷೆಗೆ ಗುರಿಯಾಗುವಂತಾಗಲು ವಿಚಾರಣೆ ಗುಣಮಟ್ಟ ಹೆಚ್ಚಿಸುವುದು, ಸಾರ್ವಜನಿಕ ಪ್ರದೇಶಗಳಲ್ಲಿ ಹೆಚ್ಚಿನ ಪೋಲಿಸರನ್ನು ನಿಯೋಜಿಸುವುದು ಹಾಗು ಲೈಂಗಿಕ ಆಕ್ರಮಣಕ್ಕೆ ಗುರಿಯಾದವರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸಬೇಕು ಎಂಬುದು ಅವುಗಳಲ್ಲಿ ಕೆಲವು. ಈ ಎಲ್ಲ ಬೇಡಿಕೆಗಳು ಯುವ ಪ್ರತಿಭಟನಾಕಾರರಲ್ಲಿ ಸ್ವಾಭಾವಿಕ ಚರ್ಚೆಗೆ ಗುರಿಯಾಗಿರುವುದು. ಸಾರ್ವಜನಿಕರ ಪ್ರಜ್ಞೆಯನ್ನು ಸೂಕ್ಷ್ಮಗೊಳಿಸುವಲ್ಲಿ ಮಹಿಳಾ ಸಂಘಟನೆಗಳಿಗೆ ಸಂದ ಚಿಕ್ಕದೊಂದು ಯಶಸ್ಸಾಗಿದೆ. ಆದರೂ ಸಹ, ಈ ಪ್ರತಿಭಟನೆಗಳು ರಚನಾತ್ಮಕ & ದೀರ್ಘಕಾಲದ ದೃಷ್ಟಿಕೋನವಾಗಿ ಉಳಿದಾಗ ಮಾತ್ರ, ಸಾಮಾಜಿಕ & ರಾಜಕೀಯ ಬದಲಾವಣೆಯ ಸಲಕರಣೆಯಾಗಿ ಬಳಸಬಹುದು.

ಲೈಂಗಿಕ ದೌರ್ಜನ್ಯ: ಒಂದು ದೀರ್ಘಕಾಲದ ಪ್ರವೃತ್ತಿ

ಆರ್ಥಿಕ ಸುಧಾರಣೆಯ ನಂತರದ ದಿನಗಳಿಂದಲೇ ಮಹಿಳೆಯರ ಮೇಲಿನ ಲೈಂಗಿಕ ಆಕ್ರಮಣದ ಪ್ರವೃತ್ತಿಗಳು ಶರವೇಗದಲ್ಲಿ ಹೆಚ್ಚಿವೆ ಎಂಬುದು ಸರ್ವವ್ಯಾಪಿ ನಂಬಿಕೆ. ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೊ ಪ್ರಕಾರ 1971 ರಿಂದ 2011 ರ ಅವಧಿಯಲ್ಲಿ ದಾಖಲಾದ ಅತ್ಯಾಚಾರಗಳ ಸಂಖ್ಯೆ 873.3 ರಷ್ಟು, ಒಂದು ಮಾಹಿತಿ ವಿಶ್ಲೇಷಣೆಯ ಅಂಕಿ ಅಂಶದಂತೆ, ಲೈಂಗಿಕ ಆಕ್ರಮಣ ಮತ್ತು ಅತ್ಯಾಚಾರದ ಸರಾಸರಿ ನಿದರ್ಶನಗಳು ಆರ್ಥಿಕ ಸುಧಾರಣೆಯ ನಂತರದ ಸಂದರ್ಭದಲ್ಲಿಯೇ ಹೆಚ್ಚಾಗಿದೆ.



ಬೆಂಗಳೂರಿನಲ್ಲಿ ಜನವಾದಿ ಪ್ರತಿಭಟನೆ

1971 ರಿಂದ 1991ರ ಅವಧಿಯಲ್ಲಿ (ಓಅಖಃ) ಯು 1,15,414 ಅತ್ಯಾಚಾರದ ನಿದರ್ಶನಗಳನ್ನು ದಾಖಲಿಸಿದೆ ಅಥವಾ ಒಂದು ವರ್ಷಕ್ಕೆ ಸುಮಾರು 6,074 ಪ್ರಕರಣಗಳು, ಆದರೆ ಆರಂಭಿಕ ದಶಕದ ಸುಧಾರಣೆಯ ಸಂದರ್ಭದಲ್ಲಿ ಈ ಅಂಕಿ 154664 ಇದ್ದರೆ 1992 – 2001 ರ ಹೊತ್ತಿಗೆ 15466.4 ರಷ್ಟು ಹೆಚ್ಚು ದರ್ಶನಗಳು ದಾಖಲಾದವು. ಕಳೆದ ದಶಕಗಳಿಂದಂತೂ ಇಂತಹ ಅಪರಾದಗಳ ಸಂಖ್ಯೆ ಗಾಬರಿಗೊಳಿಸುವಷ್ಟು ಹೆಚ್ಚಿದೆ, 2002 & 2011ರ ನಡುವೆ 1,98,139 ಅಪರಾಧ ನಿದರ್ಶನಗಳು ದಾಖಲಾಗಿವೆ ಅಥವಾ ವರ್ಷಕ್ಕೆ 19,813.9 ನಿದರ್ಶನಗಳು. ಇದರ ಅರ್ಥದಲ್ಲಿ ಸ್ವಾತಂತ್ರ್ಯದ ನಂತರದಲ್ಲಿ ಸುಮಾರು 97.5% ಪ್ರಕರಣಗಳು 1991 & 2011ರ ಅವಧಿಯಲ್ಲಿಯೇ ದಾಖಲಾಗಿದೆ. ಅದಕ್ಕೂ ಮಿಗಿಲಾಗಿ, ಕಳೆದ ಕೆಲವು ವರ್ಷಗಳಿಂದಂತೂ ವಿಪರೀತ ಏರಿಕೆ ಕಂಡಿದೆ 2009-10 ರಲ್ಲಿ 9.2 ಮತ್ತು 2010-11 ರಲ್ಲಿ 9.6%.

ಜಾಗೋರಿ ಮತ್ತು UN Woman ಸಂಸ್ಥೆಯವರು ನಡೆಸಿದ ಒಂದು ತಳಮಟ್ಟದ ಸಮೀಕ್ಷೆಯ ಪ್ರಕಾರ, ಅಖಿಲ ಭಾರತ ಮಟ್ಟದಲ್ಲಿ ಅತ್ಯಾಚಾರಗಳ ಸಂಖ್ಯೆ ಸಣ್ಣ ಮಟ್ಟದಲ್ಲಿ ಇಳಿಮುಖವಾಗಿದೆಯಾದರೂ ದೇಶದ ರಾಜಧಾನಿ ದೆಹಲಿಯಲ್ಲಿ ಅದಕ್ಕೆ ವಿರುದ್ಧವಾದ ಸ್ಥಿತಿ ಇದೆ. 2010-11ರಲ್ಲಿ 13% ಇದ್ದ ಅತ್ಯಾಚಾರ ಪ್ರಕರಣಗಳು 2011-12ರಲ್ಲಿ 17%ಕ್ಕೆ ಏರಿದೆ (1 ವರ್ಷಕ್ಕೆ 4% ಏರಿಕೆ). ಈ ಸಮೀಕ್ಷೆಯಲ್ಲಿ 80% ಮಹಿಳೆಯರನ್ನು ದೆಹಲಿಯೊಂದರಲ್ಲೇ ಸಂದರ್ಶಿಸಲಾಗಿದ್ದು ಅವರು ಅನೇಕ ರೀತಿಯ ಮಾನಸಿಕ, ದೈಹಿಕ, ದೃಶ್ಯ, ಹಾಗೂ ಮೌಖಿಕ ಕಿರುಕುಳವನ್ನು ಎದುರಿಸಿರುತ್ತಾರೆ. ಇವರಲ್ಲಿ 31% ಮಹಿಳೆಯರು ಸ್ವತಃ ಲೈಂಗಿಕ ಕಿರುಕುಳಕ್ಕೆ ಒಳಗಾದರೆ 46% ಮಹಿಳೆಯರು ಬೇರೆ ಮಹಿಳೆಯರು ಲೈಂಗಿಕ ಆಕ್ರಮಣಗಳಿಗೆ ಒಳಾಗಿದ್ದಕ್ಕೆ ಸಾಕ್ಷಿಯಗಿದ್ದಾರೆ. ಇವೆಲ್ಲವುಗಳನ್ನು ಗಮನಿಸಿದಾಗ ವ್ಯಾಪಕವಾದ ಅಪರಾಧಗಳನ್ನೂ ಒಳಗೊಂಡು 'ಲೈಂಗಿಕ ಕಿರುಕುಳ'ದ ವ್ಯಾಖ್ಯಾನವನ್ನು ಮಹಿಳೆಯರಿಗೆ ಸಮಾಜದಲ್ಲಿ ಸುರಕ್ಷತಾ ಭಾವವನ್ನು ಹೆಚ್ಚಿಸಲು ವಿಸ್ತರಿಸಬೇಕಾಗಿದೆ. ಯಾವುದೇ ರೀತಿಯ ಹಿಂಸೆಯನ್ನು ದಾಖಲಿಸುವ ಪ್ರವೃತ್ತಿಯಿಂದಾಗಿ, ಹೆಚ್ಚೆಚ್ಚು ಮಹಿಳೆಯರು ತಮ್ಮ ಮೇಲಾದ

ಜನಶಕ್ತಿ
ಕನ್ನಡ ವಾರಪತ್ರಿಕೆ

ಲೈಂಗಿಕ ಆಕ್ರಮಣ ನಿದರ್ಶನಗಳನ್ನು ದಾಖಲಿಸಲು ಮುಂದೆಬರಬಹುದು. ಅಷ್ಟೇ ಅಲ್ಲದೆ, ಮಹಿಳಾ ಸಂಘಟನೆಗಳು ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರಿಗೆ ಸಾಂತ್ವನ, ಐಕ್ಯಭಾವವನ್ನು ತುಂಬಲು ಸಾಧ್ಯವಾಗಬಹುದು. ಆದರೆ ಇವುಗಳಿಂದ

ಆರ್ಥಿಕ ಸುಧಾರಣೆಯ ನಂತರದ ದಿನಗಳಿಂದ ಗಮನಾರ್ಹ ರೀತಿಯಲ್ಲಿ ಏರುತ್ತಿರುವ ಆಕ್ರಮಣಗಳಿಗೆ ವಿವರಣೆ ಸಿಗುವುದಿಲ್ಲ.

ಸರಕಾರದ ನಿರ್ಲಕ್ಷ್ಯ ಮತ್ತು ಬಂಡವಾಳ ಹಿಂತೆಗೆತ.

ಲೈಂಗಿಕ ದೌರ್ಜನ್ಯದ ವಿರುದ್ಧ ದೆಹಲಿಯಲ್ಲಿ ಹೆಚ್ಚುತ್ತಿರುವ ಪ್ರತಿಭಟನೆಯಿಂದಾಗಿ ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀಮತಿ ಶೀಲಾ ದೀಕ್ಷಿತ್ ಅವರು ತನ್ನ ನಗರ ಅತ್ಯಾಚಾರದ ರಾಜಧಾನಿ ಎಂಬುದನ್ನು ಒಪ್ಪಿಕೊಳ್ಳುವಂತೆ ಮಾಡಿದೆ. ತರುವಾಯ ಅವರು ತನಗೆ ದೆಹಲಿ ಪೋಲೀಸರ ಮೇಲೆ ಯಾವುದೇ ನಿಯಂತ್ರಣ ಇಲ್ಲದಿರುವುದಕ್ಕೆ ವಿಷಾದಿಸುತ್ತ, ಇದು ಪೋಲೀಸರ ಅಸಮರ್ಪಕ ನಿರ್ವಹಣೆಯ ಪರಿಣಾಮ ಎಂದು ಆರೋಪಿಸಿದರು. ಇಂತಹ ಹೇಳಿಕೆಗಳ ಹಿಂದೆ ತಮ್ಮ ತಪ್ಪನ್ನು ಕೇಂದ್ರ ಸರಕಾರದ ಮೇಲೆ ಹೊರಿಸುವ ಉದ್ದೇಶ ಇದೆ ಎಂಬುದು ಸ್ಪಷ್ಟವಾಗುತ್ತದೆ. ಇದು ಕೇವಲ ಕಾನೂನು ಸುವ್ಯವಸ್ಥೆಯ ದೃಷ್ಟಿಕೋನ ಮಾತ್ರ

ವಾಸ್ತವದಲ್ಲಿ, ಜಾಗೋರಿ ಮತ್ತು ಗಓ ಫಾಂಟೆಚೆಟ್ಟಿ ಸಮೀಕ್ಷೆ ದಾಖಲಿಸುವಂತೆ ದೆಹಲಿ ಸರಕಾರ ಮಹಿಳೆಯರಿಗೆ ಒದಗಿಸಿರುವ ಸುರಕ್ಷತಾ ವಾತಾವರಣ ಅತೀ ದುರ್ಬರವಾಗಿದೆ, ಸಮೀಕ್ಷೆಯಲ್ಲಿ 45% ಜನ ಸಾರ್ವಜನಿಕ ಪ್ರದೇಶ ಮತ್ತು ಬಸ್‌ಗಳಲ್ಲಿ ತುಂಬಾ ಅಸುರಕ್ಷಿತ ಭಾವವನ್ನು ಅನುಭವಿಸುತ್ತಾರೆ. ಅಷ್ಟೇ ಪ್ರಮುಖವಾದ ಇನ್ನೊಂದು ಸಮಸ್ಯೆ ಎಂದರೆ ಸಾರ್ವಜನಿಕ ಪ್ರದೇಶದಲ್ಲಿ ಪುರುಷರು ಮುಕ್ತವಾಗಿ ಮದ್ಯ ಮತ್ತು ಮಾದಕವಸ್ತುಗಳ ಸೇವನೆ ಮಾಡುವುದು. ಸಮೀಕ್ಷೆಯಲ್ಲಿ ವರದಿಯಾದಂತೆ ಬಹುತೇಕ ಮಹಿಳೆಯರು ಸುರಕ್ಷಿತ ಮತ್ತು ಸ್ವಚ್ಛ ಶೌಚಾಲಯಗಳ ಕೊರತೆಯ ಬಗ್ಗೆ ಮಾತನಾಡುತ್ತಾರೆ.

ದೆಹಲಿಯನ್ನು ಅಸುರಕ್ಷಿಗೊಳಿಸುವಲ್ಲಿ ಪೋಲೀಸರ ಪರಿಣಾಮಕಾರಿ ಮತ್ತು ಪ್ರತ್ಯಕ್ಷ ಉಪಸ್ಥಿತಿಯ ಕೊರತೆಯೂ ಕೊಡುಗೆ ನೀಡಿದೆ. ಅಷ್ಟೇ ಅಲ್ಲದೆ ಸಮೀಕ್ಷೆಯಲ್ಲಿ ತಿಳಿಸಿರುವಂತೆ ಸುರಕ್ಷಿತ ವಾತಾವರಣ ನಿರ್ಮಾಣ ಮಾಡುವಲ್ಲಿ ಸರಕಾರಗಳು ತ್ವರಿತವಾಗಿ ಮೂಲಭೂತ ಸೌಕರ್ಯಗಳ ಮೇಲೆ ಹೂಡಿಕೆ ಮಾಡುವ ಅವಶ್ಯಕತೆ ಕೂಡ ಇದೆ. ಈ ವಿಷಯವನ್ನು ಇನ್ನೂ ಮುಂದುವರಿದು ಚರ್ಚಿಸುವುದಾದರೆ ಸರಕಾರಗಳು ಈಗಾಗಲೇ ಇಂತಹ ದೌರ್ಜನ್ಯಕ್ಕೆ ಗುರಿಯಾದ ಮಹಿಳೆಯರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಕಾನೂನು ರೂಪಿಸುವಲ್ಲಿ ಇಟ್ಟ ಹೆಜ್ಜೆಯನ್ನು



ಬೆಂಗಳೂರಿನಲ್ಲಿ ಎಸ್‌ಎಫ್‌ಐ ಪ್ರತಿಭಟನೆ

ವಿಶ್ಲೇಷಿಸಬೇಕಾಗುತ್ತದೆ. ಉದಾಹರಣೆಗೆ 2005ರ ಕೌಟುಂಬಿಕ ಹಿಂಸೆ ಕಾನೂನನ್ನು ಜಾರಿ ಮಾಡುವಾಗ ಕೇಂದ್ರ ಸರಕಾರ ಕೇವಲ 1 ಕೋಟಿ ರೂಪಾಯಿ ಮತ್ತು ದೆಹಲಿ ರಾಜ್ಯ ಸರಕಾರ 45 ಲಕ್ಷ ರೂಪಾಯಿಯನ್ನು ಮಾತ್ರ ಹಂಚಿಕೆ ಮಾಡಿದೆ. ಇದೇ ರೀತಿ ರಾಜ್ಯ ಸರಕಾರ ಲೈಂಗಿಕ ಆಕ್ರಮಣಕ್ಕೆ ಒಳಗಾದವರಿಗೆ ಬಿಕ್ಕಟ್ಟು ನಿರ್ವಹಣಾ ಕೇಂದ್ರವನ್ನು ತೆರೆದಿದ್ದು ಕಳೆದ ಆಯವ್ಯಯದಲ್ಲಿ ಕೇವಲ 3 ಲಕ್ಷ ನೀಡಿದೆ. ದುಡಿಯುವ ಮಹಿಳೆಯರಿಗೆ ದುಡಿಮೆ ಸ್ಥಳದಲ್ಲಿ ವಿಶ್ರಾಂತಿಗಾಗಿ ವಸತಿ ಒದಗಿಸುವ ದಾಖಲೆಯನ್ನು ನೋಡಿದರೆ ಅದು ಇನ್ನೂ ದುರ್ಭರವಾಗಿದೆ. 2011–12 ರಲ್ಲಿ ರಾಜ್ಯ ಸರಕಾರ ದುಡಿಯುವ ಮಹಿಳೆಯರ ವಸತಿ ಗೃಹಕ್ಕಾಗಿ ಕೇವಲ 12 ಲಕ್ಷ ರೂ.ನೀಡಿದೆ.

ಕೇಂದ್ರ ಸರಕಾರವಂತೂ ಇಂತಹ ಯೋಜನೆಗಳಲ್ಲಿ ಅತ್ಯಾಚಾರಕ್ಕೆ ಒಳಪಟ್ಟ ಮಹಿಳೆಯರಿಗೆ ಪರಿಹಾರ ಒದಗಿಸುವಲ್ಲಿ ತೀವ್ರವಾಗಿ ಮುಗ್ಗರಿಸಿದೆ. 140 ಕೋಟಿ ಇದ್ದ ಪರಿಹಾರ ಪುನರ್ವಸತಿ ಹಣ 20 ಕೋಟಿಗೆ ಇಳಿದಿದೆ.

ಕಾನೂನು ಜಾರಿಗೆ ತರುವವರ ಸಾಂಪ್ರದಾಯಿಕವಾದ ಸಾಮಾಜಿಕ ವರ್ತನೆ.

ಮೂರನೇ ಅತಿ ಮುಖ್ಯ ಅಂಶ ಎಂದರೆ ಅತ್ಯಾಚಾರಕ್ಕೆ ಒಳಪಟ್ಟವರ ಬಗ್ಗೆ ಅಧಿಕಾರಶಾಹೀ ಮತ್ತು ಪೋಲೀಸರು

ಪುಟ 10ಕ್ಕೆ

ಮೂಲೆಗುಂಪಾದ ಮಾರ್ಗದರ್ಶಿ ಸೂತ್ರಗಳು

ದೆಹಲಿ ಮಹಿಳೆಯರ ಮೇಲಿನ ಕ್ರೌರ್ಯ ಅತ್ಯಾಚಾರಗಳಿಗೆ ಕುಖ್ಯಾತಿ ಪಡೆದದ್ದು ತೀರಾ ಇತ್ತೀಚೆಗೇನಲ್ಲ. ಇದು ಸಾಕಷ್ಟು ಹಳೆಯ ಸಮಸ್ಯೆ. ಮಹಿಳಾ ಸಂಘಟನೆಗಳ ಒತ್ತಡ ಹೋರಾಟಗಳ ಫಲವಾಗಿ ಮಹಿಳೆಯರ ಸುರಕ್ಷಿತತೆಗಾಗಿ ಈ ಕೆಳಕಂಡ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಗಿತ್ತು. ಕೇಂದ್ರ ಗೃಹ ಇಲಾಖೆ ಅಧಿಕೃತವಾಗಿ ನೀಡಿದ ಈ ಸೂಚನೆ ಜಾರಿಗೆ ಬರಲೇ ಇಲ್ಲ. ಅದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಪದೇ ಪದೇ ಒತ್ತಾಯಗಳನ್ನು ಮಾಡಲಾಗಿದ್ದರೂ ಪ್ರಯೋಜನವಾಗಲಿಲ್ಲ. ದೆಹಲಿ ನಗರದಲ್ಲಿ ಮಹಿಳೆಯರ ಮೇಲೆ ಹೆಚ್ಚು ದೌರ್ಜನ್ಯಗಳು ನಡೆದಿರುವ ಪ್ರದೇಶಗಳನ್ನು ವಿಶೇಷವಾಗಿ ಗುರುತಿಸುವುದು. ಅಲ್ಲಿ ಸುರಕ್ಷತಾ ಕ್ರಮಗಳನ್ನು ಬಿಗಿಗೊಳಿಸುವುದು. ಬೀದಿ ದೀಪಗಳ ಮೂಲಕ ಬೆಳಕಿನ ಸೌಲಭ್ಯ ಹೆಚ್ಚಿಸುವುದು. ಜನನಿಬಿಡ ಪ್ರದೇಶಗಳು, ಸಾರ್ವಜನಿಕ ಶೌಚಾಲಯಗಳು, ವಸತಿ ಪ್ರದೇಶಗಳು ಸೇರಿದಂತೆ ಎಲ್ಲೆಡೆ ಈ ಕ್ರಮ ಕೈಗೊಳ್ಳುವುದು. ಪಾರದರ್ಶಕ ಗಾಜನ್ನು ಹೊಂದಿಲ್ಲದ ಟ್ಯಾಕ್ಸಿಗಳು, ಬಸ್ಸುಗಳು ಇತ್ಯಾದಿ ಎಲ್ಲ ವಾಹನಗಳ ಮಾಲಿಕರ



ಮೇಲೆ ಕ್ರಮವಹಿಸಿ, ಅರೆ ಪಾರದರ್ಶಕ ಗಾಜನ್ನು ಬದಲಾಯಿಸುವ ನಿಟ್ಟಿನಲ್ಲಿ ಬಿಗಿ ಕ್ರಮ ವಹಿಸುವುದು. ಟ್ಯಾಕ್ಸಿ ಮತ್ತು ಬಸ್ ಇತ್ಯಾದಿ ವಾಹನಗಳ ಚಾಲಕರು, ನಿರ್ವಾಹಕರು ಇತ್ಯಾದಿ ಸಿಬ್ಬಂದಿಗಳ ಸ್ಪಷ್ಟ ಗುರುತು ಪತ್ರದ ಪ್ರದರ್ಶನಕ್ಕೆ ವಾಹನದಲ್ಲಿ ವ್ಯವಸ್ಥೆ ಮಾಡುವುದು ಮುಂತಾದವುಗಳೇ ಆ ಸೂಚಿತ ಕ್ರಮಗಳು. ದೇಶದ ರಾಜಧಾನಿಯಲ್ಲಿ ಮಹಿಳೆಯರ ಸುರಕ್ಷತೆಗಾಗಿ ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ ಇಷ್ಟು ಸರಳ ಕ್ರಮಗಳನ್ನು ಕೂಡ ಜಾರಿಗೆ ತರಲು ಸಾಧ್ಯವಾಗಲಿಲ್ಲವೆಂದರೆ ಆಡಳಿತ ಎಷ್ಟು ಜಡಗಟ್ಟಿ ಹೋಗಿದೆ ಎಂದು ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ದೆಹಲಿ ಪ್ರತಿಭಟನೆ ಭಾಗವಾಗಿ ಹೋರಾಡುತ್ತಿರುವ ಒಂಭತ್ತು ಸಂಘಟನೆಗಳು ಡಿಸೆಂಬರ್ 24 ರಂದು ರಾಷ್ಟ್ರಪತಿಗಳನ್ನು ಕಂಡು ಆಡಳಿತದ ಈ ದಯನೀಯ ವೈಫಲ್ಯದ ಕುರಿತು ಗಮನ ಸೆಳೆದರು. ಮತ್ತು ಶೀಘ್ರ ಕ್ರಮಕ್ಕಾಗಿ ಆಗ್ರಹಿಸಿದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪದಾದಿಕಾರಿಗಳಾದ ಬೃಂದಾ ಕಾರಾಟ್ ಅವರು ನಿಯೋಗದಲ್ಲಿದ್ದರು.

ಸಂಘಟನೆಗಳು ದೆಹಲಿ ಪೋಲಿಸ್ ಕಂಇಷನರ್ ಸೇರಿದಂತೆ ಮಾರ್ಗದರ್ಶಿ ಸೂತ್ರಗಳನ್ನು ಜಾರಿ ಮಾಡಲು ವಿಫಲರಾದ ಪೋಲಿಸ್ ಅಧಿಕಾರಿಗಳ ಮೇಲೆ ಕ್ರಮವಹಿಸಬೇಕೆಂದು ಒತ್ತಾಯಿಸಿದ್ದಾರೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗೆ ಸಂಬಂಧಿಸಿದ ಹಲವು ಕಾಯ್ದೆಗಳು ಸರಕಾರದ ಮಟ್ಟದಲ್ಲಿ ಬಾಕಿ ಉಳಿದಿದ್ದು ಅವುಗಳನ್ನು ಶೀಘ್ರವಾಗಿ ಅಂತಿಮಗೊಳಿಸಿ ಜಾರಿಗೆ ತರುವ ವ್ಯವಸ್ಥೆಯಾಗಬೇಕು. ಮಹಿಳಾ ಸಂಘಟನೆಗಳು ಈ ನಿಟ್ಟಿನಲ್ಲಿ ಕಾಯ್ದೆ ಬಲವರ್ಧನೆಗೆ ನೀಡಿರುವ ಶಿಫಾರಸ್ಸುಗಳನ್ನು ದುರ್ಬಲಗೊಳಿಸಲಾಗಿದ್ದು ಇದನ್ನು ಸರಿಪಡಿಸಬೇಕು. ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿ ಬಾಕಿ ಇರುವ ಸುಮಾರು ಒಂದು ಲಕ್ಷ ಪ್ರಕರಣಗಳನ್ನು ತ್ವರಿತಗತಿ ನ್ಯಾಯಾಲಯಕ್ಕೆ ವರ್ಗಾಯಿಸಿ ಶೀಘ್ರ ಇತ್ಯರ್ಥಪಡಿಸಬೇಕು. ತಪ್ಪಿತಸ್ಥರಿಗೆ ಕಾಲ ಮಿತಿಯೊಳಗೆ ಶೀಘ್ರವಾಗಿ ಕಠಿಣ ಶಿಕ್ಷೆ ವಿಧಿಸಬೇಕು ಎಂದೂ ಸಂಘಟನೆಗಳು ಒತ್ತಾಯಿಸಿದವು. ಈ ಒಟ್ಟು ಪ್ರಕರಣಗಳ ಸಂಬಂಧವಾಗಿ ದೇಶದ ಪ್ರಧಾನಿಯವರು ಮತ್ತು ದೇಶದ ಗೃಹ ಮಂತ್ರಿಗಳು ನೀಡಿದ ಹೇಳಿಕೆಗಳಲ್ಲಿ ಸಮಸ್ಯೆಗೆ ಪರಿಹಾರವನ್ನು ರೂಪಿಸುವ ಸಮಗ್ರ ದೃಷ್ಟಿಕೋನವೇ ಇರಲಿಲ್ಲವೆಂದೂ ಈ ಸಂಘಟನೆಗಳು ರಾಷ್ಟ್ರಪತಿಗೆ ಸಲ್ಲಿಸಿದ ಲಿಖಿತ ಮನವಿ ಪತ್ರದಲ್ಲಿ ಆಳವಾದ ವಿಷಾದ ವ್ಯಕ್ತಪಡಿಸಿವೆ.

ಲೈಂಗಿಕ ಆಕ್ರಮಣದ ವಿರುದ್ಧ ....

ಪುಟ 9 ರಿಂದ

ಹೊಂದಿರುವಂತಹ ನಕಾರಾತ್ಮಕ ಧೋರಣೆ. ದೆಹಲಿ ಒಂದರಲ್ಲೇ ಶಿಕ್ಷೆಗೆ ಒಳಪಟ್ಟ ಅತ್ಯಾಚಾರಿಗಳ ದರ ಕೇವಲ 26% ಮಾತ್ರ. ಅದರಲ್ಲೂ ಪೊಲೀಸರು ಅತ್ಯಾಚಾರದ ಪ್ರಕರಣಗಳನ್ನು ದಾಖಲಿಸಿಕೊಳ್ಳುವುದೇ ಅಪರೂಪ. 2010 ರಲ್ಲಿ ನಡೆದ ಸಮೀಕ್ಷೆಯಲ್ಲಿ ತಿಳಿಸಿದ ಹಾಗೆ 8% ಮಹಿಳೆಯರು ಮಾತ್ರ ಪೊಲೀಸರಿಗೆ ಅತ್ಯಾಚಾರದ ಬಗ್ಗೆ ದೂರು ನೀಡಿದ್ದಾರೆ. ಅತೀ ಹೆಚ್ಚು ಅಂದರೆ 58% ಮಹಿಳೆಯರು ಪೊಲೀಸರಿಗೆ ದೂರು ನೀಡುವುದರ ಬಗ್ಗೆ ಯೋಚನೆಯನ್ನೂ ಸಹ ಮಾಡಿಲ್ಲ. ಇನ್ನುಳಿದ 42 ರಿಂದ 48% ಮಹಿಳೆಯರು ಪೊಲೀಸರಿಗೆ ದೂರು ನೀಡಿದರೆ ಅವರು ತಮ್ಮ ಮೇಲಾದ ಆಕ್ರಮಣವನ್ನು ಕ್ಷುಲ್ಲಕವೆನ್ನುತ್ತಾರೆ ಮತ್ತು ತಪ್ಪನ್ನು ನಮ್ಮ ಮೇಲೆಯೇ ಹೊರಿಸುತ್ತಾರೆಂದು ಸುಮ್ಮನಾಗಿದ್ದಾರೆ. ಪೊಲೀಸರ ನಂಬಿಕೆಯ ಪ್ರಕಾರ ನಿಜವಾದ ಅತ್ಯಾಚಾರ ಪ್ರಕರಣ ಎಂದಿಗೂ ಪೊಲೀಸ್ ಠಾಣೆ ಏರುವುದೇ ಇಲ್ಲ. ಅವು ಬಂದಿದ್ದೇ ಆದರೆ ಕೇವಲ ಸುಲಿಗೆ ಮಾಡುವ ಉದ್ದೇಶದಿಂದ ದೂರು ತರಲಾಗಿದೆ ಎಂದೋ ಅಥವಾ ಹೆಣ್ಣಿನ ಅನೈತಿಕತೆಯೇ ಸಮಸ್ಯೆಯ ಮೂಲ ಎಂದೋ ಅಭಿಪ್ರಾಯ ಅಭಿಪ್ರಾಯ ಪಡುತ್ತಾರೆ. ಇದರಿಂದ ಮಹಿಳೆಯರನ್ನು ಗ್ರಾಹಕ ಬಳಕೆಯ ವಸ್ತುವಾಗಿಸಿ ಪೊಲೀಸ್ ಅಧಿಕಾರಿಗಳು ಈ ಮುಕ್ತ ಆರ್ಥಿಕತೆಯಲ್ಲಿ ತಮ್ಮ ಸಾಂಪ್ರದಾಯಿಕ ವಿಚಾರಣೆಯನ್ನು ಪ್ರದರ್ಶಿಸುವ ಪರಿ ಇಂತು. ಈ ಕಾರಣಕ್ಕಾಗಿಯೇ ಮಹಿಳಾ ಸಂಘಟನೆಗಳು ಪೊಲೀಸ್ ಪಡೆಗಳು ಈ ವಿಷಯದ ಬಗ್ಗೆ ಹೆಚ್ಚು ಸೂಕ್ಷ್ಮತೆಯನ್ನು ಹೊಂದಬೇಕು ಎಂದು ಬೇಡಿಕೆಯನ್ನು ಇಡುತ್ತವೆ.

ಮೇಲ್ಕಂಡ ವಿಷಯದ ಆಧಾರದ ಮೇಲೆ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ವಿರುದ್ಧ ಭುಗಿಲೆದ್ದ ಪ್ರತಿಭಟನೆಯನ್ನು ಗಮನಿಸಬೇಕು. ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಅಪರಾಧ ತಡೆಗಟ್ಟುವತ್ತ ನಿಜವಾದ ಸಾಮಾಜಿಕ ಬದಲಾವಣೆಯ ಅವಶ್ಯಕತೆಗಳೆರಡಕ್ಕೂ ಈ ಪ್ರತಿಭಟನೆ ಸಾಂಕೇತಿಕ ಮೌಲ್ಯವಾಗಿ ಬಿಂಬಿತವಾಗಬೇಕು.

ಮಹಿಳೆಯರ ಮೇಲಿನ ಅಪರಾಧಗಳನ್ನು ತಹಬದಿಗೆ ತರಲು ಕೆಲವು ಕ್ರಮಗಳು

ದೇಶದ ರಾಜಧಾನಿ ದೆಹಲಿಯಲ್ಲಿ ನಡೆದ ಭೀಕರ ಅತ್ಯಾಚಾರದ ಪ್ರಕರಣದ ವಿರುದ್ಧ ದೇಶವ್ಯಾಪೀ ಪ್ರತಿಭಟನೆಗಳು ನಡೆದಿವೆ. ಯಾವುದೇ ನಾಗರೀಕ ಸಮಾಜ ನಾಚಿ ತಲೆ ತಗ್ಗಿಸುವಂತಹ ಇಂತಹ ಘಟನೆಗಳು ದೇಶದಾದ್ಯಂತ ನಡೆಯುತ್ತಿವೆ. ಇದು ನಿಲ್ಲಬೇಕು.

ದೆಹಲಿ ಅತ್ಯಾಚಾರದ ಹೀನಾಯ ಘಟನೆಯ ಬೆನ್ನಿಗೇ ಮೂರು ದಿನಗಳಲ್ಲಿ ಬೆಂಗಳೂರು ನಗರದಲ್ಲಿಯೇ ಅಪ್ರಾಪ್ತ ಬಾಲಕಿಯರ ಮೇಲೆ ನಡೆದ ಎರಡು ಅತ್ಯಾಚಾರದ ಪ್ರಕರಣಗಳು ವರದಿಯಾದವು. ಬೀದರ್‌ನಲ್ಲಿ, ಬೆಳಗಾವಿಯ ಚಿಕ್ಕೋಡಿಯಲ್ಲಿ ಅಪ್ರಾಪ್ತರ ಮೇಲೆ ನಡೆದ ಅತ್ಯಾಚಾರದ ಪ್ರಕರಣಗಳು ವರದಿಯಾದವು. ಇವು ದಾಖಲೆಯಾದ ಪ್ರಕರಣಗಳು ಮಾತ್ರ.

ಅಪರಾಧ ವಿಭಾಗದ ದಾಖಲೆಗಳೇ ತಿಳಿಸುವಂತೆ 2011 ರಲ್ಲಿ ಬೆಂಗಳೂರು ನಗರದಲ್ಲಿ 97 ಅತ್ಯಾಚಾರದ ಪ್ರಕರಣಗಳು, ಮತ್ತು 250



ಮಾನಭಂಗ ಪ್ರಯತ್ನದ ಪ್ರಕರಣಗಳು ದಾಖಲಾಗಿವೆ. ರಾಷ್ಟ್ರೀಯ ಅಪರಾಧ ಬ್ಯೂರೋ ಪ್ರಕಾರ ಬೆಂಗಳೂರಿನಲ್ಲಿ 2010 ರಲ್ಲಿ 1,590, 2011 ರಲ್ಲಿ 1,890 ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳು ದಾಖಲಾಗಿವೆ. ಮಹಿಳೆಯರ ಮೇಲಿನ ಅಪರಾಧಗಳ ಪಟ್ಟಿಯಲ್ಲಿ ನಗರ ಮೂರನೇ ಸ್ಥಾನದಲ್ಲಿದೆ. ಈ ಎಲ್ಲ ಅಂಕಿ ಸಂಖ್ಯೆಗಳು ವರದಿಯಾದ ಪ್ರಕರಣಗಳು. ಯಾರ ಗಮನಕ್ಕೂ ಬಾರದೇ, ಸಮಾಜದ ಕಣ್ಣಿಗೆ ಹೆದರಿ ವರದಿಯಾಗದ ಪ್ರಕರಣಗಳು ಅವೆಷ್ಟೋ. ಇಂತಹ ಪ್ರಕರಣಗಳು ನಡೆದಾಗೆಲ್ಲ ಅಪರಾಧಿಗಳನ್ನು ಹಿಡಿದು ಉಗ್ರವಾಗಿ ಶಿಕ್ಷಿಸುವ ಬದಲು ಅಪರಾಧಕ್ಕೆ ಮಹಿಳೆಯರನ್ನೇ ಹೊಣೆ ಮಾಡುವ ಪ್ರಯತ್ನ ಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ತನ್ನ ಮೇಲೆ ನಡೆದ ದೌರ್ಜನ್ಯವನ್ನು ವಿರೋಧಿಸಿ ಪೋಲೀಸ್ ಕಂಪ್ಲೆಂಟ್ ನೀಡುವ ಧೈರ್ಯ ತೋರಿಸಿ ಮುಂದೆ ಬಂದ ಮಹಿಳೆಯ ಶೀಲವನ್ನು ಮೊದಲು ಶಂಕಿಸುವುದು ಠಾಣೆಯಲ್ಲೆ. ನಡೆದ ಘಟನೆಗಳಿಗೆ ತೇಪೆ ಹಚ್ಚಿ ಸ್ಥಳಿಯ ರಾಜಕಾರಣದ ದ್ವೇಷದಿಂದ ಹೀಗೆ ವರದಿಯಾಗಿದೆ ಎಂಬ ಹೇಳಿಕೆಯೊಂದಿಗೆ ಕೈ ತೊಳೆದುಕೊಳ್ಳುವ ಪ್ರಸಂಗಗಳೂ ಇಲ್ಲದಿಲ್ಲ. ನಂತರ ಪ್ರಾರಂಭವಾಗುವುದು ಅವಳು ಅಲ್ಲಿ, ಆ ಹೊತ್ತಿನಲ್ಲಿ ಯಾಕೆ ಹೋಗಿದ್ದಳು, ಅವಳಿಗೆ ಅತ್ಯಾಚಾರಿಯ ಜೊತೆ 'ಸಂಪರ್ಕವಿತ್ತೇ, ಮಹಿಳೆಯರು ಪ್ರಚೋದನಕಾರೀ ಉಡುಪು ಧರಿಸುತ್ತಾರೆ ಇತ್ಯಾದಿ ಇತ್ಯಾದಿ. . ನಂತರದ ದಿನಗಳಲ್ಲಿ ಕಳಂಕಿತಳೆಂಬ ಹಣೆಪಟ್ಟಿ ಹಚ್ಚಿಕೊಂಡು ಸಮಾಜದಲ್ಲಿ ಬಾಳುವುದೇ ದುಸ್ತರವಾಗುವ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ.

ಸರ್ಕಾರ ಮತ್ತು ಅಪರಾಧಗಳ ತಡೆಗಾಗಿಯೇ ಇರುವ ಪೋಲಿಸ್ ಇಲಾಖೆಯ ನಿರ್ಲಕ್ಷ್ಯ ಧೋರಣೆಗೆ ಹಿಡಿದ ಕನ್ನಡಿಯೇ ಹೆಚ್ಚುತ್ತಿರುವ ಅಪರಾದಗಳು. ಇಷ್ಟು ಅಪರಾಧಗಳು ವರದಿಯಾಗುತ್ತಿದ್ದರೂ ರಾಜ್ಯದ ಗೃಹ ಮಂತ್ರಿಗಳಾಗಲೀ, ಏಕೈಕ ಮಹಿಳಾ ಸಚಿವರಾಗಲೀ, ಅಥವಾ ಸರ್ಕಾರದ ಚುಕ್ಕಾಣಿ ಹಿಡಿದ ಮುಖ್ಯ ಮಂತ್ರಿಗಳಾಗಲೀ ಇದುವರೆಗೂ ನಡೆದ ಲಾ ಸ್ಕೂಲ್ ಬಳಿಯ ಪ್ರಕರಣ ದಂತಹ 97 ಪ್ರಕರಣಗಳ ಬಗ್ಗೆ ತುಟಿ ಬಿಚ್ಚಿಲ್ಲ.

ಈ ಅಪರಾಧಗಳನ್ನು ತಹಬಂದಿಗೆ ತರಬೇಕೆಂದರೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ದೇಶದ ಮಹಿಳಾ ಚಳುವಳಿಯು ಜಾರಿಗೆ ತರಲು ಆಗ್ರಹಿಸುತ್ತಿರುವಂತೆ ಈ ಕೆಳಕಂಡ ಬೇಡಿಕೆಗಳ ಕುರಿತು ಆಳುವ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು.


1. ಪೋಲೀಸ್ ಇಲಾಖೆ ತನ್ನ ಸಿಬ್ಬಂದಿಗೆ ಲಿಂಗ ಸಂವೇದನಾಶೀಲತೆಯನ್ನು ಹೆಚ್ಚಿಸಲು ಗಂಭೀರ ತರಬೇತಿ ನೀಡಬೇಕು.
2. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ ಪೋಲೀಸರೂ ಸೇರಿದಂತೆ ಪಹರೆಯನ್ನು ಹೆಚ್ಚಿಸಬೇಕು. ಆ ಮೂಲಕ ನಡೆಯುವ ಇಂತಹ ದೌರ್ಜನ್ಯಗಳ ಮೇಲೆ ನಿಗಾವಹಿಸಲು ಸಾಧ್ಯವಾಗಬೇಕು. ಪ್ರಕರಣದ ದಾಖಲೆ ಮತ್ತು ವಿಚಾರಣೆಗೆ ವಿಳಂಬ ನೀತಿ ಅನುಸರಿಸದೇ ತಕ್ಷಣ ಕ್ರಮ ಕೈಗೊಳ್ಳಬೇಕು.
3. ಕರ್ತವ್ಯನಿರತ ಪೋಲೀಸರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಬೇಕು. ಕರ್ತವ್ಯ ಲೋಪಕ್ಕೆ ಗಂಭೀರ ಶಿಕ್ಷೆಯಾಗಬೇಕು.
4. ವಿಚಾರಣೆಗೆ ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರವನ್ನು ಎಲ್ಲ ಠಾಣೆಗಳಿಗೆ ಒದಗಿಸಬೇಕು. ಮತ್ತು ಅದನ್ನು ಪಾಲಿಸದ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು
5. ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ತ್ವರಿತ ಗತಿಯ ನ್ಯಾಯಾಲಯಗಳನ್ನು ರಚಿಸಿ 6 ತಿಂಗಳಿನೊಳಗೆ ಇತ್ಯರ್ಥಗೊಳಿಸಬೇಕು.
6. ಪ್ರತಿ ಪೋಲಿಸ್ ಠಾಣೆಯಲ್ಲಿ ಆ ವ್ಯಾಪ್ತಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿ ಶಿಕ್ಷೆಗೆ ಗುರಿಯಾದವರ ವಿವರಗಳನ್ನು ಭಾವಚಿತ್ರದೊಂದಿಗೆ ಪ್ರಕಟಿಸಬೇಕು.
7. ಶಿಕ್ಷೆಯ ಮಾಹಿತಿಗಳನ್ನು ಸಾರ್ವಜನಿಕರಿಗೆ ವಿವರವಾಗಿ ಬಹಿರಂಗಗೊಳಿಸಬೇಕು. ಇದು ಅಪರಾಧವೆಸಗುವವರಿಗೆ ಎಚ್ಚರಿಕೆಯಾಗಬೇಕು.
8. ವಲಸೆ ಕಾರ್ಮಿಕ ಬಾಲಕಿಯರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಅನುಕೂಲವಾಗುವಂತೆ ವಲಸಿಗರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಕಟ್ಟಡ ಕಂಟ್ರಾಕ್ಟರುಗಳು ಮತ್ತಿತರ ಉದ್ಯಮಿಗಳು ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿರಬೇಕು ಮತ್ತು ತಮ್ಮ ಕಾರ್ಮಿಕರನ್ನು ಕಲ್ಯಾಣಮಂಡಳಿಯಲ್ಲಿ ಕಡ್ಡಾಯವಾಗಿ ದಾಖಲುಮಾಡಬೇಕು. ತಪ್ಪಿದಲ್ಲಿ ಕಂಟ್ರಾಕ್ಟ್ ಅಥವಾ ಉದ್ಯಮದ ಪರವಾನಗಿಗಳನ್ನು ರದ್ದು ಪಡಿಸಬೇಕು.
9. ಅತ್ಯಾಚಾರ. ಮಾನಭಂಗದಂತಹ ದೌರ್ಜನ್ಯಗಳಿಗೆ ಒಳಗಾದ ಬಾಲಕಿಯರು ಮತ್ತು ಮಹಿಳೆಯರಿಗೆ ಅಗತ್ಯವಾದ ಭದ್ರತೆ, ಸೂಕ್ತ ಮಾನಸಿಕ ಸ್ಥೈರ್ಯ.ನೀಡಲು ಹೆಚ್ಚಿನ ಗಮನ ನೀಡಬೇಕು.
10. ನೆರೆಹೊರೆಯವರಿಗೆ ತಿಳಿವು, ನೀಡಲು ನಿರಂತರ ಸಂವಹನಾ ಸಭೆಗಳನ್ನು ನಡೆಸಬೇಕು.
11. ಇದನ್ನೆಲ್ಲ ಮಾಡಲು ಅಗತ್ಯವಾದ ತರಬೇತಿ ಪಡೆದ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಅಗತ್ಯವಾದ ಸಿಬ್ಬಂದಿ ನೇಮಕ ಸರ್ಕಾರದ ಆದ್ಯತೆಯಾಗಬೇಕು.

ಮಾವೋ ತ್ಸೆ ತುಂಗ್....

ಪುಟ 16 ರಿಂದ

ರಲ್ಲಿ ಅಮೇರಿಕ ಕೊರಿಯ ದೇಶದ ಮೇಲೆ ನಡೆಸಿದ ಧಾಳಿಯ ಸಂದರ್ಭದಲ್ಲಿ ನಡೆದ ಯುದ್ಧದಲ್ಲಿ ಸ್ವಯಂ ಸೇವಕನಾಗಿ ಪಾಲ್ಗೊಂಡು ಪ್ರಾಣಾರ್ಪಣೆ ಮಾಡಿದನು. ಮತ್ತೊಬ್ಬ ಚೀನಾದ ಸಮೂಹಿಕ ಕೃಷಿ ಕ್ಷೇತ್ರದಲ್ಲಿ ಲೆಕ್ಕಪತ್ರದ ಸಹಾಯಕನಾಗಿ ಕೆಲಸ ಮಾಡಿದನು.

ಆದರೆ ಸ್ವತಃ ಯಾಂಗ್ ರವರ ಜೀವ ಚೀನಾದ ಕ್ರಾಂತಿಗೆ ಅರ್ಪಿತವಾಯಿತು.ಆಗಿನ್ನೂ ಮದುವೆಯಾಗಿ ಹತ್ತು ವರ್ಷ. .ಕೊನೆಯ ಮಗ ಇನ್ನೂ ಒಂದುವರ್ಷದ ಕೂಸು. ಚೀನಾದ ಯುದ್ಧ ಕೋರ ಪಾಳೆಯಗಾರರ ನಾಯಕ ಚಿಯಾಂಗ್ ಕೈ ಶೇಕ್ 1930ರಲ್ಲಿ ನಡೆಸಿದ ಕಮ್ಯುನಿಸ್ಟರ ಮಾರಣ ಹೋಮಕ್ಕೆ ಬಲಿಯಾದರು.ಮನೆಗೆ ನುಗ್ಗಿ ಅವರನ್ನು ಬಂಧಿಸಲಾಯಿತು. ತನ್ನ ಗಂಡನನ್ನು ಖಂಡಿಸಬೇಕೆಂದು ಕಮ್ಯುನಿಸ್ಟ್ ತತ್ವಗಳನ್ನು ಬಿಡಬೇಕೆಂದು ಬಲವಂತ ಮಾಡಲಾಯಿತು. ಅಂತಹ ಕೀಳು ಕೆಲಸ ಮಾಡಲೊಪ್ಪದ ಈ ನಿಸ್ಸೀಮ ಕ್ರಾತಿಕಾರಿಯನ್ನು ಕ್ರೂರವಾಗಿ ಹಿಂಸಿಸಿ ಕೊಲ್ಲಲಾಯಿತು. ಬಡತನದಲ್ಲಿ ನರಳುತ್ತಿದ್ದ ಚೀನಾದ ಕೋಟ್ಯಾಂತರ ಜನರ ಸಲುವಾಗಿ ಯಾಂಗ್ ದಿಟ್ಟತನದಿಂದ ತಮ್ಮ ಜೀವವನ್ನೇ ಬಲಿ ಕೊಟ್ಟರು.ಸೊರಗಿದ ಮೈನ .ಸರಿಯಾದ ಆಯುಧಗಳೂ ಚಳಿಗೆ ಬೆಚ್ಚನೆಯ ಉಡುಪೂ ಇಲ್ಲದೆ ಕಲಿತನದಿಂದ ಕಾದುತ್ತಿದ್ದ ಕೆಂಪು ಸೈನ್ಯವನ್ನು ರಣಾಂಗಣದಲ್ಲಿ ಸೋಲಿಸಲಾಗದ ಹೇಡಿಗಳು ಚೀನಾದ ಈ ಹೆಮ್ಮೆಯ ಪುತ್ರಿಯನ್ನು ಕೊಂದು ಕೇಕೆ ಹಾಕಿದರು.



"ನಿಮಗೇಕೆ ಕೊಡಬೇಕು ಕಪ್ಪ !! ಹಾಂ !. ಕ್ಷಮಿಸಿ ....ಲೆಕ್ಕ..." !!!

ಹೆಸರು ಕೆ.ಎಸ್. ಈಶ್ವರಪ್ಪ. ವಯಸ್ಸು.... ಕೇಳಬೇಕು. (ಕೇಳಿದರೆ ಮೈಮೇಲೆ ಹಾರಿ ಬಂದಾರು ಅಂತ ಭಯ.) ಸಂಘ ಪರಿವಾರದ ಗರಡಿಯಲ್ಲಿ ಪಳಗಿದ ಜೀವ. ಆರೆಸ್ಸೆಸ್ ಚೆಡ್ಡಿ ಹಾಕಿಕೊಂಡು 'ವಿಜಯದಶಮಿ'ಯ ವಿಜಯೋತ್ಸವದಲ್ಲಿ ಭಾಗವಹಿಸಿರುವ 'ಶ್ರೀಮಂತ' ಅನುಭವ ಇದೆ.

ರಾಜ್ಯ ಬಿಜೆಪಿಗೆ ಹಲವು ಅವಧಿಗೆ ಅಧ್ಯಕ್ಷರಾಗಿ 'ದುಡಿದಿದ್ದು' ಈಗಲೂ ಆ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ರಾಷ್ಟ್ರ ರಾಜಕಾರಣಕ್ಕೆ 'ಅಪರೇಷನ್ ಕಮಲ'ದಂತಹ ದೇಶ ಕಂಡು ಕೇಳರಿಯದ ವಿನೂತನ ಪರಿಕಲ್ಪನೆಯನ್ನು ಸಾಕಾರಗೊಳಿಸಿ ಕೊಟ್ಟ ಪುಣ್ಯಾತ್ಮರಿವರು.

ಜೆಡಿ(ಎಸ್)–ಬಿಜೆಪಿ ಸರ್ಕಾರದಲ್ಲಿ 2006ರ ಫೆಬ್ರವರಿಯಿಂದ 2007ರ ಅಕ್ಟೋಬರ್‌ವರೆಗೆ 20 ತಿಂಗಳು ಜಲ 'ಧಾಪನ್ಮೂಲ' ಸಚಿವರಾಗಿ ಹಾಗೂ ನಂತರದಲ್ಲಿ ಬಿಜೆಪಿ ಸರ್ಕಾರದಲ್ಲಿ 2008ರ ಜುಲೈನಿಂದ 2010ರ ಜನವರಿವರೆಗೆ ಇಂ'ಧನ' 'ಸಚಿವರಾಗಿ ರಾಜ್ಯದ ಅಭಿವೃದ್ಧಿಗೆ ಅಪಾರ 'ಶೇವೆ' ಸಲ್ಲಿಸಿದ್ದಾರೆ. ಮತ್ತೆ 2012ರ ಜುಲೈನಿಂದ 'ಕಂದಾಯ' ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿರುವುದಲ್ಲದೇ ರಾಜ್ಯದ ಸೌಭಾಗ್ಯವೋ ಎಂಬಂತೆ ಉಪ ಮುಖ್ಯಮಂತ್ರಿಯೂ ಆಗಿದ್ದಾರೆ. ಒಂದು ರೀತಿಯಲ್ಲಿ ಇವರು ಬಿಜೆಪಿಗೆ ಆಡಳಿತಾನುಭವದ 'ಗಣಿ'.


ಅಧಿಕ ಪ್ರಸಂಗ

ಇವರ ಬಗೆಗೆ ಇಷ್ಟೆಲ್ಲಾ ಪರಿಚಯ ಯಾಕೆ ಅಂತ ನಿಮಗೆ ಗೊತ್ತಿದೆ. ರಾಜ್ಯ ಬಿಜೆಪಿ ಸರ್ಕಾರ ಕರ್ನಾಟಕದ ಲೋಕಾಯುಕ್ತ ಸಂಸ್ಥೆಗೆ ಲೋಕಾಯುಕ್ತರು, ಉಪ ಲೋಕಾಯುಕ್ತರು... ಯಾರನ್ನೂ ನೇಮಿಸದೇ ಇರುವ ಮೂಲಕ ಲೋಕಾಯುಕ್ತದ 'ಅಧಿಕ ಪ್ರಸಂಗ'ಗಳಿಗೆ ತಡೆ ಹಾಕಿದ್ದರೂ ಕೂಡ ಇರುವ ಅಧಿಕಾರಿಗಳೇ ಹೇಗೋ ಸಮಯ ಹೊಂದಿಸಿಕೊಂಡು ಇತ್ತೀಚೆಗೆ ಸನ್ಮಾನ್ಯ ಈಶ್ವರಪ್ಪನವರ ಮನೆ, ಇತ್ಯಾದಿ (ಈ 'ಇತ್ಯಾದಿ'ಗಳ ವಿವರಣೆ ಮುಂದೆ ಇದೆ.)ಗಳ ಮೇಲೆ ದಾಳಿ ನಡೆಸಿದ್ದಾರೆ. ರಾಜ್ಯ ಲೋಕಾಯುಕ್ತ ಅಧಿಕಾರಿಗಳು ರಾಜ್ಯದ ಉಪ ಮುಖ್ಯಮಂತ್ರಿಗಳ ಮನೆಯ ಮೇಲೆಯೇ ದಾಳಿ ನಡೆಸಿದ ಈ 'ವಿಲಕ್ಷಣ ಪ್ರಸಂಗ' ಹೇಗೆ ಘಟಿಸಿತು ಎಂಬುದು ಬೇರೆಯದೇ ಪ್ರಶ್ನೆ. ಅದನ್ನು ಮತ್ತೊಮ್ಮೆ ಪರಿಶೀಲಿಸಬಹುದು. ಈಗ ಈಶ್ವರಪ್ಪನವರು ಮತ್ತು ಕುಟುಂಬ ವರ್ಗದವರು ತಮ್ಮ ಅಮೋಘ 'ಪ್ರತಿಭೆ–ಪರಿಶ್ರಮ'ದ ಮೂಲಕ 'ಗಳಿಸಿಕೊಂಡ' 'ಪುಣ್ಯಫಲ'ಗಳೇನು ಎಂದು ಇಲ್ಲಿ ನೋಡಬಹುದು.

'ನಗಣ್ಯ' ನಗನಾಣ್ಯ

ಡಿಸಂಬರ್ 25, 2012 ರಂದು ನಡೆದ ಈಶ್ವರಪ್ಪ ಅವರ ಬೆಂಗಳೂರು, ಶಿವಮೊಗ್ಗಗಳ ಮನೆಗಳು ಸೇರಿದಂತೆ ಅವರ ಬಂಧುಗಳು ಮತ್ತು ಆಪ್ತರ ಮನೆ ಮತ್ತು ಹಲವು ಸಂಸ್ಥೆಗಳ ಮೇಲೆ ಏಕಕಾಲಕ್ಕೆ ಒಂಭತ್ತು ಕಡೆಗಳಲ್ಲಿ ನಡೆದ 'ದುರದೃಷ್ಟಕರ' ದಾಳಿಯಲ್ಲಿ ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕದ್ದೇನು ?

ಗಟ್ಟಿ ನಿಲುವಿನ ಹಲವು ನಾಯಕರನ್ನು 'ಉಕ್ಕಿನ ಮನುಷ್ಯ' ಎಂದು ಕರೆಯುವ ಪದ್ಧತಿ ಇದೆ. ಈಶ್ವರಪ್ಪ ಅವರದ್ದು ಒಂದು ಲೆಕ್ಕದಲ್ಲಿ 'ಗಟ್ಟಿ' ನಿರ್ಧಾರವೇ. ಮತ್ತು ಇವರನ್ನು 'ಬಂಗಾರದ ಮನುಷ್ಯ' ಅಂತ ಕರೆಯಲೂ ಅಡ್ಡಿಯೇನಿಲ್ಲ. ಏಕೆಂದರೆ ಇವರ ಬಳಿ ಸಿಕ್ಕ ಬಂಗಾರ ಎಷ್ಟು ಗೊತ್ತೇ ? ಭರ್ತಿ 1 ಕೆ.ಜಿ. 900 ಗ್ರಾಂ. ಈ ಬಂಗಾರ ನಗನಾಣ್ಯಗಳ ರೂಪದಲ್ಲಿತ್ತೋ ಇಲ್ಲ 'ಗಟ್ಟಿ' ರೂಪದಲ್ಲಿತ್ತೋ ಎಂಬುದನ್ನು ಮಾತ್ರ ಇನ್ನೊಮ್ಮೆ ಕೇಳಿ ತಿಳಿದುಕೊಳ್ಳಬೇಕಿದೆ. ಇಂಥ ಇವರ ಮನೆ, ಕಚೇರಿ, ಕಾರ್ಖಾನೆ ಇತ್ಯಾದಿ 'ಸಂಗ್ರಹಾಗಾರ'



ಗಳಲ್ಲಿ ಯಾವ ಕಳಂಕ ಕೊಳಕೂ ಇಲ್ಲ. ಇವರ ಬದುಕು ಶ್ವೇತ ಶುಭ್ರ. ಬೇಕಾದರೆ ನೋಡಿ ಇವರ ಬಳಿ ಬರೋಬ್ಬರಿ 37 ಕೆ.ಜಿ. ಶ್ವೇತ ಶುಭ್ರ ಬೆಳ್ಳಿ ಇದೆ.

ಇವರ ಮನೆಯಲ್ಲಿ ಯಾವ ಬ್ಯಾಂಕು ತಮ್ಮ ಗೃಹ ಶಾಖೆ ತೆರೆದಿಲ್ಲ. ಆದರೂ ಇವರ ಮನೆಯಲ್ಲಿ ದುಡ್ಡು ಹಾಕಲು ಅವರು ನೋಟು ಎಣಿಸುವ ಯಂತ್ರವನ್ನೇ ಮನೆಯಲ್ಲಿ ತಂದಿಟ್ಟುಕೊಂಡಿದ್ದಾರೆ ಎಂದರೆ ಇವರು ಎಂಥ ದಡ್ಡರು ಮತ್ತು 'ನೋಟು ಎಣಿಸು'ವುದರಲ್ಲಿ ಎಂತಹ ಅನನುಭವಿಗಳು ಅಂತ ನೀವು ತಿಳಿದುಕೊಳ್ಳಬಹುದು.

"ನಿಮಗೇಕೆ ಕೊಡಬೇಕು ಕಪ್ಪ !! ಹಾಂ !.. ಕ್ಷಮಿಸಿ ....ಲೆಕ್ಕ..." !!!

"ನಾನು ದುಡಿಯುತ್ತೇನೆ. ನೂರು ಕಡೆ ಆಸ್ತಿ ಖರೀದಿ ಮಾಡುತ್ತೇನೆ. ಅದಕ್ಕೆ ಆದಾಯ ತೆರಿಗೆ ಇಲಾಖೆಗೆ ಲೆಕ್ಕ ಕೊಡುತ್ತೇನೆ. ನಿಮಗೇಕೆ ಕೊಡಬೇಕು ಲೆಕ್ಕ..."

ಹೀಗಂತ ಮೊನ್ನೆ ಈಶ್ವರಪ್ಪನವರು 'ಕಿತ್ತೂರು ರಾಣಿ ಚೆನ್ನಮ್ಮ' ಪಾತ್ರಧಾರಿಯಾಗಿ ಬಿ. ಸರೋಜದೇವಿಯವರು ಬ್ರಿಟೀಷರ ವಿರುದ್ಧ "ನಿಮಗೇಕೆ ಕೊಡಬೇಕು ಕಪ್ಪ" ಎಂದು ಅಬ್ಬರಿಸಿದಂತೆ ತಮ್ಮ ಕುಟುಂಬದ ಆಸ್ತಿ ಖರೀದಿ ವಿಷಯವಾಗಿ ಪ್ರಶ್ನೆ ಕೇಳಿದ ಪತ್ರಕರ್ತರ ಮೇಲೆ ಹರಿಹಾಯ್ದಿದ್ದಾರೆ.

ಬಿ. ಸರೋಜದೇವಿ ಗೆಟಪ್‌ನಲ್ಲಿ ಬೇಕು ಬೇಕಾದ ಡೈಲಾಗ್ ಹೊಡೆಯುವುದು ಈಶ್ವರಪ್ಪನವರಿಗೆ ಸುಲಭವಿರಬಹುದು. ಆದರೆ ಅದಕ್ಕೆ ಮೊದಲು ಅವರು ತಾವು ಸಾರ್ವಜನಿಕ ಪ್ರತಿನಿಧಿಯಾದ ಶಾಸಕ, ಜನಕ್ಕೆ ಉತ್ತರ ಹೇಳಬೇಕಾದ ಮಂತ್ರಿ, ಇಡೀ ಕರ್ನಾಟಕಕ್ಕೆ ಉಪ ಮುಖ್ಯಮಂತ್ರಿ ಮತ್ತು 'ದೇಶಭಕ್ತಿಯೇ ಮೈವೆತ್ತ' ರಾಜಕೀಯ ಪಕ್ಷವೊಂದರ ರಾಜ್ಯ ಘಟಕದ ಅಧ್ಯಕ್ಷರು ಬೇರೆ ಎಂಬುದನ್ನು ಸದಾ ನೆನಪಿನಲ್ಲಿ ಇಡಬೇಕು. ಮಗ ಉದ್ಯಮಿ ಅವನು ರಾಜಾಸ್ತಾನದಲ್ಲಿ 38 ಲಕ್ಷ ಕೊಟ್ಟು 11 ಎಕರೆ ಭೂಮಿ ಖರೀದಿಸಿದ್ದಾನೆ, ಏನೀಗ ? ಎಂದು ಬಿಟ್ಟರೆ ಅದರಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಇರುವುದಿಲ್ಲ.

ಮಾರುಕಟ್ಟೆ ಮೌಲ್ಯ 1.24 ಕೋಟಿ ನೋಂದಣಿ ಮಾತ್ರ 55.26 ಲಕ್ಷಕ್ಕೆ

ಜುಲೈ 2011 ರಲ್ಲಿ ಶಿವಮೊಗ್ಗದ ಮಂಡ್ಲಿ ಕೈಗಾರಿಕಾ ಪ್ರದೇಶದಲ್ಲಿ 1.24 ಕೋಟಿ ರೂಪಾಯಿಗಳ ಮಾರುಕಟ್ಟೆ ಮೌಲ್ಯ ಇರುವ ಜಮೀನು ಖರೀದಿಸಿರುವ ಈಶ್ವರಪ್ಪ ಮಗಳು ಜ್ಯೋತಿ ಅದನ್ನು ನೋಂದಣಿ ಮಾಡಿಸಿರುವುದು ಕೇವಲ 55.26 ಲಕ್ಷ ರೂಪಾಯಿಗಳ ಮೌಲ್ಯಕ್ಕೆ. ಅಂದರೆ ಮಾರುಕಟ್ಟೆ ದರದ ಅರ್ಧಕ್ಕಿಂತಲೂ ಕಡಿಮೆ ದರಕ್ಕೆ. ಅಂದರೆ ಸು. 68.74 ಲಕ್ಷ ರೂ.ಗಳಷ್ಟು ಕಡಿಮೆ ಬೆಲೆ ತೋರಿಸಲಾಗಿದೆ. ಖರೀದಿ ರಾಮನ ಲೆಕ್ಕದಲ್ಲಿ–ನೋಂದಣಿ ಕೃಷ್ಣನ ಲೆಕ್ಕದಲ್ಲಿ. ನೋಂದಣಿ ಮತ್ತು ಮುದ್ರಾಂಕ ಇಲಾಖೆ ಇದನ್ನು ಪತ್ತೆ ಹಚ್ಚಿ, ಜಿಲ್ಲಾ ನೋಂದಾಣಿಧಿಕಾರಿಗಳಿಂದ ಈ ಬಗ್ಗೆ ನೋಟಿಸ್ ಜಾರಿಯಾಗಿತ್ತು. ನಂತರ ಜ್ಯೋತಿ ಹೆಚ್ಚುವರಿಯಾಗಿ 5.36 ಲಕ್ಷ ರೂ. ನೋಂದಣಿ ಶುಲ್ಕ ಪಾವತಿಸಿದ್ದಕ್ಕೆ ದಾಳಿ ವೇಳೆ ದಾಖಲೆಗಳು ಸಿಕ್ಕಿವೆ. ಇದರ ಅರ್ಥ ಏನು ? ಸಾರ್ವಜನಿಕ ಜೀವನದಲ್ಲಿರುವವವರು ತಮ್ಮ ಉದ್ಯಮ ವ್ಯವಹಾರಗಳ ವಿಷಯದಲ್ಲಿ ಪಾರದರ್ಶಕತೆ ಕಾಪಾಡಬೇಕು ಎಂದು ಪತ್ರಕರ್ತರಾಗಲೀ, ಸಾರ್ವಜನಿಕರಾಗಲೀ ಬಯಸಿದರೆ ಅದರಲ್ಲಿ ತಪ್ಪಾದರೂ ಏನಿದೆ? ಬಿಜೆಪಿಯ ಕಿತ್ತಾಟ, ಬಿಕ್ಕಟ್ಟು–ಇಕ್ಕಟ್ಟುಗಳ ಸಂಧರ್ಭದಲ್ಲೆಲ್ಲಾ ಹಲವಾರು ಸಾರಿ ಪತ್ರಕರ್ತರನ್ನು ಒಲೈಸುವಂತೆ ಸಾಕಷ್ಟು ತಾಳ್ಮೆ ಮತ್ತು ಜಾಣ್ಮೆಯಿಂದ ತಿಪ್ಪೆ ಸಾರಿಸುವ ಮಾತನಾಡುತ್ತಿದ್ದ ಈಶ್ವರಪ್ಪನವರು ಈಗ ಪ್ರಶ್ನೆ ಕೇಳಿದವರ ಮೇಲೆ ಎರಗಿ ಬೀಳುವುದರ ಹಿನ್ನೆಲೆ ಏನು? ಉತ್ತರ ನೀಡಲು ಕಷ್ಟವಾಗುವ ನಾನಾ ಅಂಶಗಳು ಈ ವ್ಯವಹಾರದಲ್ಲಿ ಇವೆ ಅಂತ ಅರ್ಥ ಅಲ್ಲವೇ?

ಈಶ್ವರಪ್ಪನವರು ಮತ್ತು ಅವರ ಕುಟುಂಬ ಸದಸ್ಯರು ತಮ್ಮ ಆದಾಯಕ್ಕಿಂತ ಅಧಿಕ ಪ್ರಮಾಣದ ಆಸ್ತಿ ಹೊಂದಿದ್ದಾರೆ. 2006ರಲ್ಲಿ ಈಶ್ವರಪ್ಪನವರು ಸಚಿವರಾದಂದಿನಿಂದ ಶಿವಮೊಗ್ಗದ ಬಿ.ಎಚ್. ರಸ್ತೆ, ಸವಳಂಗ ರಸ್ತೆಯ ಚನ್ನಬಸಪ್ಪ ಬಡಾವಣೆ, ತ್ಯಾವರೆ ಚಟ್ನಹಳ್ಳಿಯಲ್ಲಿ 25 ಆಸ್ತಿ ಖರೀದಿಸಿದ್ದಾರೆ ಅಂತ ವಿನೋದ್ ಎಂಬ ವ್ಯಕ್ತಿಯೊಬ್ಬರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದ ಆಧಾರದಲ್ಲಿ ಈ ದಾಳಿ ನಡೆದಿದೆ ಎಂದು ವರದಿಯಾಗಿದೆ. ಸ್ವತಃ ಈಶ್ವರಪ್ಪ, ಅವರ ಮಗ ಕಾಂತೇಶ್ ಸೊಸೆ ಶಾಲಿನಿ, ಮಗಳು ಜ್ಯೋತಿ ಮುಂತಾದವರು ಪಾಲುಗಾರಿಕೆ ಹೊಂದಿರುವ 18 ಟ್ರಸ್ಟ್‌ಗಳು ಹಾಗೂ ಸಂಸ್ಥೆಗಳ ದಾಖಲೆಗಳು ದಾಳಿಯ ಸಂದರ್ಭದಲ್ಲಿ ದೊರೆತಿವೆ ಎಂದು ವರದಿಯಾಗಿದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ ಕುಟುಂಬ ವರ್ಗದವರು ಸದಸ್ಯರಾಗಿರುವ ಟ್ರಸ್ಟ್‌ಗಳು ಶಿವಮೊಗ್ಗದ ಅಯಕಟ್ಟಿನ ಜಾಗದಲ್ಲಿ ವ್ಯಾಪಕವಾಗಿ ಭೂಮಿ ಖರೀದಿಸಿರುವ ದಾಖಲೆಗಳು ದಾಳಿವೇಳೆ ಸಿಕ್ಕವೆ. ದಾಳಿಯಲ್ಲಿ ಒಟ್ಟು 28 ದಾಖಲೆಗಳು ಸಿಕ್ಕಿವೆ ಎಂದು ವರದಿಯಾಗಿವೆ. ಕುಟುಂಬ ಸದಸ್ಯರು ಚಿತ್ರದುರ್ಗದಲ್ಲಿ, ಬಳ್ಳಾರಿಯಲ್ಲಿ, ಬೆಂಗಳೂರಿನಲ್ಲಿ, ದೂರದ ರಾಜಾಸ್ತಾನದಲ್ಲಿ ಭೂಮಿ, ಮನೆ ಹೊಂದಿರುವುದು, ಗಣಿ, ಉದ್ದಿಮೆ, ವ್ಯಾಪಾರ, ಕಾರ್ಖಾನೆ, ಶಿಕ್ಷಣ ಸಂಸ್ಥೆಗಳಲ್ಲಿ ಭಾಗಿಯಾಗಿರುವುದು ಮುಂತಾದವುಗಳನ್ನು ಯಾರೂ ನಿರಾಕರಿಸುವಂತಿಲ್ಲ. ಹೀಗಿರುವಾಗ ಈ ವ್ಯಾಪಾರ–ಉದ್ದಿಮೆ–ವ್ಯವಹಾರಗಳಲ್ಲಿ ತೊಡಗಿಕೊಂಡವರೇ ಸರ್ಕಾರದ ಆಡಳಿತ ಚುಕ್ಕಾಣಿಯನ್ನೂ ಹಿಡಿದಿರುವಾಗ, ಅಥವಾ ಅಂಥವರ ತೀರಾ ಹತ್ತಿರದ ಬಂಧುಗಳಾಗಿರುವಾಗ ಅಧಿಕಾರದ ದುರ್ಬಳಕೆ ಆಗಬಾರದು, ವೈಯುಕ್ತಿಕ ಹಿತಾಸಕ್ತಿಗಳಿಗೆ ಸಂವಿಧಾನ ಬದ್ಧ ಸ್ಥಾನಮಾನಗಳ ದುರುಪಯೋಗ ಆಗಬಾರದು ಎಂದು ಸಾರ್ವಜನಿಕರು ನಿರೀಕ್ಷಿಸುವುದು ಸರಿಯಾಗಿಯೇ ಇದೆ. ಈ ವಿಷಯವನ್ನು ಸ್ಪಷ್ಟೀಕರಿಸಬೇಕಾದ ನೈತಿಕ ಮತ್ತು ರಾಜಕೀಯ ಕರ್ತವ್ಯ ಸಾರ್ವಜನಿಕ ಜೀವನದಲ್ಲಿರುವವರಿಗೆ ಇದೆ.

ಹಿಂದೆಮ್ಮೊ 'ಹಿಂದುತ್ವ'ದ ಈ ವೀರ ಸಂಘ ಪರಿವಾರದ ಬಗ್ಗೆ ಮಾತನಾಡುವವರ 'ನಾಲಿಗೆ ಸೀಳಿ, ಕೈ ಕಾಲು ಕತ್ತರಿಸಿ" ಅಂತೆಲ್ಲಾ ಬಹಿರಂಗವಾಗಿಯೇ ಕರೆ ಕೊಟ್ಟಿದ್ದನ್ನು ಜನರು ಇನ್ನೂ ಮರೆತಿಲ್ಲ.


ಈ ನೆಲದ ಕಾನೂನು ಆಗ ಕೆ.ಎಸ್. ಈಶ್ವರಪ್ಪ ಎಂಬ ಒಂದೇ ಒಂದು ಓಟು ಹಾಕುವ ಅಧಿಕಾರ ಮಾತ್ರವುಳ್ಳ ಈ 'ಮನುಷ್ಯ'ನಿಗೂ ಅನ್ವಯವಾಗಿ ಈ ಮನುಷ್ಯ ಕಾನೂನು ಪ್ರಕಾರ ಪರಪ್ಪನ ಅಗ್ರಹಾರದಲ್ಲಿ ಒಂದು ನಾಲ್ಕು ತಿಂಗಳು ಕಂಬಿ ಗುಣಿಸಿ ಬಂದಿದ್ದರೆ ಪ್ರಶ್ನೆ ಕೇಳಿದ ಪತ್ರಕರ್ತರ ಮೇಲೆ ಹೀಗೆ ಹರಿಹಾಯುವ ಪ್ರಸಂಗ ಬರುತಿ [illegible] ಅಲ್ಲವೇ?

'ನಮ್ಮ ರಾಬರ್ಟ್ ಕ್ಲೈವ್'

ಅಪರೂಪದ ಪ್ರಸ್ತುತ ಸಮಕಾಲೀನ ರಾಜಕೀಯ ನಾಟಕ

ಎನ್.ಕೆ. ವಸಂತ ರಾಜ

ರಾಬರ್ಟ್ ಕ್ಲೈವ್‌ನ ಜೀವನದ ಬಗೆಗಿರುವ ಎಂದು 'ಚಾರಿತ್ರಿಕ' ವಸ್ತು ಉಳ್ಳ ನಾಟಕ ಹೇಗೆ ಅತ್ಯಂತ ಸಮಕಾಲೀನ ಮತ್ತು ಪ್ರಸ್ತುತ ರಾಜಕೀಯ ನಾಟಕವಾದೀತು? ಅದೂ ನಿಜವಾದ ಅರ್ಥದಲ್ಲಿ. ಅದೇ ಈ ನಾಟಕದ ವಿಶೇಷತೆ. 'ಜಾನ್ ಇಂಡಿಯಾ ಟೆಕ್' ಎಂಬ ಐಟಿ ಕಂಪನಿಯ 'ಟೇಲೆಂಟ್ ಫೆಸ್ಟ್' ನ ಅಡಿಶನ್ಸ್ ಸೆಟ್ಟಿಂಗ್‌ನಿಂದ ನಾಟಕ ಆರಂಭವಾಗುತ್ತದೆ. ಅಡಿಶನ್‌ಗೆ ವಿಷಯ 'ಬ್ರಿಟಿಶ್ ರಾಜ್'. ತಮಾಷೆಯೆಂದರೆ ಇಡೀ ನಾಟಕ ಇದೇ ಸೆಟ್ಟಿಂಗ್‌ನಲ್ಲಿ ಮುಂದುವರೆದು ಕೊನೆಯಾಗುತ್ತದೆ. ಮೊದಲ ದೃಶ್ಯದಲ್ಲಿ 1774ರಲ್ಲಿ ಬ್ರಿಟಿಷ್ ಪಾರ್ಲಿಮೆಂಟರಿ ಕಮಿಟಿಯ ಮುಂದೆ ಕ್ಲೈವ್‌ನ ವಿಚಾರಣೆ ನಡೆಯುತ್ತಿದೆ. ಅಥವಾ ಕ್ಲೈವ್ ಪಾತ್ರಧಾರಿ ಆ ದೃಶ್ಯದ ತನ್ನ ದೀರ್ಘ ಸಂಭಾಷಣೆಯ ಅಡಿಶನ್ ಕೊಡುತ್ತಿದ್ದಾನೆ ಎಂದರೆ ಹೆಚ್ಚು ಸರಿಯಾದೀತು. ಮುಂದಿನ ದೃಶ್ಯಗಳು ಈಸ್ಟ್ ಇಂಡಿಯಾ ಕಂಪನಿಯ ಮತ್ತು ಕ್ಲೈವ್‌ನ ಜೀವನದ, ಮುಂದೆ ಭಾರತದ ಸ್ವಾತಂತ್ರ್ಯ ಕಳೆದುಕೊಳ್ಳಲು ಕಾರಣವಾದ ಪ್ರಮುಖ ಘಟನಾವಳಿಗಳ ಫ್ಲಾಶ್‌ಬ್ಯಾಕುಗಳು ಅಥವಾ ಅದರ ಅಡಿಶನುಗಳು.



ಫ್ಲಾಶ್‌ಬ್ಯಾಕ್ ಕ್ರಿ.ಶ. 1600 ರಲ್ಲಿ 'ಕಂಪನಿ ಆಫ್ ಮರ್ಚಂಟ್ಸ್ ಆಫ್ ಲಂಡನ್'ನ ವರ್ತಕರ ಪಾರ್ಟಿಯಿಂದ ಆರಂಭ ವಾಗುತ್ತದೆ. ಅವರ ಸಂಭ್ರಮಕ್ಕೆ ಮೇರೆ ಇಲ್ಲ. ಅದಕ್ಕೆ ಕಾರಣ ಎಲಿಜಬೆತ್ ರಾಣಿ, ಮುಂದೆ ಈಸ್ಟ್ ಇಂಡಿಯಾ ಕಂಪನಿ ಎಂದು ಕರೆಯಲಾದ ಈ ಕಂಪನಿಗೆ ಆಫ್ರಿಕಾದಿಂದ ಪೂರ್ವಕ್ಕಿರುವ ಅಂದರೆ ಮುಖ್ಯವಾಗಿ ಇಂಡಿಯಾ, ಚೀನಾ ಮತ್ತು ಇತರ ಏಶ್ಯಾದ ದೇಶಗಳ ಆಮದು-ರಫ್ತು ವ್ಯಾಪಾರದ ಏಕಸ್ವಾಮ್ಯವನ್ನು ಕೊಟ್ಟದ್ದು. ವ್ಯಾಪಾರದ ಸರಕುಗಳಲ್ಲಿ ಹತ್ತಿ, ಉಪ್ಪು, ರೇಶ್ಮೆ, ಚಹ ಮುಂತಾದ ಪ್ರಮುಖ ಆವಶ್ಯಕ ವಸ್ತುಗಳಲ್ಲದೆ ಇಂಡಿಗೊ, ಬಂದೂಕಿನ ಮದ್ದಿಗೆ ಅಗತ್ಯವಾದ ಸಾಲ್ಟ್ ಪೀಟರ್, ಅಫೀಮು ಸೇರಿದ್ದವು. ವ್ಯಾಪಾರ ರಕ್ಷಿಸಿಕೊಳ್ಳಲು ಸೈನ್ಯ ಕಟ್ಟಿಕೊಳ್ಳುವ ಅಧಿಕಾರವನ್ನೂ ಕೊಡಲಾಗಿತ್ತು.

ಮುಂದಿನ ನೂರು ವರ್ಷಗಳಲ್ಲಿ ಇಂಡಿಯಾದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಚಟುವಟಿಕೆಗಳನ್ನು ಪವರ್ ಪಾಯಿಂಟ್ ಪ್ರೆಸೆಂಟೇಶನ್‌ನ ಮೂಲಕ ತೋರಿಸಲಾಗುತ್ತದೆ. ಮುಂದಿನ ದೃಶ್ಯಗಳಲ್ಲಿ 1707ರಿಂದ 1774ರವರೆಗೆ ಈಸ್ಟ್ ಇಂಡಿಯಾ ಕಂಪನಿಯ ಪರವಾಗಿ ಕ್ಲೈವ್ ಬಂಗಾಳದ ದಿವಾನರ ಜತೆ-ಒಮ್ಮೆ ಸ್ನೇಹ-ಸಹಕಾರ, ಒಮ್ಮೆ (ಪಲಾಸಿ) ಯುದ್ಧ, ಇನ್ನೊಮ್ಮೆ ದಗಾಕೋರತನ, ಕುಟುಂಬದ ಒಳಗೆ ಒಡಕು ತರುವ ಮಸಲತ್ತು ಮಾಡುತ್ತಾ-ಬಂಗಾಳ ಪ್ರಾಂತ್ಯವನ್ನು ವಶಕ್ಕೆ ತೆಗೆದುಕೊಳ್ಳುವ ಘಟನಾವಳಿ ಬಿಚ್ಚಿಕೊಳ್ಳುತ್ತದೆ. 1774ರಲ್ಲಿ ಕ್ಲೈವ್ ಆತ್ಮಹತ್ಯೆಯೊಂದಿಗೆ ಕೊನೆಗೊಳ್ಳುತ್ತದೆ. ಈ ನಡುವೆ ಕಂಪನಿ ಸುಂಕ ರಹಿತ ಆಂತರಿಕ ಮತ್ತು ರಫ್ತು-ಆಮದು ವ್ಯಾಪಾರ ನಡೆಸಲು ಬಂಗಾಳದ, ಇತರ ಪ್ರಾಂತ್ಯಗಳ, ದೆಹಲಿಯ ಆಳರಸರನ್ನು ಓಲೈಸಿ, ಹೆದರಿಸಿ-ಬೆದರಿಸಿ, ಆಮಿಷ ಒಡ್ಡಿ ಪರವಾನಿಗೆ ಪಡೆದು ಕೊಳ್ಳುವ ಕಥೆ ಸಹ ಹೆಣೆದುಕೊಂಡಿದೆ. ಇದರ ಜತೆಗೆ ಉಪ್ಪು ಮುಂತಾದ ಅಗತ್ಯ ವಸ್ತುಗಳ ವ್ಯಾಪಾರದಲ್ಲಿ ಏಕಸ್ವಾಮ್ಯ ಪಡೆದುಕೊಳ್ಳುವ ಕಥೆ ಸಹ ಇದೆ. ಕಂಪನಿಯ ಆರ್ಥಿಕ ಬಲ ಹೆಚ್ಚುತ್ತಾ ಹೋದಂತೆ ರಾಜಕೀಯ ಅಧಿಕಾರ ದಕ್ಕಿಸಿ ಕೊಳ್ಳುವ ಪ್ರಕ್ರಿಯೆ ಸಹ ಉತ್ತಮವಾಗಿ ರೂಪಿತ ವಾಗಿದೆ. ಇಂಡಿಯಾ ಆರ್ಥಿಕ ಸಾರ್ವಭೌಮತೆ ಕಳೆದುಕೊಳ್ಳುತ್ತಾ ಕೊನೆಗೆ ರಾಜಕೀಯ ಸಾರ್ವಭೌಮತೆ ಕಳೆದುಕೊಳ್ಳುವ ರೀತಿ ಸಹ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಆದರೆ ನಾಟಕದ ವಸ್ತು ಮತ್ತು ತಂತ್ರದ ವಿಶೇಷತೆ ಇರುವುದು ಜಗತ್ ಸೇಠ್ ಪಾತ್ರದಲ್ಲಿ. ಮಾತು ಹಂಚಿಕೊಂಡು ಇಬ್ಬರು ಮಾಡುವ ಈ ಪಾತ್ರದ ಮೂಲಕ ಹೆಚ್ಚಿನ ನಾಟಕದ ವಸ್ತುವಿನ ನಿರೂಪಣೆ ನಡೆಯುತ್ತದೆ. ಇದು ಕಾಲದೇಶಗಳನ್ನು ಮೀರಿದ ಪಾತ್ರ. ಜಗತ್ ಸೇಠ್ ಒಂದು ಹೆಸರಲ್ಲ. ಒಂದು ಬಿರುದು. ಒಬ್ಬ (ಚಾರಿತ್ರಿಕ) ವ್ಯಕ್ತಿಯಲ್ಲ. ಒಂದು ವ್ಯವಸ್ಥೆ. ಲೇವಾದೇವಿಯ ವ್ಯಾಪಾರದ ಮೂಲಕ ರಾಜಕಾರ್ಯಕ್ಕೂ ರಾಜಕಾರಣಕ್ಕೂ ಕೊಟ್ಟು ಪಡೆಯುವ ಕಾರ್ಯಕಾರಣ ಸಂಬಂಧವನ್ನು ನಿರ್ಮಿಸಿದ ವ್ಯವಸ್ಥೆ. ಜಗತ್ ಸೇಠ್ ಎಂದರೆ ಬ್ಯಾಂಕರ್ ಟು ದ ವರ್ಲ್ಡ್. ಈ ನಾಟಕದಲ್ಲಿ ನಿಜವಾಗಿಯೂ ನಾಯಕ ಸೂತ್ರಧಾರ ಎಲ್ಲವೂ ಜಗತ್ ಸೇಠ್. ಕ್ಲೈವ್ ಅಲ್ಲ. ದಿವಾನರಿಗೆ, ನವಾಬರಿಗೆ, ಚಕ್ರವರ್ತಿಗೂ, ವಿದೇಶೀ ಕಂಪನಿಗಳಿಗೂ ಸಾಲ ಕೊಡುತ್ತಾ, ಬಡ್ಡಿ ಕೊಡಲು ವಿಫಲವಾದಾಗ ಅವರ ಆಸ್ತಿ ಕಬಳಿಸುತ್ತಾ, ನಾಣ್ಯ ವ್ಯವಸ್ಥೆಯನ್ನೇ ವಶ ಮಾಡಿಕೊಳ್ಳುತ್ತಾ, ಕಂದಾಯ ವಸೂಲಿ ಹಕ್ಕನ್ನು ಪಡೆಯುತ್ತಾ, ತಮಗೆ ಅನುಕೂಲವಾದ ರಾಜನನ್ನು ಅಧಿಕಾರಕ್ಕೆ ತರುತ್ತಾ, ಅಡ್ಡ ಬರುವವರನ್ನು ಮೂಲೆಗುಂಪಾಗಿಸುತ್ತಾ ಮುಗಿಸುತ್ತಾ ಸಾಗುತ್ತಾನೆ.

ಜಗತ್ ಸೇಠ್ ಬಂಡವಾಳದ ಪ್ರತಿನಿಧಿಯಾಗಿ, 17-18 ನೇ ಶತಮಾನದಲ್ಲಿ ಮಾತ್ರವಲ್ಲ ಆ ಮೇಲೂ, ಎಲ್ಲಾ ದೇಶಗಳಲ್ಲಿ ಆರ್ಥಿಕ, ರಾಜಕೀಯ ಆಗುಹೋಗುಗಳನ್ನು ನಿರ್ಧರಿಸುವವನಾಗಿ ಮೂಡಿ ಬರುತ್ತಾನೆ. ಜಾಗತೀಕರಣಗೊಂಡ ಹಣಕಾಸು ಬಂಡವಾಳ (ದೈತ್ಯ ಬಹುರಾಷ್ಟ್ರೀಯ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು) ಈಗಿನ ಜಗತ್ ಸೇಠ್. ಈಸ್ಟ್ ಇಂಡಿಯಾ ಕಂಪೆನಿ ಮೊದಲ ಬಹುರಾಷ್ಟ್ರೀಯ ಕಂಪನಿ ಎನ್ನಲಾಗುತ್ತದೆ. ಈಗ ಜಗತ್ತಿನ ತುಂಬಾ ಕೆಲವೇ ಬಹುರಾಷ್ಟ್ರೀಯ ಕಂಪನಿಗಳದೇ ದರ್ಬಾರು. ಎಲ್ಲಾ ಕ್ಷೇತ್ರಗಳಲ್ಲೂ (ಕೃಷಿ, ಕೈಗಾರಿಕೆಯಲ್ಲೂ) ಸರಕು ಸೇವೆಗಳಲ್ಲೂ, ಕೊನೆಗೆ ಚಿಲ್ಲರೆ ವ್ಯಾಪಾರದಲ್ಲೂ ಅವುಗಳದೇ ಏಕಸ್ವಾಮ್ಯ ಅಥವಾ ಬಹುಸ್ವಾಮ್ಯ. ಆದರೆ ಅದನ್ನು ಸಾಧಿಸಲು ಮುಂದೊಯ್ಯಲು ಜಗತ್ ಸೇಠ್ ಮತ್ತು ಕಂಪನಿಗಳಿಗೆ ಒಬ್ಬ ಕ್ಲೈವ್ ಬೇಕಾಗುತ್ತಾನೆ. ನಾಟಕದಲ್ಲಿ ಜಗತ್ ಸೇಠ್ ಕೊನೆಯ ಮಾತು ಇದನ್ನು ಧ್ವನಿಸುತ್ತದೆ - "ಈಗ ಮತ್ತೆ ಸಂದರ್ಭ ಒದಗಿ ಬಂದಿದೆ. ಈಗ ನಮಗೆ ಬೇಕು ಇಂಥವನೊಬ್ಬ. ನಿಮ್ಮಲ್ಲಿ ಯಾರಾದರೂ ಇದ್ದರೆ ಮುಂದೆ ಬರಬೇಕು. ನಮ್ಮ ರಾಬರ್ಟ್ ಕ್ಲೈವ್. ನಿಮಗಾಗಿ ಕಾದಿರುವೆ ನಾನು." ಜಗತ್ ಸೇಠ್‌ನ ಪಾತ್ರ 'ನಮ್ಮ ರಾಬರ್ಟ್ ಕ್ಲೈವ್' ಬರಿಯ ಕ್ಲೈವನ ದುರಂತ ಕಥೆ ಅಥವಾ ಇಂಡಿಯಾದಲ್ಲಿ ವಸಾಹತು ಶಾಹಿಯ ಆರಂಭದ ಕಥೆ ಆಗುವುದನ್ನು ತಪ್ಪಿಸಿ, ಅತ್ಯಂತ ಸಮಕಾಲೀನ ಮತ್ತು ಪ್ರಸ್ತುತವಾದ



ಶಕ್ತಿಶಾಲಿ ರಾಜಕೀಯ ನಾಟಕದ ಎತ್ತರಕ್ಕೆ ಒಯ್ಯುತ್ತದೆ. ಜಗತ್ ಸೇಠುಗಳು ಕಾಯುತ್ತಿರುವ 'ನಮ್ಮ ರಾಬರ್ಟ್ ಕ್ಲೈವ್' ಯಾರು ಎಂಬ ಪ್ರಶ್ನೆಯನ್ನು ನಾಟಕ ಒಡ್ಡುತ್ತದೆ.

ಜಗತ್ ಸೇಠುಗಳು ಕಾಯುತ್ತಿರುವ 'ನಮ್ಮ ರಾಬರ್ಟ್ ಕ್ಲೈವ್' ಮನಮೋಹನ ಸಿಂಗ್ ಇರಬಹುದೆ ಎಂದು ನಾಟಕ ನೋಡಿದವರಿಗೆ ಅನುಮಾನ ಬಂದರೆ ಆಶ್ಚರ್ಯವಿಲ್ಲ. ದೇಶ ಅಡಿ ಮೇಲಾದರೂ ಸುಮ್ಮನೆ ಬಿಮ್ಮನೆ ಇರುವ ಸಿಂಗ್, ಅಮೆರಿಕದ ಜತೆ ಅಣು ಒಪ್ಪಂದ ಮತ್ತು ಚಿಲ್ಲರೆ ವ್ಯಾಪಾರದ ವಿಷಯದಲ್ಲಿ ಲಂಚ ಮಸಲತ್ತುಗಳ ಆಪಾದನೆ ಲೆಕ್ಕಿಸದೆ ಕ್ಲೈವನಂತೆ 'ದೇಶಕ್ಕಾಗಿ ವೀರಾವೇಶದಲ್ಲಿ ಹೋರಾಡಿದ್ದು' ಕಂಡಾಗ ಈ ಅನುಮಾನ ಗಟ್ಟಿಯಾಗುತ್ತದೆ. 'ನಮ್ಮ ರಾಬರ್ಟ್ ಕ್ಲೈವ್' ನಲ್ಲಿ ಇರುವ 'ನಮ್ಮ' ಎನ್ನುವುದು ಜಗತ್ ಸೇಠುಗಳ 'ನಮ್ಮ' ಮಾತ್ರವಲ್ಲ, 'ದೇಸಿ ಕ್ಲೈವ್' ಎಂಬುದನ್ನೂ ಧ್ವನಿಸುತ್ತಿರಬಹುದೆ? ನಮ್ಮ ಆರ್ಥಿಕ ರಾಜಕೀಯ ಸಾರ್ವಭೌಮತೆ ಹರಣ ಮಾಡಲು ಈಗ ಸಾವಿರಾರು ಮೈಲಿ ದೂರದಿಂದ ವಿದೇಶೀ ಕ್ಲೈವರನ್ನು ಕಳಿಸುವ ಅಗತ್ಯವಿಲ್ಲ. ಈ ಕೆಲಸವನ್ನು ಇಂಡಿಯಾಕ್ಕೆ ಹೊರಗುತ್ತಿಗೆ ಕೊಟ್ಟು ಇನ್ನೂ ಕಡಿಮೆ ಖರ್ಚಿನಲ್ಲಿ ದಕ್ಷವಾಗಿ ಮನಮೋಹಕವಾಗಿ ಮಾಡಬಹುದು. ಈ ನಮ್ಮ ಕ್ಲೈವರ ಅಪಾಯದ ಬಗ್ಗೆ ಜಾಗೃತರಾಗಬೇಕು ಎಂದು 'ನಮ್ಮ ರಾಬರ್ಟ್ ಕ್ಲೈವ್' ಹೇಳುತ್ತಿರುವಂತೆ ಭಾಸವಾಗುತ್ತದೆ.

ಪ್ರಕಾಶ ಬೆಳವಾಡಿ ಅವರ 'ನಮ್ಮ ರಾಬರ್ಟ್ ಕ್ಲೈವ್'ದ ವಸ್ತು, ಪಠ್ಯ ಮತ್ತು ಅದರ ಹಿಂದಿನ ಶ್ರಮ, ಅಧ್ಯಯನ ಮೆಚ್ಚುವಂತಹುದು. ನಾಟಕದ ತಂತ್ರ, ಸರಳ ರಂಗ ಸಜ್ಜಿಕೆ ಸಹ ಉತ್ತಮವಾಗಿದೆ. ಮೊದಲ ಎರಡು ಪ್ರದರ್ಶನಗಳಲ್ಲಿ ಸ್ವಲ್ಪ ಎಡವಿದರೂ, ಮೂರನೇ ಪ್ರದರ್ಶನದ ಹೊತ್ತಿಗೆ ಜಗತ್ ಸೇಠ್ ಮತ್ತು ಇತರ ಪ್ರಮುಖ ನಟರ ನಟನೆ ಮಾಗಿತ್ತು. ದೀರ್ಘ ಸಂಭಾಷಣೆಗಳು, ಸಂಗೀತ ಮತ್ತು ನಾಟಕೀಯ ಅಂಶಗಳಲ್ಲಿ ಕೊರತೆ ನಾಟಕದ ಸಂಕೀರ್ಣ ವಸ್ತುವನ್ನು ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ತಟ್ಟುವಲ್ಲಿ ಸ್ವಲ್ಪ ಮಟ್ಟಿಗೆ ಅಡ್ಡಿಯಾಗಿವೆ. ಈ ಅಂಶಗಳನ್ನು ಇನ್ನಷ್ಟು ಉತ್ತಮ ಪಡಿಸಲು ಅವಕಾಶಗಳಿವೆ. ಆದರೂ 'ನಮ್ಮ ರಾಬರ್ಟ್ ಕ್ಲೈವ್' ಕನ್ನಡದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರದರ್ಶಿತವಾದ ಮಹತ್ವದ ಅತ್ಯಂತ ಪ್ರಸ್ತುತವಾದ ಶಕ್ತಿಶಾಲಿ ರಾಜಕೀಯ ನಾಟಕ ಎಂದು ಹೇಳಲಡ್ಡಿಯಿಲ್ಲ. ಪ್ರಕಾಶ ಬೆಳವಾಡಿ ಮತ್ತು ಬೆಂಗಳೂರು ಸಮುದಾಯ ಇದಕ್ಕಾಗಿ ಅಭಿನಂದನೆಗೆ ಅರ್ಹರು.

ಇಂತಹ ನಾಟಕವನ್ನು, ಈ ಕೆಲವು ಸುಧಾರಣೆಗಳನ್ನು ಮಾಡಿಕೊಂಡು ರಾಜ್ಯಾದ್ಯಂತ ವ್ಯಾಪಕವಾಗಿ ಪ್ರದರ್ಶಿಸುವ ಅಗತ್ಯ ಇದೆ. ಚಿಲ್ಲರೆ ವ್ಯಾಪಾರ, ಬ್ಯಾಂಕಿಂಗ್, ಇನ್ಶುರನ್ಸ್ ಮುಂತಾದ ಆಯಕಟ್ಟಿನ ಕ್ಷೇತ್ರಗಳನ್ನು ವಿದೇಶೀ ಬಂಡವಾಳಕ್ಕೆ ಮುಕ್ತವಾಗಿಸುವುದರ ವಿರುದ್ಧ ಜನಜಾಗೃತಿ ಮತ್ತು ಪ್ರತಿರೋಧ ಮೂಡಿಸುವ ರಾಜಕೀಯ ಹೋರಾಟದಲ್ಲಿ 'ನಮ್ಮ ರಾಬರ್ಟ್ ಕ್ಲೈವ್' ಉತ್ತಮ ಸಾಂಸ್ಕೃತಿಕ ಅಸ್ತ್ರವಾಗಬಲ್ಲುದು.

ಮರು ಪ್ರದರ್ಶನ 'ರಂಗ ಶಂಕರ' ಜನವರಿ 16, ಸಂಜೆ 7 ಗಂಟೆಗೆ

'ನಗದು ವರ್ಗಾವಣೆ': ಜಿಲ್ಲೆಗಳ ಸಂಖ್ಯೆ 51ರಿಂದ 43, ಕೊನೆಗೆ 20ಕ್ಕೆ ಇಳಿಕೆ

51 ಜಿಲ್ಲೆಗಳಲ್ಲಿ ಜಾರಿಗೆ ಬರಬೇಕಾಗಿದ್ದ ಯುಪಿಎ-2 ಸರಕಾರದ ತುತ್ತೂರಿ ಯೋಜನೆ, 'ನೇರ ನಗದು ವರ್ಗಾವಣೆ'ಯನ್ನು, ಸರಿಯಾದ ತಯಾರಿ ಆಗಿಲ್ಲವಾದ್ದರಿಂದ ಸದ್ಯ ಜನವರಿ 1ರಂದು 16 ರಾಜ್ಯಗಳ 43 ಜಿಲ್ಲೆಗಳಲ್ಲಿ ಆರಂಭಿಸಿದರೆ ಸಾಕಷ್ಟಾಯಿತು('ಠೀಕ್ ಹೈ') ಎಂದು ನಿರ್ಧರಿಸಲಾಯಿತಂತೆ. ಆದರೆ ಕೊನೆಗೂ ಜನವರಿ 1ರಂದು ಆರಂಭವಾದದ್ದು ಆರು ರಾಜ್ಯಗಳ 20 ಜಿಲ್ಲೆಗಳಲ್ಲಿ ಮಾತ್ರ– ಅದೂ ಅರೆ-ಬರೆ ಸ್ವರೂಪದಲ್ಲಿ.


ಉದಾಹರಣೆಗೆ, ಕರ್ನಾಟಕದಲ್ಲಿ ಮೂರು ಜಿಲ್ಲೆಗಳಲ್ಲಿ ಇದು ಜಾರಿಗೆ ಬಂದಿದೆ. ತುಮಕೂರು, ಮೈಸೂರು ಮತ್ತು ಧಾರವಾಡ. 25ಲಕ್ಷ ಜನಸಂಖ್ಯೆಯ ತುಮಕೂರು ಜಿಲ್ಲೆಯಲ್ಲಿ ಈಗ ಆರಿಸಿರುವುದು ಕೇವಲ 32,467 ಫಲಾನುಭವಿಗಳನ್ನು. ಇವರಲ್ಲಿ 5,475 ಗರ್ಭಿಣಿ ಮಹಿಳೆಯರನ್ನು ಬಿಟ್ಟರೆ ಉಳಿದವರೆಲ್ಲರೂ ವಿದ್ಯಾರ್ಥಿಗಳು. ಕೆಲವೆಡೆ 'ಆಧಾರ್' ನೋಂದಣಿ ಆರಂಭವಾದದ್ದೇ ಇತ್ತೀಚೆಗೆ. ನೋಂದಣಿ ಮಾಡಿಸಿದವರಲ್ಲಿ ಬಹಳಷ್ಟು ವಿದ್ಯಾರ್ಥಿಗಳಿಗೆ ಒಂದು ವರ್ಷವಾದರೂ ಇನ್ನೂ 'ಆಧಾರ್' ಕಾರ್ಡುಗಳು ಸಿಕ್ಕಿಲ್ಲ. ಬ್ಯಾಂಕ್ ಖಾತೆಗಳೂ ಇಲ್ಲ. ಮೈಸೂರು ಜಿಲ್ಲೆಯಲ್ಲಿ 'ಆಧಾರ್' ನೋಂದಣಿ 95.5ಶೇ., ಆದರೆ ಕಾರ್ಡ್ ಇದುವರೆಗೆ ದೊರೆತಿರುವುದು 40ಶೇ. ಮಂದಿಗೆ ಮಾತ್ರ, 25ಶೇ.ದಷ್ಟು ಗ್ರಾಮಗಳಲ್ಲಿ ಜನರು ರಾಷ್ಟ್ರೀಕೃತ ಬ್ಯಾಂಕ್‌ನ ಶಾಖೆ ಕಾಣಲು 20ರಿಂದ 5ಕಿ.ಮಿ. ನಡೆಯಬೇಕು. ಧಾರವಾಡ ಜಿಲ್ಲೆಯಲ್ಲಿ ಫಲಾನುಭವಿಗಳ ಸಂಖ್ಯೆ ಕೇವಲ 40,320. ಇವರಲ್ಲಿ 'ಆಧಾರ್' ಕಾರ್ಡು ಪಡೆದಿರುವವರು 15,478 ಮಾತ್ರ.

ಆಂಧ್ರಪ್ರದೇಶದ ಐದು ಜಿಲ್ಲೆಗಳಲ್ಲಿ ಅದು ಆರಂಭವಾಗಲೇ ಇಲ್ಲ. ಹರ್ಯಾಣದಲ್ಲಿ ಎರಡು ಜಿಲ್ಲೆಗಳಲ್ಲಿ ಆರಂಭವಾಗಿದೆ, ಕಾಂಗ್ರೆಸ್ ಮುಖ್ಯಮಂತ್ರಿ ಅದನ್ನು ಮತ್ತೊಮ್ಮೆ ಹಾಡಿ ಹೊಗಳಿದರು. ಇನ್ನೊಂದು ಯುಪಿಎ ಆಳ್ವಿಕೆಯ ರಾಜ್ಯ ಮಹಾರಾಷ್ಟ್ರದ ಅತ್ಯಂತ ಬಿಕ್ಕಟ್ಟು ಪೀಡಿತ ವಿದರ್ಭ ಪ್ರದೇಶದಲ್ಲಿ ಅದು ಕೇವಲ 25ಶೇ. ಆಧಾರ್ ಬ್ಯಾಂಕ್ ಖಾತೆಗಳೊಂದಿಗೆ ಆರಂಭವಾಗಿದೆ. ರಾಜಸ್ತಾನ ಸರಕಾರ ಫಲಾನುಭವಿಗಳ ಸಂಖ್ಯೆಯನ್ನೇ ಪ್ರಕಟಿಸದೆ ಮೂರು ಜಿಲ್ಲೆಗಳಲ್ಲಿ ಆರಂಭಿಸಿದೆ.

ಅಂತಿಮವಾಗಿ, ಸರಕಾರದ ಸಬ್ಸಿಡಿಗಳನ್ನು ಜನಗಳಿಗೆ ತಲುಪಿಸುವಲ್ಲಿನ ಭ್ರಷ್ಟಾಚಾರವನ್ನು ತೊಡೆದು ಹಾಕಲಿದೆ ಎನ್ನಲಾದ ಈ ಯೋಜನೆಯಲ್ಲೇ, ನಗದಿನ ವರ್ಗಾವಣೆಯ ವಿಧಾನದಲ್ಲಿಯೇ ಭ್ರಷ್ಟಾಚಾರದ ವಾಸನೆ ಆಗಲೇ ಹೊಡೆಯುತ್ತಿದೆ ಎಂಬ ಸುದ್ದಿಗಳೂ ಬರುತ್ತಿವೆ. ಯುಪಿಎ-2 ಸರಕಾರದ ಹಣಕಾಸು ಸೇವೆಗಳ ಇಲಾಖೆ ಹಣದ ವಿತರಣೆಯ ಕಾಂಟ್ರಾಕ್ಟನ್ನು, ದೇಶವನ್ನು 12 'ಗುಚ್ಛ'ಗಳಾಗಿ ವಿಂಗಡಿಸಿ 'ಒಂದು ಗುಚ್ಛಕ್ಕೆ ಒಂದು ಬ್ಯಾಂಕ್ ಕರೆಸ್ಪಾಂಡೆಂಟ್ ಕಂಪನಿ' ಸೂತ್ರದಂತೆ ಗುತ್ತಿಗೆ ಕೊಡಲು ಯೋಚಿಸುತ್ತಿದೆಯಂತೆ. ಇದರಿಂದ ಕೆಲವು ಇಂತಹ ಕಂಪನಿಗಳು ನಗದು ವಿತರಣೆಯ ಗುತ್ತೇದಾರಿಕೆಗೆ ಪ್ರಯತ್ನಿಸಿ ಭ್ರಷ್ಟಾಚಾರಕ್ಕೆ ಇನ್ನೊಂದು ದಾರಿ ನಿರ್ಮಾಣವಾಗಬಹುದು ಎಂಬ ಭಯ ಸರಕಾರದ ಕೆಲವು ಸಲಹಾಗಾರರಿಗೆ ಕಾಡಲಾರಂಭಿಸಿದೆಯಂತೆ. ಈ ಕಾಂಟ್ರಾಕ್ಟಿನ ಕಮಿಷನ್ ಮೊತ್ತ ಕೆಲವೆಡೆ ಹಾಸ್ಯಾಸ್ಪದ ಎನಿಸುವಷ್ಟು ಕಡಿಮೆಯಿರುವುದು ಅವರ ಭಯಕ್ಕೆ ಕಾರಣ.

ದೈತ್ಯ ಭೂಹಗರಣಗಳನ್ನು ಮುಚ್ಚಿ ಹಾಕಲು ತನಿಖಾ ಆಯೋಗ?


ಯುಪಿಎ ಅಧ್ಯಕ್ಷೆಯವರ ಅಳಿಯನ ಮೇಲೆ ಹಗರಣಗಳ ಆರೋಪ ಬಂದುದು ನಮ್ಮ ಓದುಗರಿಗೆ ನೆನಪಿರಬಹುದು. ಆಗ ಹರ್ಯಾಣದ ಹಿಡುವಳಿಗಳ ಕ್ರೋಢೀಕರಣ ಮಹಾನಿರ್ದೇಶಕರಾಗಿದ್ದ ಹಿರಿಯ ಐಎಎಸ್ ಅಧಿಕಾರಿ ಅಶೋಕ್ ಖೆಮ್ಕ ಗುರ್‍ಗಾಂವ್‌ನ 3.5 ಎಕ್ರೆ ಜಮೀನಿನ ಭೂಪರಿವರ್ತನೆಯನ್ನು ರದ್ದು ಮಾಡಿದ್ದರು. ಇದರಿಂದಾಗಿ ಈ ಭೂಮಿಯನ್ನು ಖರೀದಿಸಿದ್ದ ರಾಬರ್ಟ್ ವಾದ್ರಾ ಅದನ್ನು ಡಿಎಲ್‌ಎಫ್ ರಿಯಲ್ ಎಸ್ಟೇಟಿಗೆ ಮಾರಿದ ಕ್ರಮಕ್ಕೆ ಕುತ್ತು ಬಂದಿತ್ತು. ಈ ಭೂಪರಿವರ್ತನೆಯವ ಅದನ್ನು ಮಂಜೂರು ಮಾಡುವ ಅಧಿಕಾರ ಸಹಾಯಕ ಕ್ರೋಢೀಕರಣ ಅಧಿಕಾರಿಗೆ ಇರಲಿಲ್ಲ ಎಂಬುದು ಖೆಮ್ಕ ಅವರು ಅದನ್ನು ರದ್ದು ಮಾಡುವ ಆದೇಶದಲ್ಲಿ ನೀಡಿದ್ದ ಕಾರಣ. ಹರ್ಯಾಣ ಸರಕಾರ ಈ ಬಗ್ಗೆ ತನಿಖೆ ನಡೆಸಲು ಒಂದು ಉನ್ನತ ಮಟ್ಟದ ಸಮಿತಿ ನೇಮಿಸಿದ್ದು, ಅದು ಕಳೆದ ವಾರ ತನ್ನ ವರದಿ ನೀಡಿದೆ. ಆದರೆ ಈ ಸಮಿತಿಯನ್ನು ನೇಮಿಸಿದ್ದು ಇಂತಹ ಬೃಹತ್



ಹಗರಣಗಳನ್ನು ಮುಚ್ಚಿಹಾಕಲಿಕ್ಕಾಗಿಯೇ ಎಂದು ಖೆಮ್ಕ ಟೀಕಿಸಿದ್ದಾರೆ.

ಉನ್ನತ ಮಟ್ಟದ ತನಿಖಾ ಸಮಿತಿಗೆ ಸಲ್ಲಿಸಿದ ಸರಕಾರದ ಟಿಪ್ಪಣಿಗಳನ್ನು ಕೇಳಿರುವುದಾಗಿ ವರದಿಯಾಗಿದೆ. ತಮ್ಮ ಆದೇಶ ಪೂರ್ವ ಪಂಜಾಬ್ ಹಿಡುವಳಿ(ಕ್ರೋಢೀಕರಣ ಮತ್ತು ಛಿದ್ರೀಕರಣ ತಡೆ) ಕಾನೂನು, 1948 ರಡಿಯಲ್ಲಿ ಭಾಗಶಃ ನ್ಯಾಯಿಕ ಸ್ವರೂಪ ಹೊಂದಿದ್ದು ಅಂತಿಮವಾಗಿದೆ. ಅದು ತಪ್ಪೆನ್ನುವ ವ್ಯಕ್ತಿ ಅಥವ ಕಂಪನಿ ಹೈಕೋರ್ಟಿನಲ್ಲಿ ಪ್ರಶ್ನಿಸಬಹುದಷ್ಟೇ ಎಂದಿರುವ ಅವರು ಹರ್ಯಾಣದ ಕಾಂಗ್ರೆಸ್ ಸರಕಾರ ಈ ತನಿಖೆ ನಡೆಸಿರುವುದು ಇಂತಹ ವ್ಯವಹಾರಗಳ ಹಿಂದಿರುವ ದೈತ್ಯಹಗರಣಗಳನ್ನು ಮುಚ್ಚಿ ಹಾಕಲು ತನ್ನ ವಿರುದ್ಧ ಕೈಗೊಳ್ಳಬಹುದಾದ ಕ್ರಮವನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ ಎಂದು ಅವರು ಹೇಳಿದ್ದಾರೆ.

ದೇಶದ ರಾಜಧಾನಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಸಾಮುದಾಯಿಕ ಅಥವ ಪಂಚಾಯತುಗಳಿಗೆ ಸೇರಿದ ಭೂಮಿಗಳನ್ನು ಖರೀದಿಸಲು 'ನೇತಾಗಳು ಮತ್ತು ಬಾಬುಗಳು' ಅಂದರೆ ಆಳುವ ರಾಜಕಾರಣಿಗಳು ಮತ್ತು ಉನ್ನತ ಅಧಿಕಾರಿಗಳು ಆಸ್ತಿ ಡೀಲರುಗಳ ಮೂಲಕ 'ಬೇನಾಮಿ' ವ್ಯವಹಾರಗಳನ್ನು ನಡೆಸುತ್ತಿದ್ದಾರೆ ಎಂದು ಖೆಮ್ಕ ಅವರು ತಾವು ಇಂತಹ



ವೇದರಾಜ ಎನ್.ಕೆ.

ಭೂಪರಿವರ್ತನೆ ರದ್ದು ಮಾಡಿ ನೀಡಿದ ಎರಡು ಆದೇಶಗಳು ಮತ್ತು ಒಂದು ಟಿಪ್ಪಣಿಯಲ್ಲಿ ಗಮನಿಸಿರುವುದಾಗಿ ವರದಿಯಾಗಿದೆ. "ಕೆಲವು ಹಿರಿಯ ಸಾರ್ವಜನಿಕ ಸೇವಕರು ತಮ್ಮ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ತಮಗೆ ಅಥವ ತಮ್ಮ ಸಂಬಂಧಿಕರಿಗೆ ಅಥವ ಇದಕ್ಕಾಗಿಯೇ ಸೃಷ್ಟಿಸಿದ ಕಂಪನಿಗಳಿಗೆ ಅನುಕೂಲಕರವಾದ ವಿನಿಮಯಗಳನ್ನು ನಡೆಸುವುದು ಕಂಡುಬಂದಿದೆ. ಗುರ್‍ಗಾಂವ್-ಫರೀದಬಾದ್ ಪ್ರದೇಶದ ಹಳ್ಳಿಗಳಲ್ಲಿ ಕ್ರೋಢೀಕರಣ ಸ್ಕೀಮುಗಳಿಂದ ಲಾಭ ಪಡೆಯಲು ಕಪ್ಪು ಹಣ ಮತ್ತು ಕೆಟ್ಟ ದಾರಿಗಳಿಂದ ಗಳಿಸಿದ ಹಣವನ್ನು ಅಪಾರ ಪ್ರಮಾಣದಲ್ಲಿ ಹೂಡಲಾಗುತ್ತಿದೆ" ಎಂದು ಅವರ ಟಿಪ್ಪಣಿ ಹೇಳುತ್ತದೆ.

ರಾಜ್ಯ ಸರಕಾರ ಹೊಸ ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ವೇಳೆಗೆ ಈ ಹಳ್ಳಿಗಳಲ್ಲಿ ಭೂಒಡೆತನ ಕೈಬದಲಾಯಿಸಿ ದೊಡ್ಡ ಕುಳಗಳ ಕೈಗಳಲ್ಲಿ ಭಾರೀ ಪ್ರಮಾಣದಲ್ಲಿ ಭೂಮಿ ಸೇರಿಕೊಂಡವು. ಕಂಪನಿಗಳ ಮೂಲಕ ಇದರಲ್ಲಿ ತೊಡಗಿಸಿದ ಅಪಾರ ಕಪ್ಪು ಹಣದ ಮೂಲಗಳ ಬಗ್ಗೆ, ಅದರ ನಿಜವಾದ ಮಾಲಕರು ಮತ್ತು ಹಿತಾಸಕ್ತಿಗಳ ಬಗ್ಗೆ ಸರಕಾರ ತನಿಖೆ ನಡೆಸಬೇಕು ಎಂದು ಅಶೋಕ್ ಖೆಮ್ಕ ಸಲಹೆ ನೀಡಿದ್ದರು.

ಆದರೆ ಹರ್ಯಾಣದ ಕಾಂಗ್ರೆಸ್ ಸರಕಾರ ಮಾಡಿದ್ದು ಇಂತಹ ಹಿರಿಯ ಅಧಿಕಾರಿಯ ವರ್ಗಾವಣೆ ಮತ್ತು ಅವರ ಆದೇಶದ ಬಗ್ಗೆಯೇ 'ಉನ್ನತ ಮಟ್ಟದ ತನಿಖೆ'!

ಸಾರ್ವಜನಿಕ ಆರೋಗ್ಯ ಸಿಬ್ಬಂದಿ ಪ್ರಮಾಣದಲ್ಲಿ 57ರಲ್ಲಿ 52 ಸ್ಥಾನ

ಯುಪಿಎ-2 ಆರೋಗ್ಯ ಮಂತ್ರಿಗಳು ಅವಕಾಶ ಸಿಕ್ಕಾಗಲೆಲ್ಲ ಸಾರ್ವಜನಿಕ ಆರೋಗ್ಯದ ಬಗ್ಗೆ ಸರಕಾರದ ಕಾಳಜಿಯ ಬಗ್ಗೆ ಮಾತಾಡುತ್ತಿರುತ್ತಾರೆ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರ(ಪಿಹೆಚ್‌ಸಿ)ಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಅದರ ನಿರ್ಲಕ್ಷ್ಯ ಮುಂದುವರೆದಿದೆ. ಒಂದು ವರದಿಗೆ ಸರಿಯಾಗಿ ಕಾರ್ಯನಿರ್ವಹಿಸಬೇಕಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಪ್ರತಿ 10,000 ಜನಸಂಖ್ಯೆಗೆ 23 ಆರೋಗ್ಯ ಕಾರ್ಯಕರ್ತರು ಇರಬೇಕು. ಭಾರತದಲ್ಲಿ ಈ ಸಂಖ್ಯೆ 19. ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಹೆಚ್‌ಒ) ಪ್ರಕಾರ ಈ ವಿಷಯದಲ್ಲಿ 57 ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ 52ರಲ್ಲಿದೆ.

2011 ಅಂಕಿ-ಅಂಶಗಳ ಪ್ರಕಾರ ಕೆಲವು ರಾಜ್ಯಗಳಲ್ಲಿ ಬುಡಮಟ್ಟದಲ್ಲಿ 71 ಶೇ.ದಷ್ಟು ವೈದ್ಯ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಅದೇ ರೀತಿ ದಾದಿಯರು ಮತ್ತು ಇತರ ಆರೋಗ್ಯ ಕಾರ್ಯಕರ್ತರ ಹುದ್ದೆಗಳೂ ಭರ್ತಿಯಾಗದೆ ಉಳಿದಿವೆ. ಹೀಗಿರುವಾಗ ದೇಶದಲ್ಲಿ ಸಾರ್ವತ್ರಿಕ ಆರೋಗ್ಯಪಾಲನೆ ಒಂದು ದೊಡ್ಡ ಸವಾಲಾಗೇ ಉಳಿದಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಜಗದಗಲ

ಶರತ್‌ಚಂದ್ರ

ತಾಲಿಬಾನಿಗೆ ಅಫ್ಘಾನಿಸ್ತಾನ ಹಸ್ತಾಂತರಕ್ಕೆ ಒಪ್ಪಂದ ?

ಈಗಲೇ ಅಲ್ಲ. ಆದರೆ ಐದು ವರ್ಷಗಳಲ್ಲಿ ತಾಲಿಬಾನಿಗೆ ಅಫ್ಘಾನಿಸ್ತಾನವನ್ನು ಹಸ್ತಾಂತರಿಸುವ ಒಪ್ಪಂದದ ನೀಲನಕ್ಷೆ ಬಗ್ಗೆ ಅಫ್ಘಾನಿಸ್ತಾನದ ಸರ್ಕಾರ ಮತ್ತು ತಾಲಿಬಾನ್ ನಡುವೆ ಸಹಮತ ಮೂಡಿದೆ ಎಂದು ವರದಿಯಾಗಿದೆ. ಅಮೆರಿಕ ಮತ್ತು ಯುರೋಪಿಯನ್ ದೇಶಗಳ ಸತತ ಪ್ರಯತ್ನದ ನಂತರ ಮೊದಲ ಬಾರಿಗೆ ಅಫ್ಘಾನಿಸ್ತಾನ್ ಸರ್ಕಾರ, ತಾಲಿಬಾನ್ ಮತ್ತು ಇತರ ವಿರೋಧಿ ಬಣಗಳ ಹಿರಿಯ ಪ್ರತಿನಿಧಿಗಳು ಭಾಗವಹಿಸಿದ ಸಭೆಯಲ್ಲಿ ಈ ಸಹಮತ ಮೂಡಿದೆ ಎನ್ನಲಾಗಿದೆ. ಈ ಸಭೆಯನ್ನು ಪ್ಯಾರೀಸಿನ ಬಳಿಯ ಶಾಂಟಿಲಿಯಲ್ಲಿ ಡಿಸೆಂಬರ್ 21-22ರಂದು ಫ್ರೆಂಚ್ ಥಿಂಕ್ ಟ್ಯಾಂಕೊಂದು ಸಂಘಟಿಸಿತ್ತು. ಈ ಸಭೆಯಲ್ಲಿ 20 ಪ್ರತಿನಿಧಿಗಳು ಭಾಗವಹಿಸಿದ್ದರು.

ಅಫ್ಘಾನಿಸ್ತಾನ್ ಸರ್ಕಾರ ಮತ್ತು ಇತರ ವಿರೋಧಿ ಬಣಗಳು ಯುದ್ಧ ನಿಲ್ಲಬೇಕು ಎಂಬ ತವಕ ವ್ಯಕ್ತಪಡಿಸಿದರು. ನಾವು ಯಾರೊಂದಿಗೂ ಮಾತುಕತೆ ಮಾಡಲು ಬಂದಿಲ್ಲ. ನಮ್ಮ ಉದ್ದೇಶಗಳನ್ನು ಜಾಗತಿಕ ಸಮುದಾಯಕ್ಕೆ ಸ್ಪಷ್ಟಪಡಿಸಲು ಬಂದಿದ್ದೇವೆ ಅಷ್ಟೇ ಎಂದು ತಾಲಿಬಾನ್ ಮಾತ್ರ ತನ್ನ ನಿಲುವಿಗೆ ಅಂಟಿಕೊಂಡಿತ್ತು. ಆದರೂ ಇದು "ಅಫ್ಘಾನಿಸ್ತಾನ್ ಸರ್ಕಾರ ಕಾನೂನುಬಾಹಿರ. ಆದ್ದರಿಂದ ಅವರಿದ್ದ ಯಾವ ಸಭೆಯಲ್ಲೂ ಭಾಗವಹಿಸುವುದಿಲ್ಲ" ಎಂಬ ಅವರ ಹಿಂದಿನ ನಿಲುವಿನ ಸಡಿಲಿಕೆ ಎಂಬ ಬಗ್ಗೆ ಯಾವುದೇ ಅನುಮಾನ ಇಲ್ಲ. ಹಾಗೆನೇ ಈ ರೀತಿಯ ಒಂದು ಸಭೆ ನಡೆಯಿತು ಎನ್ನುವುದೇ ಮಹತ್ವದ್ದು ಎಂಬುದೂ ನಿಜ.

ತಾಲಿಬಾನ್ ಸಭೆಯ ನಂತರ ನೀಡಿದ ಹೇಳಿಕೆಯಲ್ಲಿ 'ಆಕ್ರಮಣಕಾರರ ಬಿ-52 ಬಾಂಬರುಗಳ ನೆರಳಲ್ಲಿ ರಚಿತವಾದ' ಈಗಿನ ಸಂವಿಧಾನವನ್ನು ನಾವು ಮಾನ್ಯ ಮಾಡುವುದಿಲ್ಲ. 'ಪವಿತ್ರ ಇಸ್ಲಾಂ, ರಾಷ್ಟ್ರೀಯ ಹಿತಾಸಕ್ತಿಗಳು, ಹಿಂದಿನ ಸಾಧನೆಗಳು, ಸಾಮಾಜಿಕ ನ್ಯಾಯದ ಆಧಾರದಲ್ಲಿರುವ' ಹೊಸ ಸಂವಿಧಾನ ಬೇಕು ಎಂದೂ ಹೇಳಿಕೆ ತಿಳಿಸಿದೆ. ಇಲ್ಲಿ ಶರೀಯತ್ ಬದಲು 'ಪವಿತ್ರ ಇಸ್ಲಾಂ' ಮತ್ತು ಇತರ ಅಂಶಗಳ (ಅದರಲ್ಲೂ ಸಾಮಾಜಿಕ ನ್ಯಾಯ) ಪ್ರಸ್ತಾಪ ಗಮನಾರ್ಹ ಎಂದು ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಸಾರ್ವತ್ರಿಕ ಅಂಗೀಕಾರ ಪಡೆಯಲು ಮಹಿಳೆಯರು ಮತ್ತು ಅಲ್ಪಸಂಖ್ಯಾತ ಜನಾಂಗಗಳ ವಿರೋಧಿ ನೀತಿಯನ್ನು ಬಿಟ್ಟುಕೊಡುವ ಸೂಚನೆ ಎನ್ನಲಾಗಿದೆ.

ಈ ಸಭೆಯ ಕೆಲವು ವಾರಗಳ ಮೊದಲು 2015ರ ವರೆಗೆ ಜಾರಿ ಮಾಡಲಾಗುವ 'ಶಾಂತಿ ಪ್ರಕ್ರಿಯೆ ದಾರಿಯ ನೀಲನಕ್ಷೆ'ಯೊಂದನ್ನು ಅಫ್ಘಾನಿಸ್ತಾನ್ ಸರ್ಕಾರ ತಯಾರಿಸಿತ್ತು. ಅದಕ್ಕೆ ತಾಲಿಬಾನ್ ಮತ್ತು ಇತರ ವಿರೋಧಿ ಬಣಗಳ ಸಹಮತಿಯನ್ನು ಸಭೆಯಲ್ಲಿ ಸರ್ಕಾರ ಪಡೆದಿದೆ ಎನ್ನಲಾಗಿದೆ. ಈ ನೀಲನಕ್ಷೆಯ ಪ್ರಕಾರ ಹಂತ ಹಂತವಾಗಿ ಈ ಮುಂದಿನ ಕಾರ್ಯಸೂಚಿ ಜಾರಿ ಮಾಡಲಾಗುತ್ತದೆ – ಪಾಕಿಸ್ತಾನದಲ್ಲಿರುವವರನ್ನು ಸೇರಿದಂತೆ ಎಲ್ಲಾ ತಾಲಿಬಾನಿ ಬಂಧಿತರ ಬಿಡುಗಡೆ, ಸೌದಿ ಅರೇಬಿಯಾದಲ್ಲಿ ಪಾಕಿಸ್ತಾನದ ಮಧ್ಯಸ್ತಿಕೆಯಲ್ಲಿ ತಾಲಿಬಾನ್ ಮತ್ತು ಸರ್ಕಾರಗಳ ಮಾತುಕತೆಗಳು, ತಾಲಿಬಾನ್-ಸರ್ಕಾರಿ ಪಡೆಗಳ ನಡುವೆ ಪೂರ್ಣ ಕದನ ವಿರಾಮ, ತಾಲಿಬಾನ್ ಒಂದು ರಾಜಕೀಯ ಪಕ್ಷವಾಗಿ ಪರಿವರ್ತನೆ, ಎಲ್ಲಾ ಸಶಸ್ತ್ರ ಗುಂಪುಗಳ ಬರಖಾಸ್ತು ಮತ್ತು ಎಲ್ಲರಿಗೂ ಅಂಗೀಕಾರವಾಗುವ ರಾಜಕೀಯ ವ್ಯವಸ್ಥೆಯಲ್ಲಿ ಸುಭದ್ರ ಶಾಂತಿಯುತ ಅಫ್ಘಾನಿಸ್ತಾನ್ ಸ್ಥಾಪನೆ.



ಈ ನೀಲನಕ್ಷೆಯ ಅರ್ಥ ಏನು ? ಇದು ಜಾರಿಯಾಗಬಹುದೆ ? ಎಂಬ ಪ್ರಶ್ನೆಗಳು ಸ್ವಾಭಾವಿಕವಾಗಿ ಏಳುತ್ತವೆ. ಮುಖ್ಯವಾಗಿ ಈ ಎಲ್ಲಾ ಚಟುವಟಿಕೆಗಳ ಹಿಂದಿನ ತರಾತುರಿ ಅಫ್ಘಾನಿಸ್ತಾನ್ ಸರ್ಕಾರದ್ದೂ ಅಥವಾ ತಾಲಿಬಾನ್ ಮತ್ತು ಇತರ ವಿರೋಧಿ ಬಣಗಳದ್ದೂ ಅಲ್ಲ. ತರಾತುರಿ ಅಮೆರಿಕ ಮತ್ತು ನಾಟೋದ್ದು. ಇಲ್ಲದಿದ್ದರೆ 2014ರಲ್ಲಿ ಅಫ್ಘಾನಿಸ್ತಾನದಿಂದ ಅಮೆರಿಕ ಮತ್ತು ನಾಟೋ ಸೈನ್ಯವನ್ನು ಸ್ವಲ್ಪವಾದರೂ 'ಮರ್ಯಾದೆ' ಉಳಿಸಿಕೊಂಡು ಹಿಂತೆಗೆಯಲು ಒಂದು ನೆಪವಾದರೂ ಒದಗಿಸಿಕೊಡುತ್ತದೆ. ಅಫ್ಘಾನಿಸ್ತಾನ್ ಸರ್ಕಾರಕ್ಕೂ 2014ರ ನಂತರ ಪೂರ್ಣ ಅರಾಜಕತೆ ತಪ್ಪಿಸಬಹುದು ಎಂಬ ದೂರದ ಆಸೆ.

ಶಾಂಟಿಲ್ಲಿ ಸಹಮತ ಇನ್ನೂ ಹಲವು ಸಂಗತಿಗಳನ್ನು ನಮಗೆ ಹೇಳುತ್ತದೆ. ಮುಖ್ಯವಾಗಿ ತಾಲಿಬಾನನ್ನು ಪೂರ್ಣವಾಗಿ ಸೋಲಿಸಿ ನಾಶ ಮಾಡುವುದು ಅಸಾಧ್ಯ ಎಂದು ಅಮೆರಿಕ ಮತ್ತು ನಾಟೋಕ್ಕೆ ಅರ್ಥವಾಗಿದೆ. ತಾಲಿಬಾನನ್ನು ಪೂರ್ಣವಾಗಿ ನಾಶ ಮಾಡುವುದು ಅದರ ಉದ್ದೇಶವೂ ಅಲ್ಲ. ಅದರಲ್ಲೂ ಅಮೆರಿಕಕ್ಕೆ ವಿಶೇಷವಾಗಿ ತಾಲಿಬಾನ್ ವಿರುದ್ಧ ಯಾವುದೇ ತಕರಾರು ಇಲ್ಲ. ಎಷ್ಟೆಂದರೂ ತಾಲಿಬಾನ್ ಅಮೆರಿಕದ ಸಿಐಎಯ ಸೃಷ್ಟಿಯಾದ ಪಾಕಿಸ್ತಾನದ ಐಎಸ್‌ಐನ ಕೂಸು ತಾನೇ? ಅಮೆರಿಕ ಅಫ್ಘಾನಿಸ್ತಾನ್ ಆಕ್ರಮಣ ಮಾಡಿದ್ದು ಅಲ್-ಖೈದಾ (ಅದೂ 9/11 ನಂತರ) ನಾಶ ಮಾಡಲು. ತಾಲಿಬಾನ್ ಅಲ್-ಖೈದಾಕ್ಕೆ ಆಸರೆ ಕೊಟ್ಟಿದ್ದರಿಂದಷ್ಟೇ ಅದರ ವಿರೋಧ ಕಟ್ಟಿಕೊಂಡಿತು. ಇಲ್ಲದಿದ್ದರೆ ತಾಲಿಬಾನ್ ಈ ವರೆಗೂ ಆರಾಮಾಗಿ ಅಫ್ಘಾನಿಸ್ತಾನವನ್ನು ಆಳುತ್ತಿತ್ತು. ಮಹಿಳೆ ಮತ್ತು ಅಲ್ಪಸಂಖ್ಯಾತರ ವಿರುದ್ಧ ತಾಲಿಬಾನಿನ ಅತಿ ಕಠಿಣ ನೀತಿಯಿಂದಾಗಷ್ಟೇ ತೋರಿಕೆಗಾಗಿ ತಾಲಿಬಾನ್ ತನ್ನ ವಿರೋಧಿ ಎಂದು ಪೋಸು ಕೊಡುತ್ತಿತ್ತು. ತಾಲಿಬಾನ್ ಸ್ವಲ್ಪ ಸಮಯದಲ್ಲೇ ಸರ್ಕಾರದಲ್ಲಿ ಭಾಗಿಯಾಗುತ್ತದೆ ಎಂಬುದು ಈ ಸಹಮತದ ಭಾಗ.

ತಾಲಿಬಾನ್ ಅಫ್ಘಾನಿಸ್ತಾನದಲ್ಲಿ ಪುನಃ ಅಧಿಕಾರವನ್ನು ವಹಿಸಿಕೊಳ್ಳುವುದನ್ನು ಅಫ್ಘಾನಿಸ್ತಾನ ಮತ್ತು ಭಾರತೀಯ ಉಪಖಂಡದ ಶಾಂತಿ, ಬೆಳವಣಿಗೆ ಬಯಸುವ ಜನ ಯಾವ ರೀತಿ ನೋಡಬೇಕು ? ಅಫ್ಘಾನಿಸ್ತಾನದಲ್ಲಿ ಅಂತರ್ಯುದ್ಧ ನಿಂತು ರಾಜಕೀಯ ಪರಿಹಾರದೊಂದಿಗೆ ಶಾಂತಿ ನೆಲೆಸಬೇಕು ಎಂಬುದು ಸರ್ವೇ ಸಾಮಾನ್ಯ ಆಶಯ. ರಾಜಕೀಯ ಮಾತುಕತೆಗಳು ನಡೆಯಬೇಕು ಎಂಬುದು ಸಹ ಅಷ್ಟೇ ಸಹಜ ಆಶಯ. ರಾಜಕೀಯ ಮಾತುಕತೆಗಳಿಗೆ ಅಫ್ಘಾನಿಸ್ತಾನದ ಈಗಿನ ಸಂವಿಧಾನವನ್ನು ಒಪ್ಪಿಕೊಳ್ಳುವುದು, ಹಿಂಸೆಯನ್ನು ತ್ಯಜಿಸುವುದು ಮತ್ತು ಅಲ್-ಖೈದಾ ಜತೆಗೆ ಸಂಬಂಧ ಕಡಿದು ಕೊಳ್ಳುವುದು ಪೂರ್ವ-ಶರತ್ತು ಆಗಿರಬೇಕು ಎಂಬುದೂ ಇದರ ಭಾಗವಾಗಿತ್ತು. ಆದರೆ ಈಗ ಒಪ್ಪಿಕೊಳ್ಳಲಾಗಿರುವ ಪ್ರಕಾರ ಇವು 'ಶಾಂತಿ ಪ್ರಕ್ರಿಯೆ'ಯ ಪರಿಣಾಮವಾಗಿ ಆಗಬಹುದಾಗಿದೆ ಅಷ್ಟೇ. ಅದಕ್ಕೆ ಯಾವುದೇ ಗ್ಯಾರಂಟಿ ಇಲ್ಲ. ಅದೂ ತಾಲಿಬಾನ್ ರಾಜಕಿಯ ಪಕ್ಷವಾಗಿ ಸಂವಿಧಾನ ಒಪ್ಪಿಕೊಂಡು ಪ್ರಜಾಸತ್ತಾತ್ಮಕವಾ ನಡಕೊಳ್ಳುತ್ತದೆ ಎಂಬ ಬಗ್ಗೆ ಯಾವುದೇ ಖಾತ್ರಿ ಇಲ್ಲ. ಅದನ್ನು ನಿರೀಕ್ಷಿಸುವುದು ಹುಲಿ ತನ್ನ ಪಟ್ಟೆಯನ್ನು ಬದಲಿಸುತ್ತದೆ ಎಂಬಷ್ಟೇ ಅಸಹಜ.

ಈಗಲೇ ಅದಕ್ಕೆ ಭಾಗಶಃ ಅಧಿಕಾರ ಸಿಕ್ಕಿದರೂ ಅದು ಪೂರ್ಣ ಅಧಿಕಾರ ಕಬಳಿಸುವುದರಲ್ಲಿ ಸಂಶಯ ಇಲ್ಲ. ಯಾಕೆಂದರೆ ಈಗ ಅಫ್ಘಾನಿಸ್ತಾನದಲ್ಲಿ ಸೈದ್ಧಾಂತಿಕ, ರಾಜಕೀಯ, ಮಿಲಿಟರಿ ದೃಷ್ಟಿಯಿಂದ ಸುಸಂಘಟಿತವಾಗಿರುವ ಏಕೈಕ ಶಕ್ತಿ ತಾಲಿಬಾನ್. ಉಳಿದ ಶಕ್ತಿಗಳನ್ನು ಈಗಾಗಲೇ ಅಮೆರಿಕ ಮತ್ತು ಪಾಕಿಸ್ತಾನ ದುರ್ಬಲಗೊಳಿಸಿವೆ ಅಥವಾ ನಾಶ ಮಾಡಿವೆ. ಆದ್ದರಿಂದ ಸುಲಭವಾಗಿ ಅದು ಇತರ ಶಕ್ತಿಗಳನ್ನು ಸೋಲಿಸಿ ಪೂರ್ಣ ಅಧಿಕಾರ ಕಬಳಿಸಬಲ್ಲದು. ಶಾಂಟಿಲ್ಲಿ ಸಹಮತ ಕೊನೆಗೂ ತಾಲಿಬಾ ಹಲವು ವರ್ಷಗಳ ಕಾಲ ಗೆರಿಲ್ಲಾ ಹೋರಾಟದಲ್ಲಿ ಮಿಲಿಟರಿಯಾಗಿ ಸಾಧಿಸದ ಅಧಿಪತ್ಯವನ್ನು ಮಾತುಕತೆ ಟೇಬಲ್ಲಿನಲ್ಲಿ ಪಡೆಯುವುದರಲ್ಲಿ ಸಫಲವಾಗಬಹುದು ಎಂಬಂತೆ ಕಾಣುತ್ತಿದೆ. ಇದು ಅಫ್ಘಾನಿಸ್ತಾನಕ್ಕೆ ಮಾತ್ರವಲ್ಲ ಇಡೀ ಭಾರತೀಯ ಉಪಖಂಡಕ್ಕೆ ನಕಾರಾತ್ಮಕ ಬೆಳವಣಿಗೆ ಎನ್ನದಿರಲು ಸಾಧ್ಯವಿಲ್ಲ. ಹಿಂದೆ ವಿಶ್ವಸಂಸ್ಥೆಯ ಅಧೀನ ಮಹಾಕಾರ್ಯದರ್ಶಿ ಮತ್ತು ಪಶ್ಚಿಮ ಏಶ್ಯಾದಲ್ಲಿ ಭಾರತದ ವಿಶೇಷ ಪ್ರತಿನಿಧಿಯಾಗಿದ್ದ ಚಿನ್ಮಯ ಘರೇಖಾನ್ ಅವರು ಈ ಒಪ್ಪಂದವನ್ನು 'ಹಿಂದಕ್ಕೆ ಸಾಗಲು ಮುನ್ನಡೆ' ಎಂದು ಲೇಖನವೊಂದರಲ್ಲಿ ಕರೆದಿರುವುದು ಅಕ್ಷರಶಃ ನಿಜ.

ಕಡಲತಡಿ

ಪುಟ 6 ರಿಂದ

ಬೆಳ್ತಂಗಡಿಯಲ್ಲಿ ಸಿಪಿಐ(ಎಂ) ಪ್ರತಿಭಟನೆ: ಉಡುಪಿಯ ಲಾಠಿ ಚಾರ್ಜು ಘಟನೆಯನ್ನು ಖಂಡಿಸಿ ಡಿಸೆಂಬರ್ 29ರಂದು ಬೆಳ್ತಂಗಡಿ ಸಿಪಿಐ(ಎಂ) ತಾಲೂಕು ಸಮಿತಿಯ ವತಿಯಿಂದ ಬೆಳ್ತಂಗಡಿ ತಾಲೂಕು ಕಚೇರಿಯ ಎದುರು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪ್ರತಿಭಟನಕಾರರು ನಗರದ ಮುಖ್ಯರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ, ತಾಲೂಕು ಕಚೇರಿ ಎದುರು ಧರಣಿ ನಡೆಸಿದರು.

ಪ್ರತಿಭಟನಕಾರರನ್ನುದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಎಂ. ಭಟ್ ಮಾತನಾಡಿದರು. ಉಡುಪಿ ಘಟನೆಯಲ್ಲಿ ಲಾಠಿ ಚಾರ್ಜ್‌ನಿಂದ ಗಾಯಗೊಂಡಿದ್ದ ಈಶ್ವರಿ ಮತ್ತು ಪ್ರಶಾಂತ್ ಅವರೂ ಕೂಡಾ ಮಾತನಾಡಿದರು. ಪಕ್ಷದ ತಾಲೂಕು ಕಾರ್ಯದರ್ಶಿ ಎಸ್.ಎಂ. ಶಿವಕುಮಾರ್, ಸದಸ್ಯರಾದ ಜಯರಾಮ [illegible] ಸುಕನ್ಯಾ, ಶೇಖರ ಎಲ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಾಲ್‌ಮಾರ್ಟ್‌ಗೆ ಮೊದಲ ಎಚ್ಚರಿಕೆ ಚನ್ನೈನ ಕಛೇರಿಗೆ ಎಡಪಕ್ಷಗಳಿಂದ ಬೀಗ

ತಮಿಳುನಾಡಿನ ಚನ್ನೈನಲ್ಲಿ ಪ್ರಾರಂಬಿಸಲು ಹೊರಟಿರುವ ವಾಲ್‌ಮಾರ್ಟ್ ಕಛೇರಿಗೆ ಬೀಗ ಹಾಕಲು ಹೋಗಿದ್ದ ಸಿಪಿಐಎಂ ಮತ್ತು ಎಡಪಕ್ಷಗಳ 2000 ಕ್ಕೂ ಹೆಚ್ಚು ಕಾರ್ಯಕರ್ತರು ಮತ್ತು ಹಿತೈಶಿಗಳನ್ನು ಡಿಸೆಂಬರ್ 26 ರಂದು ಪೋಲೀಸರು ಬಂದಿಸಿದ್ದಾರೆ ಇದರಲ್ಲಿ ಸಿಪಿಐಎಂನ ತಮಿಳುನಾಡು ರಾಜ್ಯ ಕಾರ್ಯದರ್ಶಿ ಜಿ.ರಾಮಕೃಷ್ಣನ್ ಸಹ ಭಾಗಿಯಾಗಿದ್ದರು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಿ.ರಾಮಕೃಷ್ನನ್ ವಾಲ್‌ಮಾರ್ಟ್ ಚನ್ನೈನ ಹೊರವಲಯ ಪಲ್ಲಿಕುಪಂನಲ್ಲಿ ಒಂದು ಲಕ್ಷ ಚದುರಡಿ ವಿಸ್ತೀರ್ಣದ ಬೃಹತ್ ವಾಣಿಜ್ಯ ಸಂಕಿರ್ಣವನ್ನು ಪ್ರಾರಂಬಿಸಲು ಹೊರಟಿದೆ, ಇದಕ್ಕೆ ಪ್ರಧಾನಿ ಮನಮೋಹನ್‌ಸಿಂಗ್ ನೇತೃತ್ವದ ಕೇಂದ್ರ ಸಚಿವ ಸಂಪುಟ ಇತ್ತೀಚೆಗೆ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಹೂಡಿಕೆಮಾಡಲು ಅವಕಾಶ ಕಲ್ಪಿಸಿದೆ. ಇದನ್ನು ದೇಶಾದ್ಯಂತ ಎಡಪಕ್ಷಗಳು ತೀವ್ರವಾಗಿ ವಿರೋಧಿಸುತ್ತಿವೆ. ತಮಿಳುನಾಡಿನಲ್ಲಿ ವಾಲ್‌ಮಾರ್ಟ್ ಸ್ಥಾಪನೆಯಾಗದಂತೆ ರಾಜ್ಯ ಸರ್ಕಾರ ಕೂಡಲೇ ಕ್ರಮಕೈಕೊಳ್ಳಬೇಕು ಮತ್ತು ಈಗಾಗಲೇ ಸ್ಥಾಪಿಸಿರುವ ಅದರ ಕಛೇರಿಯನ್ನ ಮುಚ್ಚಬೇಕೆಂದು ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ ರೈತರು, ಕೂಲಿಕಾರರು, ವಿದ್ಯಾರ್ಥಿ, ಯುವಜನರು ಸೇರಿದಂತೆ ಸಿಪಿಐಎಂನ ಶಾಸಕರುಗಳಾದ ಎ.ಸೌಂದರರಾಜನ್ ಮತ್ತು ಕೆ.ಬಾಲಕೃಷ್ಣನ್ ಮತ್ತು ಸಿಪಿಐನ ರಾಜ್ಯ ಕಾರ್ಯದರ್ಶಿ ಡಿ.ಪಾಂಡಿಯನ್ ರವರು ಭಾಗವಹಿಸಿದ್ದರು.



ಈ ಹೋರಾಟಕ್ಕೆ ಪೂರ್ವಭಾವಿಯಾಗಿ ತಿರುನಲ್‌ವೇಲಿ, ತೂತುಕುಡಿ, ಚನ್ನೈ ಸೇರಿದಂತೆ ರಾಜ್ಯದಾದ್ಯಂತ ವ್ಯಾಪಕ ಪ್ರಚಾರಾಂದೋಲನವನ್ನು ನಡೆಸಲಾಗಿತ್ತು. ಡಿಸೆಂಬರ್ 11 ರಂದು ಮದುರೈನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ವಿವಿಧ ವಾಣಿಜ್ಯ ಸಂಘಟನೆಗಳ ಪ್ರತಿನಿಧಿಗಳ ಜೊತೆ ಸಿಪಿಐಎಂನ ಪೊಲಿಟ್‌ಬ್ಯೂರೋ ಸದಸ್ಯರಾದ ಬೃಂದಾಕಾರಟ್ ಭಾಗವಹಿಸಿ ಮಾತನಾಡುತ್ತಾ ಸಂಸತ್ತಿನಲ್ಲಿ ಚಿಲ್ಲರೇ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಚರ್ಚೆಯಿಂದ ಡಿಎಂಕೆ ವಿಮುಖವಾಗಿದೆ ಎಂದರು. ಮುಂದುವರೆದು ಬಾರತದಲ್ಲಿ ತನ್ನ ವ್ಯಾಪಾರವನ್ನು ಪ್ರಾರಂಬಿಸಲು ಲಾಬಿಗಾಗಿ ವಾಲ್‌ಮಾರ್ಟ್ 125 ಕೋಟಿ ರೂ ಖರ್ಚುಮಾಡಿದ್ದೇವೆ ಎಂದು ಘೋಶಿಸಿದೆ. ಆದರೆ ಸಂಸತ್ತಿನಲ್ಲಿ ಈ ವಿಚಾರದ ಕುರಿತು ಚರ್ಚೆನಡೆಯುತ್ತಿರುವಾಗ ಡಿಎಂಕೆಯ ಸಂಸದರಾರ ಟಿ.ಕೆ.ಎಸ್.ಇಳಂಗೋವನ್ ಚರ್ಚೆಯಲ್ಲಿ ಭಾಗವಹಿಸಿ 'ನಾವು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ವಿರೋಧಿಸುತ್ತೇವೆ', ಎಂದರು ಆದರೆ ಅವರು ಅಂತಿಮವಾಗಿ ನಾವು ನಿಮ್ಮ ನೀತಿಯನ್ನು (ಕಾಂಗ್ರೇಸ್) ವಿರೋಧಿಸುತ್ತೇವೆ. ಆದರೆ 'ನಾವು ನಿಮ್ಮ ಸ್ನೇಹಿತರು' ಎಂದು ಹೇಳುವ ಮೂಲಕ ತಮ್ಮ ದ್ವಿಮುಖ ನೀತಿಯನ್ನು ಪ್ರದರ್ಶಿಸಿದರು.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರಬಂಡವಾಳ ಹೂಡಿಕೆ ಕುರಿತು ಸಂಸತ್ತಿನಲ್ಲಿ ಮತದಾನ ಮುಗಿದ ಕೂಡಲೇ ಈ ಹೋರಾಟ ನಿಲ್ಲುವುದಿಲ್ಲ ದೇಶದಲ್ಲಿ ಬೃಹತ್ ಚಿಲ್ಲರೆ ವ್ಯಾಪಾರದ ಮಳಿಗೆಗಳನ್ನು ಪ್ರಾರಂಬಿಸಲು ಅನುಮತಿ ನೀಡಿರುವ 53 ನಗರಗಳಲ್ಲೂ ಪ್ರತಿಭಟನೆಗಳು ಮುಂದುವರೆಯುತ್ತವೆ. ಕೇಂದ್ರ ಸರ್ಕಾರವು ಆರ್ಥಿಕ ಸುದಾರಣೆಯ ಹೆಸರಿನಲ್ಲಿ ಜನಸಾಮಾನ್ಯರ ಹಿತವನ್ನು ಬಲಿಕೊಡಲು ಸಿಪಿಐಎಂ ಎಂದಿಗೂ ಅವಕಾಶ ಕೊಡುವುದಿಲ್ಲ ಎಂದು ಹೇಳಿದರು.

ಚಿಲ್ಲರೇ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ವಿರೋಧಿಸಿ ದೇಶಾದ್ಯಂತ ಕರೆ ನೀಡಿರುವ ಸಹಿಸಂಗ್ರಹ ಚಲುವಳಿಯನ್ನು ಡಿಸೆಂಬರ್ 19 ರಂದು ಚನ್ನೈನಲ್ಲಿ ಸಿಪಿಐಎಂನ ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್ ಉದ್ಘಾಟಿಸಿ ದೇಶದಲ್ಲಿ ಯಾವುದೇ ಕಾರಣಕ್ಕೂ ವಾಲ್‌ಮಾರ್ಟ್‌ನಂತಹ ಒಂದೇ ಒಂದು ಅಂಗಡಿಯನ್ನು ದೇಶದಲ್ಲಿ ತೆರೆಯಲು ಬಿಡುವುದಿಲ್ಲ ಎಂದರು.

– ಹೆಚ್.ಆರ್.ನವೀನ್‌ಕುಮಾರ್

ಬಿ.ಜೆ.ಪಿ.–ಕೆ.ಜೆ.ಪಿ.ನಡುವಿನ ಕದನ....

ಪುಟ 5 ರಿಂದ

ರಾಜ್ಯ ಬಿಜೆಪಿಯನ್ನು ಸರ್ವನಾಶ ಮಾಡಲು ಪಣತೊಟ್ಟಿರುವ ಯಡಿಯೂರಪ್ಪ ಅಪ್ಪಿತಪ್ಪಿಯೂ ಕಾಂಗ್ರೆಸ್ ಪಕ್ಷದ ಮೇಲೆ ವಾಗ್ದಾಳಿ ಮಾಡುವುದನ್ನು ಕೈಬಿಟಿರುವುದು ಆಕಸ್ಮಿಕವಾಗಿರಲು ಸಾಧ್ಯವಿಲ್ಲ. ಸಿಬಿಐ ಕುಣಿಕೆಯಿಂದ ಪಾರಾಗಲು ಕಾಂಗ್ರೆಸ್‌ಗೆ ಹತ್ತಿರವಾಗುವುದೇ ಸರಿಯಾದ ಮಾರ್ಗ ಎಂಬ ನಿರ್ಧಾರಕ್ಕೆ ಬಂದಿರುವ ಯಡಿಯೂರಪ್ಪ ತನ್ನ ಕಛೇರಿಯಲ್ಲಿ ಮೊದಲಿಗೆ ಸೋನಿಯಾಗಾಂಧಿ ಪೋಟೋ ಹಾಕಿಸಿ ನಂತರ ಸಿಕ್ಕ ಸಿಕ್ಕಲ್ಲಿ ಸೋನಿಯಾರನ್ನು ಹೊಗಳ ತೊಡಗಿದರು. ಯಡಿಯೂರಪ್ಪನವರ ನಡಿಗೆಯನ್ನು ಗಮನಿಸಿದ ರಾಜ್ಯ ಕಾಂಗ್ರೆಸಿಗರು ಎಚ್ಚರಗೊಂಡು, ಯಡಿಯೂರಪ್ಪಗೆ ಸ್ನೇಹದ 'ಕೈ' ಚಾಚಿದರು. 'ನೀವು ಬಿಜೆಪಿಯಿಂದ ಹೊರಬಂದು ನಿಮ್ಮ ಸ್ವತಂತ್ರ ಪಕ್ಷವನ್ನು ಕಟ್ಟುವುದಾದರೆ ನಾವು ನಿಮ್ಮೊಂದಿಗೆ ಇರುತ್ತೇವೆ' ಎಂಬ ಭರವಸೆ ನೀಡಿದ್ದಾರೆ ಮಾತ್ರವಲ್ಲ ಮುಂಬರುವ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಪಡೆದರೆ ಕಾಂಗ್ರೆಸ್ – ಕೆಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಯಡಿಯೂರಪ್ಪಗೇ ಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ಆಶ್ವಾಸನೆಯನ್ನೂ ನೀಡಿದ್ದಾರೆ ಎನ್ನಲಾಗುತ್ತಿದೆ.

ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಹೈಕಮಾಂಡ್ ತರಾತುರಿಯಲ್ಲಿ ಕೇಂದ್ರ ವಿದೇಶಾಂಗ ಸಚಿವರಾಗಿದ್ದ ಎಸ್.ಎಂ. ಕೃಷ್ಣರನ್ನು ರಾಜ್ಯಕ್ಕೆ ವಾಪಸ್ ಕಳುಹಿಸಿದೆ. ಹಾಲಿ ಮುಖಂಡರಾದ ಸಿದ್ಧರಾಮಯ್ಯ ಮತ್ತು ಪರಮೇಶ್ವರ್ ಯಡಿಯೂರಪ್ಪ ಜೊತೆ ಕೈಜೋಡಿಸಲು ಅಷ್ಟು ಮುಂದೆ ಬರಲಾರರು. ಹೀಗಾದರೆ ಕೆಜೆಪಿ ಜೊತೆ ಅಧಿಕಾರ ಹಂಚಿಕೊಳ್ಳುವುದು ಕಷ್ಟವಾದೀತು. ಹೇಳಿ ಕೇಳಿ ಕೃಷ್ಣ ಬಹು ಚಾಣಾಕ್ಷ. ಎಲ್ಲಾ ಪಕ್ಷಗಳೊಂದಿಗೂ ಸಂಪರ್ಕ ಇರುವವರು. ಯಡಿಯೂರಪ್ಪ ಜತೆ ಒಪ್ಪಂದ ಮಡಿಕೊಳ್ಳಲು ಅವಕಾಶ ಒದಗಿಬಂದರೆ ಅದಕ್ಕೆ ಎಸ್.ಎಂ. ಕೃಷ್ಣ ಅವರೇ ಸೂಕ್ತ ವ್ಯಕ್ತಿ ಎಂದು 'ಕೈ' ಹೈಕಮಾಂಡ್ ನಿರ್ಧರಿಸಿದಂತೆ ಕಾಣುತ್ತದೆ. ಕೃಷ್ಣ ಕರ್ನಾಟಕಕ್ಕೆ ವಾಪಸ್ ಬರುವುದರಲ್ಲಿ ಯಡಿಯೂರಪ್ಪನವರ ಪಾತ್ರವೂ ಇದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ವಿದೇಶ ಸುತ್ತಿ ಸುಸ್ತಾಗಿ ಬಂದಿರುವ ಎಸ್.ಎಂ. ಕೃಷ್ಣ ಸದಾಶಿವನಗರದ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಾ ಕುಳಿತ್ತಿದ್ದಾರೆ ಎಂಬುದು ಸತ್ಯವಲ್ಲ. ನನಗೆ ಯಾವುದೇ ಸ್ಥಾನಮಾನ ಬೇಡ ಎನ್ನುತ್ತಿದ್ದ ಎಸ್.ಎಂ. ಕೃಷ್ಣ ಈಗ ತನ್ನ ಪರಮಾಪ್ತ ಡಿ.ಕೆ. ಶಿವಕುಮಾರ್ ಮೂಲಕ ತಂತ್ರ–ಪ್ರತಿತಂತ್ರಗಳನ್ನು ಹೂಡುತ್ತಿದ್ದಾರೆ. ಶಾಸಕರ ಹಾಗೂ ಕಾಂಗ್ರೈ ಮುಖಂಡರ ಸಭೆಗಳನ್ನು ಏರ್ಪಡಿಸಿ ಕೃಷ್ಣ ಅವರಿಗೆ ನಾಯಕತ್ವ ಕೊಡಿಸುವ ತಂತ್ರಗಾರಿಕೆ ತೀವ್ರಗೊಂಡಿದೆ. ಬಿಜೆಪಿ ಸರ್ಕಾರ ಬಿದ್ದು ಹೋಗುವುದರೊಳಗಾಗಿ ಕೃಷ್ಣ ಅವರಿಗೆ ನಾಯಕತ್ವ ಕೊಡಿಸಲು ಒತ್ತಡ ಹೇರಲಾಗುತ್ತಿದೆ. ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯ ಹೊಂದಿರುವ ಅಭ್ಯರ್ಥಿಗಳನ್ನು ಸೆಳೆಯುವ ಪ್ರತಿಕ್ರಿಯೆ ಆರಂಭವಾಗಿದೆ. ಬಿಜೆಪಿಯ ಹತ್ತಾರು ಸಚಿವರು ಮತ್ತು ಶಾಸಕರು ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ.

ಆದರೆ, ಅಧಿಕಾರದ ಕನಸು ಕಾಣುತ್ತಿರುವ 'ಕೈ' ಪಕ್ಷದಲ್ಲಿ ತೆರೆಮರೆಯಲ್ಲೇ ಕೃಷ್ಣ ಕಲಹ ಆರಂಭವಾಗಿದೆ. ಇತ್ತೀಚಿನವರೆಗೂ ಕೆಪಿಸಿಸಿ ಅಧ್ಯಕ್ಷ ಡಾ. ಜಿ. ಪರಮೇಶ್ವರ್ ತಾವು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಶಿಷ್ಯ ಎಂದೇ ಹೇಳಿಕೊಳ್ಳುತ್ತಿದ್ದರು. ಕೃಷ್ಣ ಅವರೇ ತಮ್ಮ ನಾಯಕರೆಂದು ಹೇಳುತ್ತಿದ್ದರು. ಆದರೆ ಪರಮೇಶ್ವರ್ ಈಗ ಬದಲಾಗಿದ್ದಾರೆ. ಕೃಷ್ಣರವರ ನಡೆ ಪರಮೇಶ್ವರ್ ಅವರನ್ನು ಬದಲು ಮಾಡಿದೆ. ತಾನೇ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎನ್ನುತ್ತಿದ್ದಾರೆ. ಈ ನಡುವೆ ಮಲ್ಲಿಕಾರ್ಜುನ ಖರ್ಗೆ ಅವರು ಸಹ ರಾಜ್ಯ ರಾಜಕಾರಣಕ್ಕೆ ಹಿಂತಿರುಗಲು ಉತ್ಸುಕರಾಗಿದ್ದಾರೆ ಎನ್ನಲಾಗುತ್ತಿದೆ. ಕೆಪಿಸಿಸಿಯ ನಾಯಕತ್ವವನ್ನು ಲಿಂಗಾಯಿತರಿಗೆ ನೀಡಬೇಕೆನ್ನುವ ಶ್ಯಾಮನೂರು ಶಿವಶಂಕರಪ್ಪ ಅವರ ಒತ್ತಾಯ ಮುಂದುವರೆದಿದೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ 'ಕೈ' ಪಕ್ಷದಲ್ಲಿ ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಕಾಲೆಳೆಯುವ ಪ್ರಕ್ರಿಯೆ ತೀವ್ರಗೊಳ್ಳುವ ಎಲ್ಲಾ ಲಕ್ಷಣಗಳು ಕಾಣಿಸುತ್ತಿವೆ. ಆದರೆ ಪಕ್ಷದೊಳಗೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ, ತಾವೆಲ್ಲರೂ ಒಗ್ಗಾಟ್ಟಾಗಿದ್ದೇವೆ ಎಂಬ ಸಂದೇಶ ನೀಡಲು ಎಲ್ಲಾ ನಾಯಕರು ಒಟ್ಟಾಗಿ ರಾಜ್ಯದ ಪ್ರವಾಸವನ್ನು ಕೈಗೊಂಡಿದ್ದಾರೆ. ಆದರೆ ಕೇಂದ್ರ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಅವಾಂತರಗಳು ರಾಜ್ಯದಲ್ಲಿ ಕಾಂಗ್ರೆಸ್ ನಿರೀಕ್ಷೆಯ ಮೇಲೆ ಪರಿಣಾಮ ಬೀರದೆ ಇರಲಾರವು. ಮುಖ್ಯವಾಗಿ ವಿಶ್ವ ಬಂಡವಾಳದ ಒತ್ತಡಕ್ಕೆ ಮಣಿದು ಡಾ. ಮನಮೋಹನ್ ಸಿಂಗ್ ಸರ್ಕಾರ ಚಿಲ್ಲರೆ ವ್ಯಾಪಾರದಲ್ಲಿ ವಾಲ್ ಮಾರ್ಟ್ ಅಂತಹ ದೈತ್ಯ ಕಂಪೆನಿಗಳಿಗೆ ಪ್ರವೇಶ ನೀಡಲು ಮುಂದಾಗಿರುವುದು, ರೇಷನ್ ಕಾರ್ಡುದಾರರಿಗೆ ರೇಷನ್ ನೀಡುವ ಬದಲು ನಗದು ವರ್ಗಾವಣೆಗೆ ಮುಂದಾಗಿರುವುದು ಮುಂತಾದ ಕ್ರಮಗಳು ರಾಜ್ಯದಲ್ಲಿ ಕಾಂಗ್ರೆಸಿಗೆ ಮುಳುವಾಗದೆ ಇರಲಾರವು.

ಆದರೆ ತಕ್ಷಣದಲ್ಲಿ ತಮ್ಮ ಖಾತೆಗಳಿಗೆ ಹಣ ಜಮಾ ಆಗುವುದು ಜನಾಕರ್ಷಣೆಯ ವಿಷಯವಾಗಲಿದ್ದು ಕಾಂಗ್ರೆಸಿಗೆ ಲಾಭವಾಗಬಹುದು. ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನ ತಿದ್ದುಪಡಿಯನ್ನು ಕಾಂಗ್ರೆಸ್ ತನ್ನ ಚುನಾವಣಾ ಲಾಭಕ್ಕೆ ಬಳಸಿಕೊಳ್ಳಲಿದೆ. ಖಾಸಗಿ ರಂಗದಲ್ಲಿ ದಲಿತರಿಗೆ ಮೀಸಲಾತಿ ನೀಡಬೇಕು ಕೇಂದ್ರದಲ್ಲಿ ಮಂತ್ರಿಯಾಗಿರುವ ಖರ್ಗೆಯವರೇ ಒತ್ತಾಯಿಸುತ್ತಿರುವುದು ಕಾಂಗ್ರೆಸ್‌ನಿಂದ ದೂರಸರಿಯುತ್ತಿರುವ ದಲಿತರನ್ನು ಆಕರ್ಷಿಸುವಲ್ಲಿ ಫಲಕಾರಿಯಾಗಬಹುದು.

JANASHAKTHI KANNADA VARA PATRIKE NOV 25, 2012 Price : Rs. 5/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO



ಜಿ.ಎನ್.ನಾಗರಾಜ್ 19

ಮಾವ್ರೋರವರಿಂದ ಹುನಾನ್ ನಲ್ಲಿ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯ ಪ್ರಯತ್ನಗಳು

ಲಿ ದಝಾವ್ರೋ. ಚೆನ್ ದುಷಿಯು ಎಂಬ ಚೀನಾದಲ್ಲಿ ಮಾರ್ಕ್ಸ್ ವಾದದ ಹರಿಕಾರರೊಡನೆ ನಿರಂತರ ಸಂಪರ್ಕದಲ್ಲಿದ್ದ ಮಾವ್ರೋರವರು ಹುನಾನ್ ನಲ್ಲಿ ಮಾರ್ಕ್ಸ್ ವಾದವನ್ನು ಹರಡಲು ಆಸ್ಥೆ ವಹಿಸಿದರು.ಮೊತ್ತಮೊದಲು ತಮ್ಮ ಗ್ರಾಮ ಶಾವ್ರೋ ಶಾನ್ ಗೆ ತೆರಳಿದರು. ಅಲ್ಲಿ ಹುನಾನ್ ನಲ್ಲಿ ತಾವೇ ಶಿಕ್ಷಣಕ್ಕೆ ಸೇರಿಸಿದ್ದ ,ಅಣ್ಣನ ಜೊತೆ ವಿವಿಧ ಚಳುವಳಿಗಳಲ್ಲಿ ಭಾಗವಹಿಸಿದ್ದ ತಮ್ಮ ಇಬ್ಬರು ತಮ್ಮಂದಿರು ಹಾಗು ಒಬ್ಬ ದತ್ತು ಸೋದರಿಯರನ್ನೂ ಒಳಗೊಂಡಂತೆ ಒಂದು ಕಮ್ಯುನಿಸ್ಟ್ ಗುಂಪನ್ನು ರಚಿಸಿದರು. ಅಲ್ಲಿ ಅವರ ಮನೆಯಲ್ಲಿ ಒಂದು ಕೊಠಡಿಯಲ್ಲಿ ಇಂದಿಗೂ ಹುನಾನ್ ರಾಜ್ಯದ ಮೊದಲ ಶಾಖೆಯ ಸಭೆ ನಡೆದ ಸ್ಮಾರಕ ಫಲಕ ತೂಗುತ್ತಿದೆ. ಶಾವ್ರೋ ಶಾನ್ ನ ವಸ್ತು ಸಂಗ್ರಹಾಲಯದಲ್ಲಿ ಈ ಶಾಖೆಯ ಬಗ್ಗೆ ಹಾಗೂ ಅವರ ಕುಟುಂಬದ ಆರು ಜನ ಕ್ರಾಂತಿಕಾರೀ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಬಗ್ಗೆ ವಿವರಗಳನ್ನು ನೋಡಬಹುದು.ಮಾವ್ರೋರವರ ಬಂಧುಗಳು ಕ್ರಾಂತಿಯ ನಂತರ ಯಾವುದೇ ಅಧಿಕಾರದ ಪದವಿಗಳನ್ನು ಪಡೆದ ಬಗ್ಗೆ ಒಬ್ಬರೂ ಬೊಟ್ಟು ಮಾಡಿ ತೋರಿಸುವಂತಿಲ್ಲ. ಅದೇ ಸಮಯದಲ್ಲಿ ಅವರ ಕುಟುಂಬದವರು ಕ್ರಾಂತಿಗಾಗಿ ಮಾಡಿದ ತ್ಯಾಗ ,ಬಲಿದಾನಗಳು ನಿಸ್ಸೀಮವಾದವು.

ಮಾವ್ರೋ ಹುನಾನ್ ನಲ್ಲಿ ನಡೆದ ಎಲ್ಲ ಕ್ರಾಂತಿಕಾರಿ ಹೋರಾಟಗಳಲ್ಲಿ ಮುಖ್ಯ ಪಾತ್ರ ವಹಿಸಿದ, ಮಾವ್ರೋರವರು ಆರಂಭಿಸಿದ 'ಹೊಸ ಜನತೆಯ ಅಧ್ಯಯನ ಸಂಘ'ದ ಸದಸ್ಯರ ನಡುವೆ ಮಾರ್ಕ್ಸ್ ವಾದದ ಪರ- ವಿರೋಧೀ ವಾಗ್ವಾದಗಳು ನಡೆದವು.ಅರ್ಧ ಭಾಗಕ್ಕಿಂತ ಹೆಚ್ಚು ಸದಸ್ಯರು ಮಾರ್ಕ್ಸ್ ವಾದಕ್ಕೆ ಒಲಿದರು. ಹೀಗೆ ಅಲ್ಲಿಯ ರಾಜಧಾನಿ ಚಾಂಗ್ ಶಾ ದಲ್ಲಿ 1920 ರ ಅಕ್ಟೋಬರ್ ನಲ್ಲಿ ಒಂದು ಮಾರ್ಕ್ಸ್ ವಾದೀ ಗುಂಪನ್ನು ರಚಿಸಿದರು. ಜೊತೆಯಲ್ಲಿ ರಷ್ಯದ ಕ್ರಾಂತಿಯ ಬಗ್ಗೆ ಅಧ್ಯಯನ ಮಾಡುವುದಕ್ಕೆ,ರಷ್ಯಕ್ಕೆ ಹೋಗಿ ಅಧ್ಯಯನ ಮಾಡುವುದಕ್ಕೆಕೂಡ ಸಂಘಗಳನ್ನು ರಚಿಸಿದರು. ಕಮ್ಯುನಿಸ್ಟ್ ಗುಂಪಿನ ಕೆಲಸದ ಮುಂದುವರಿಕೆಯಾಗಿ ಹುನಾನ್ ನಲ್ಲಿ ಚೀನಾದ ಸಮಾಜವಾದೀ ಯುವ ದಳದ ಘಟಕವನ್ನು ಪ್ರಾರಂಭಿಸಿದರು. ಈ ಯುವ ದಳ 1922 ರ ವೇಳೆಗೆ ಇಡೀ ಚೀನಾದಲ್ಲಿಯೇ ಅತಿ ದೊಡ್ಡ ಘಟಕವಾಯಿತು.

ಲಿಯು ಶಾವ್ರೋಕಿ,ಚೀನಾದಲ್ಲಿ ಮಾವ್ರೋ ಮತ್ತು ಝೌ ಎನ್ ಲಾಯ್ ರ ನಂತರ ಅತಿ ಪ್ರಸಿದ್ಧ ನಾಯಕರು 'ಹೊಸ ಜನತೆಯ ಅಧ್ಯಯನ ಸಂಘ' ಕ್ಕೆ ಸೇರಿದರು.ಸಮಾಜವಾದೀ ಯುವ ದಳವನ್ನು ಸಂಘಟಿಸುವ ಜವಾಬ್ದಾರಿ ನಿರ್ವಹಿಸಿದರು.ನಂತರ ರಷ್ಯಕ್ಕೆ ಹೋಗಿ ಅಧ್ಯಯನ ಮಾಡುವುದಕ್ಕೆ ಆಯ್ಕೆಯಾದರು.

ಸಾಂಸ್ಕೃತಿಕ ಪುಸ್ತಕಗಳ ಮಳಿಗೆ

" ಶಿಕ್ಷಣವೆಂದರೆ ಸ್ವ-ಶಿಕ್ಷಣ.ಸ್ವ ಎಚ್ಚರವನ್ನು ಪ್ರಚೋದಿಸಲು ಪುಸ್ತಕಗಳನ್ನು ಒದಗಿಸ ಬೇಕು " ಇದು ಮಾವ್ರೋರವರ ವಿಚಾರ. ಪುಸ್ತಕಗಳ ಮೂಲಕ ಸ್ವ-ಅಧ್ಯಯನದ ಬಗ್ಗೆ ಮಾವ್ರೋರ ಅನುಭವ ನಮಗೆಲ್ಲರಿಗೂ ಈಗ ತಿಳಿದದ್ದೇ ಆಗಿದೆ.ಚಾಂಗ್ ಶಾದಲ್ಲಿ ಒಂದು ಪುಸ್ತಕದ ಮಾರಾಟ ಮಳಿಗೆಯನ್ನು ಆರಂಭಿಸಿದರು. ಈ ಮಳಿಗೆಯ ಉದ್ಘಾಟನೆಗೆ ಅಲ್ಲಿಯ ಅತಿ ಪ್ರಬಲ ಪಾಳೆಯಗಾರನನ್ನೇ ಕರೆದರು. ಇದು ಆ ಪುಸ್ತಕ ಮಳಿಗೆ ಅಧಿಕಾರಿಗಳ ಕಾಕ ದೃಷ್ಠಿಗೆ ಬೀಳದೆ ಬಹಳ ಕಾಲ ಉಳಿಯಲು ನೆರವಾಯಿತು.ಇದು ಹುನಾನ್ ರಾಜ್ಯಕ್ಕೆ ಮಾತ್ರವಲ್ಲದೆ ಚೀನಾ ದಕ್ಷಿಣ ಬಾಗದ ಇತರ ರಾಜ್ಯಗಳಿಗೂ ಮಾರ್ಕ್ಸ್ ವಾದೀ ಸಾಹಿತ್ಯವನ್ನು ಒದಗಿಸುವ ಮಳಿಗೆಯಾಯಿತು ಮಾತ್ರವಲ್ಲ, ಹಲವು ವರ್ಷಗಳ ಕಾಲ ಒಂದು ರಹಸ್ಯ ಸಂಪರ್ಕ ಜಾಲದ ಕೇಂದ್ರವಾಯಿತು. ವರ್ಷದ ಕೊನೆಯೊಳಗೆ ಹುನಾನ್ ರಾಜ್ಯವೊಂದರಲ್ಲಿಯೇ ಒಂದು ಡಜನ್ ಪುಸ್ತಕದ ಅಂಗಡಿಗಳನ್ನು ಆರಂಭಿಸಲಾಯಿತು.

ಸಾಮೂಹಿಕ ಶಿಕ್ಷಣ ಕೇಂದ್ರಗಳು

ದುಡಿಯುವ ಜನರನ್ನು ಸಂಘಟಿಸಲು ,ಅವರಲ್ಲಿ ಎಚ್ಚರವನ್ನು ಮೂಡಿಸಲು ಮಾವ್ರೋರವರು ಆರಂಭಿಸಿದ ಮತ್ತೊಂದು ಕಾರ್ಯಕ್ರಮ ಸಮೂಹ ಶಿಕ್ಷಣ. ಇದು ಕೂಡ ಅವರು ವಿದ್ಯಾರ್ಥಿಯಾಗಿದ್ದಾಗಲೇ ನಡೆಸಿದ ಯಶಸ್ವಿ ಚಟುವಟಿಕೆಯ ಅನುಭವದ ಫಲ. ಈ ಬಾರಿ ಮತ್ತಷ್ಟು ಸ್ಪಷ್ಟ ಉದ್ದೇಶ-ಕೇವಲ ಓದು,ಬರಹ,ಲೆಕ್ಕಗಳು ಪತ್ರಿಕೆಯ ಓದು ಚರ್ಚೆಗಳು ಮಾತ್ರವಲ್ಲದೆ ಶೋಷಣೆಯ,ಶೋಷಕರ ಬಗೆಗಿನ ಅರಿವು ಮೂಡಿಸುವುದು, ಅವರನ್ನು ಸಂಘಟನೆಯ ತೆಕ್ಕೆಗೆ ತರುವ ಗುರಿ ಉಳ್ಳ ಕಾರ್ಯಕ್ರಮವಾಯಿತು.

ಸಮೂಹ ಶಿಕ್ಷಣ ಕಾರ್ಯಕ್ರಮವು ಹುನಾನ್ ನಲ್ಲಿದ್ದ ವಿವಿಧ ಕೆಲಸಗಾರರ ಸಣ್ಣ ಸಣ್ಣ ಸಂಘಗಳು, ಗುಂಪುಗಳು ಕಸಬುದಾರರ ಕೂಟಗಳು ಇವುಗಳನ್ನೆಲ್ಲ ಒಂದೆಡೆ ತರುವ,ಅವರ ನಡುವೆ ಐಕ್ಯತೆಯನ್ನು ಬೆಸೆಯುವ ಕ್ರಿಯೆಯೂ ಆಗಿತ್ತು.ಸ್ವತಃ ಮಾವ್ರೋರವರೇ ಈ ಪಾಠಶಾಲೆಗೆ ಪಠ್ಯ ಪುಸ್ತಕಗಳನ್ನು ಬರೆದರು.ಗಣಿ ಕಾರ್ಮಿಕರು,ಕಲ್ಲು ಕುಟಿಗರು ಇವರು ದಿನ ನಿತ್ಯ ಬಳಸುವ ಭಾಷೆಯನ್ನು ಬಳಸಿದರು. ಲೆಕ್ಕಗಳೂ ಕೂಡ ಅಷ್ಟೇ. ಶಿಕ್ಷಣವೇ ಒಂದು ಚಳುವಳಿಯಾದ ಈ ಕಾರ್ಯಕ್ರಮದಲ್ಲಿ 1922 ರ ವೇಳೆಗೆ 30-40,000 ಕಾರ್ಮಿಕರು ಹಾಗು ಕಸಬುದಾರರು ಭಾಗವಹಿಸಿದ್ದರು. ಈ ಚಳುವಳಿಯಲ್ಲಿ ಮಾವ್ರೋರವರ ಪ್ರೀತಿಯ ಪತ್ನಿಯೂ ಜೊತೆಗೂಡಿದರು. ಅದರಿಂದಾಗಿ ಶಿಕ್ಷಣ ಕೇವಲ ಶಿಕ್ಷಣವಾಗಿರದೇ ಹಲವು ಆಯಾಮಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು.



ಲಿ ಶಾ ವೋಕಿ

ಈ ಚಟುವಟಿಕೆಗಳನ್ನು ಆರಂಭಿಸಿದ ನಂತರ 1920 ರ ನವೆಂಬರ್ ನಲ್ಲಿ ರಷ್ಯನ್ ಕ್ರಾಂತಿಯ ದಿನಾಚರಣೆಯನ್ನು ಸಂಘಟಿಸಿದರು. ಅಂದಿನಿಂದಲೇ ' ಕಾರ್ಮಿಕ ಪ್ರಪಂಚ " ಎಂಬ ವಾರಪತ್ರಿಕೆಯನ್ನು ಆರಂಭಿಸಿದರು. ಈ ಪತ್ರಿಕೆಯಲ್ಲಿ " ಪ್ರಭುತ್ವ ಮತ್ತು ಕ್ರಾಂತಿ" ಎಂಬ ಲೆನಿನರ ಪ್ರಸಿದ್ಧ , ಕ್ರಾಂತಿಯ ಮೂಲಭೂತ ತಿಳುವಳಿಕೆಯನ್ನು ನೀಡುವ ಪುಸ್ತಕವನ್ನು ಧಾರಾವಾಹಿಯಾಗಿ ಪ್ರಕಟಿಸಿದರು. 5000 ಪ್ರತಿಗಳಷ್ಟು ಮಾರಾಟವಾಗುತ್ತಿದ್ದ ಈ ಪತ್ರಿಕೆಯನ್ನು ಕೇವಲ ನಾಲ್ಕು ಸಂಚಿಕೆಗಳ ನಂತರ ನಿಷೇಧಿಸಲಾಯಿತು. ಆದರೆ ಆ ವೇಳೆಗೆ " ಕಮ್ಯುನಿಸ್ಟ್ ಮಾಸಿಕ " ಎಂಬ ಪತ್ರಿಕೆಯನ್ನು ಆರಂಭಿಸಲಾಗಿತ್ತು. ಅದರ ಪ್ರಕಟಣೆ ಕೆಲ ಕಾಲ ಮುಂದುವರೆಯಿತು. ಮಾವ್ರೋರವರು ಇತರ ಪತ್ರಿಕೆಗಳಿಗೂ ಲೇಖನಗಳನ್ನು ಬರೆಯುವುದು,ಜನರನ್ನು ಎಚ್ಚರಿಸುವುದು ಮುಂದುವರೆಸಿದ್ದರು.

ಹೀಗೆ 1921 ರ ಆರಂಭದ ವೇಳೆಗೆ ಚೀನಾದ ವಿವಿಧ ಭಾಗಗಳಲ್ಲಿ 5 ಕಮ್ಯುನಿಸ್ಟ್ ಗುಂಪುಗಳು ಅಸ್ತಿತ್ವಕ್ಕೆ ಬಂದವು. ಅದೇ ವೇಳೆಗೆ ವಿದೇಶಗಳಿಗೆ ಅಧ್ಯಯನಕ್ಕೆಂದು ಅಧ್ಯಯನ ಸಂಘಗಳ ಮೂಲಕ ತೆರಳಿದ್ದ ವಿದ್ಯಾರ್ಥಿಗಳು ತಮ್ಮ ದೇಶದಲ್ಲಿ ನಡೆಯುತ್ತಿದ್ದ ಬೆಳವಣಿಗೆಗಳನ್ನು ಗಮನಿಸುತ್ತಿದ್ದರು. ಅವರು ಅಲ್ಲಲ್ಲಿಯೇ ಕಮ್ಯುನಿಸ್ಟ್ ಗುಂಪುಗಳನ್ನು ರಚಿಸಿಕೊಂಡರು. ಝೌ ಎನ್ ಲಾಯ್ ರವರು ಫ್ರಾನ್ಸ್ ದೇಶದಲ್ಲಿ , ಲಿ ಯು ಶಾವ್ರೋಕಿಯವರು ರಷ್ಯಾದಲ್ಲಿ, ಮತ್ತೊಬ್ಬ ಅಪ್ರತಿಮ ನಾಯಕ ಕೆಂಪು ಸೈನ್ಯದ ಸೇನಾನಿ ಝು ಡೆ ಜರ್ಮನಿಯಲ್ಲಿ ಕಮ್ಯುನಿಸ್ಟ್ ಗುಂಪುಗಳನ್ನು ರಚಿಸಿದರು. ಒಂದು ಗುಂಪು ಜಪಾನ್ ನಲ್ಲಿ ರೂಪುಗೊಂಡಿತು. ಒಟ್ಟು ಒಂಬತ್ತು ಗುಂಪುಗಳು ರೂಪುಗೊಂಡವು. ಇವು 1921 ರಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷದ ಅಡಿಪಾಯವಾದವು.

ಮಾವ್ರೋರವರ ವಿವಾಹ ಮತ್ತು ಕುಟುಂಬ ಜೀವನ

ಈ ಬಾರಿ ಚಾಂಗ್ ಶಾಕ್ಕೆ ಮರಳಿದ ಮಾವ್ರೋರವರು ಕಮ್ಯುನಿಸ್ಟ್ ಪಕ್ಷವನ್ನು ರೂಪಿಸಲು ಮಾಡುತ್ತಿದ್ದ ಎಡೆಬಿಡದ ಚಟುವಟಿಕೆಗಳ ನಡುವೆಯೇ ತಾವು ಓದುತ್ತಿದ್ದ ಶೈಕ್ಷಣಿಕ ಕಾಲೇಜಿಗೆ ಅಧೀನವಾಗಿದ್ದ ಪ್ರಾಥಮಿಕ ಶಾಲೆಗೆ ನಿರ್ದೇಶಕರಾಗಿ ಕೆಲಸಕ್ಕೆ ಸೇರಿಕೊಂಡರು. ಅದರಲ್ಲಿ ಒಂದಿಷ್ಟು ಸಂಬಳ ಕೈಗೆ ಸಿಗುವಂತಾಯಿತು. ಆ ವೇಳೆಗೆ ಮಾವ್ರೋರವರ ಮನದನ್ನೆ ತಂದೆಯನ್ನು ಕಳೆದುಕೊಂಡು ತಾಯಿಯೊಡನೆ ಬೀಜಿಂಗ್ ನಿಂದ ಬಂದು ತಮ್ಮ ಊರೂ ಆಗಿದ್ದ ಚಾಂಗ್ ಶಾದಲ್ಲಿ ನೆಲೆಸಿದ್ದರು. ಆ ಚಳಿಗಾಲದ ಸಮಯದಲ್ಲಿ ಮಾವ್ರೋ ತಮ್ಮ ಪ್ರೀತಿಯ ಹುಡುಗಿ ಯಾಂಗ್ ಕೈ ಹುಯಿಯವರನ್ನು ಮದುವೆಯಾದರು. ನಗರದ ಹೊರವಲಯದಲ್ಲಿ ತರಕಾರಿ ಹೊಲಗಳ ಮಧ್ಯೆ ಒಂದು ಪುಟ್ಟ ಮನೆಯನ್ನು ಬಾಡಿಗೆಗೆ ಪಡೆದು ಸಂಸಾರ ಹೂಡಿದರು. ' ಸ್ವಚ್ಛ ನೀರಿನ ಕೊಳದ ಮನೆ ' ಎಂದು ಕರೆಯುತ್ತಿದ್ದ ಈ ಮನೆ ಗುಪ್ತ ಸಭೆಗಳಿಗೆ ಹೇಳಿ ಮಾಡಿಸಿದಂತಿತ್ತು.

ಸುಂದರಿಯೂ ಬುದ್ಧಿವಂತೆಯೂ ಆಗಿದ್ದ ಯಾಂಗ್ ಕೈ ಹುಯಿ ಕಮ್ಯುನಿಸ್ಟ್ ತತ್ವಗಳಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು.ಕಾರ್ಮಿಕರ ಸಾಮೂಹಿಕ ಶಿಕ್ಷಣ, ಸ್ವ-ಶಿಕ್ಷಣ,ಯುವ ಜನ ಚಳುವಳಿಗಳಲ್ಲಿ ತೊಡಗಿಸಿಕೊಂಡರು. ಮುಂದೆ 1922ರಲ್ಲಿ ಪಕ್ಷದ ಸದಸ್ಯರಾದ ಇವರು ಅನೇಕ ರಹಸ್ಯ ಸಂಪರ್ಕಗಳ ಕೆಲಸಕ್ಕಾಗಿ ಶಾಂಘೈ ಮೊದಲಾದ ನಗರಗಳಿಗೆ ಹೋಗಿ ಬರುತ್ತಿದ್ದರು.

ಮಾವ್ರೋ ಮತ್ತು ಯಾಂಗ್ ರವರಿಗೆ ಇಬ್ಬರು ಗಂಡು ಮಕ್ಕಳು ಜನಿಸಿದರು.ಮಾವ್ರೋ ಆ?ಯನ್ ಯಿಂಗ್ 1929ರಲ್ಲಿ ಜನಿಸಿ 1950

ಪುಟ 10ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editos S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH